ಐಕ್ಯರಂಗ

ಸಂಪುಟ 25 ಸಂಚಿಕೆ 11 ಮಾರ್ಚ್ 16, 2003 ಬೆಲೆ ರೂ. 5.00



ಮುಂಬೆಳಕು

ಅಂತರ್ರಾಷ್ಟ್ರೀಯ ಮಹಿಳಾ ದಿನ
ವಿಶೇಷ ಸಂಚಿಕೆ



ಸಮಾನತೆ - ನ್ಯಾಯಕ್ಕಾಗಿ ನಿಲ್ಲದ ಹೋರಾಟ

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ವಾರಪತ್ರಿಕೆ

ಸಂಪುಟ 25 ಸಂಚಿಕೆ 11 ಮಾರ್ಚ್ 16, 2003 ಬೆಲೆ ರೂ. 5.00



'ಮುಂಬೆಳಕು'

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ವಿಶೇಷ ಸಂಚಿಕೆ

ಸಂಪಾದಕೀಯ ಕಛೇರಿ


ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮ ನಗರ,
ಬೆಂಗಳೂರು - 27
ದೂರವಾಣಿ : 2236462
ಇ-ಮೇಲ್ : samabalu@bgl@vsnl.net.in


PRBDECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಒಳಪುಟಗಳಲ್ಲಿ...

ಸಂಪಾದಕೀಯ.....

ಜಾಗೃತಿಯ ಮುಂಬೆಳಕು





ಎಸ್.ವೈ.ಗುರುಶಾಂತ್

ಮಾರ್ಚ್ -8 ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತೀಗ ಬಂದಿದೆ. 'ಜಗತ್ತಿನ ಶ್ರಮಿಕರೇ ಒಂದಾಗಿ' ಎಂದಂತೆ 'ಜಗತ್ತಿನ ಮಹಿಳೆಯರೇ ಒಂದಾಗಿ' ಎಂಬುದು ಈ ದಿನದ ಘೋಷಣೆ. ಶ್ರಮಿಕವರ್ಗಕ್ಕೆ ಮೇ ದಿನದಂತೆ, ಶ್ರಮಿಕ, ಶೋಷಿತ ಮಹಿಳೆಯರಿಗೆ ಮಾರ್ಚ್-8 ಇದೊಂದು ಸಂಭ್ರಮದ ದಿನ. ಹಾಗೆಯೇ ಸಂಘರ್ಷಕ್ಕಾಗಿ ಸಂಕಲ್ಪಿಸುವ ದಿನವೂ ಹೌದು. ಮಾನವ ಸಮಾಜದ ಇತಿಹಾಸದುದ್ದಕ್ಕೂ ಮಹಿಳೆಯರ ಅಗಾಧ ಸಾಧನೆ-ಮುನ್ನಡೆಗಳನ್ನು ಗುರುತಿಸಿ, ಅಚ್ಚಳಿಯದ ನೆನಪುಗಳನ್ನು ಮೆಲುಕುಹಾಕುವ ದಿನ. ಶತಶತಮಾನಗಳುದ್ದಕ್ಕೂ ವಿಮೋಚನಾ ಹೋರಾಟದ ತ್ಯಾಗ ಬಲಿದಾನಗಳು ನೆನಪಿಸಿಕೊಂಡು, ಪ್ರಸಕ್ತ ಸವಾಲುಗಳೆದುರು ಸಮರಹೂಡುವ ಸಂಕಲ್ಪದ ದಿನ.

ಅಂತೆಯೇ ಜಗದ ತುಂಬಾ ನ್ಯಾಯಕ್ಕಾಗಿ ನಿಂತವರ ನಡುವಿನ ಗೆಳೆತನದ ಹೆಗಲ ಬಳ್ಳಿ ಬೆಸೆಯುವ -ಬೆಸೆದು ಬೆಳೆವ ದಿನ.

ಮಾರ್ಚ್-8 ಅಂತರಾಷ್ಟ್ರೀಯ ಮಹಿಳಾ ದಿನ ಎಂದು ಘೋಷಿತವಾದದ್ದೇ ರೋಮಾಂಚನಕಾರಿ ಇತಿಹಾಸ. 19ನೆಯ ಶತಮಾನದ ಆರಂಭ ಯುರೋಪ್ ಮತ್ತು ಸುತ್ತಲಿನಲ್ಲಿ ಅತ್ಯಂತ ಸಾಮಾಜಿಕ- ಆರ್ಥಿಕ ಬಿಕ್ಕಟ್ಟುಗಳನ್ನು, ಅನ್ಯಾಯ, ಅಸಮಾನತೆ, ಸುಲಿಗೆ ಶೋಷಣೆಗಳೆದುರು ಜನತೆಯ ಬಂಡಾಯಗಳ ಪ್ರಚಂಡ ಬಿರುಗಾಳಿಯೇಳುತ್ತಿದ್ದ ಕಾಲಘಟ್ಟ. ಕೈಗಾರಿಕಾ ಕ್ರಾಂತಿಯ ಫಲವಾಗಿ ವಿಸ್ತೃತಗೊಂಡ ದುಡಿವ ಅವಕಾಶಗಳು ಉತ್ಪಾದನಾ ವ್ಯವಸ್ಥೆ ವಿಸ್ತಾರ ಮಹಿಳೆಯರನ್ನು ಉದ್ದಿಮೆಗಳಲ್ಲಿ ದುಡಿಯುವಂತಾಗಿಸಿತು. ಅದರಲ್ಲಿ ಯಾರಿಗೂ ಕಡಿಮೆಯಿಲ್ಲದಂತೆ ದುಡಿದು ಸಂಪತ್ತು ಸೃಷ್ಟಿಸಿ ಹೆಗಲಕೊಟ್ಟು ಪುರುಷರಿಗೆ ಸಮನಾಗಿ ನಿಂತರು. ಆದರೆ ಮಾಲೀಕರು- ಪ್ರಭುತ್ವ ಇದನ್ನು ಮಾನ್ಯ ಮಾಡಲಿಲ್ಲ. ಪುರುಷರು- ಮಹಿಳೆಯರು ಬೇರೆಯೆಂದು ಲಿಂಗ ತಾರತಮ್ಯ ಮಾಡಿದರು. ಕೊಡುವ ಕೂಲಿಯಲ್ಲಿ ಪುರುಷರಿಗೆ ಹೆಚ್ಚು, ಮಹಿಳೆಯರು ಕಡಿಮೆಯಲ್ಲವೆ ಎಂದು ಅವರಿಗೆ ಕಡಿಮೆ ನೀಡಿಕೆ. ಕೆಲಸದ ಹಂಚಿಕೆಯಲ್ಲಿ ತಾರತಮ್ಯ. ರಾತ್ರಿ ವೇಳೆಯಲ್ಲೂ ದುಡಿಯಲೇಬೇಕಾದ ಒತ್ತಡ. ಶೌಚಾಲಯ-ವಿಶ್ರಾಂತಿ ಸ್ಥಳ, ನೀಡಿಕೆಯಲ್ಲಿಯೂ ವಿಪರೀತ ಸಮಸ್ಯೆ. ಹೀಗೆ ಕೆಲಸದ ಸ್ಥಳದಲ್ಲಿ ನೂರೆಂಟು ದಬ್ಬಾಳಿಕೆ. ಇದು ದುಡಿವ ರಂಗದಲ್ಲಾದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಮಹಿಳೆಗೆ ಎರಡನೇ ದರ್ಜೆ ನಾಗರಿಕರು! ಅಮೇರಿಕಾ, ಯುರೋಪ್‌ನಾದ್ಯಂತ ಚುನಾವಣೆಯಲ್ಲಿ ಓಟು ಹಾಕುವ ಹಕ್ಕು ಇಲ್ಲವೇ ಇಲ್ಲ.

ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಹುಟ್ಟಿದ್ದು ಆಧುನಿಕ ಕಾರ್ಮಿಕವರ್ಗ. ವರ್ಗ ಅಸಮಾನತೆ ವೈರುಧ್ಯದ ವ್ಯವಸ್ಥೆಯಲ್ಲಿ ಜಾಗೃತ ಶ್ರಮಿಕವರ್ಗ ತನ್ನ ಹಕ್ಕು, ಬದುಕಿನ ಉಳಿವಿಗಾಗಿ ಸಂಘರ್ಷ ಹೋರಾಟ ನಡೆಸುತ್ತಿತ್ತು. ಕಾರ್ಮಿಕ ಸಂಘಗಳು ಉದಯವಾಗಿ, ಹಲವಾರು ಧೀಮಂತ ಹೋರಾಟಗಳನ್ನು ನಡೆಸಿದ್ದವು. ಫ್ರೆಂಚ್ ಕ್ರಾಂತಿಯ ಪ್ರಭಾವ, ಕಾರ್ಮಿಕವರ್ಗಕ್ಕೆ ಮಾರ್ಕ್ಸ್, ಏಂಗೆಲ್ಸರ ಮಾರ್ಗದರ್ಶನ, ಪ್ಯಾರಿಸ್ ಕಮ್ಯೂನ್‌ನ ಉಜ್ವಲ ಹೋರಾಟದ ಉತ್ಸಾಹ, ಅದರ ಅಪಾರ ಅನುಭವ ದುಡಿವವರ್ಗಕ್ಕೆ ವಿಶೇಷವಾಗಿ ಮಹಿಳಾ ಕಾರ್ಮಿಕ ವರ್ಗಕ್ಕೆ ದೊರೆತು ಸ್ವಾತಂತ್ರ್ಯ, ಸಮಾನತೆಯ ಬಯಕೆ ಗರಿಗೆದರುವಂತಾಗಿತ್ತು. ಪ್ಯಾರಿಸ್ ಕಮ್ಯೂನ್‌ನಂತಹ ಮಹಾನ್ ಸಮರದಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯ ಏನೆಂದು ತೋರಿಸಿದ್ದರು.

ಕಮ್ಯೂನ್‌ನ ಹೋರಾಟ ದಮನದ ಭಾಗವಾಗಿದ್ದ 'ಯುದ್ಧ ಆಯೋಗ'

ದ ಮುಂದೆಯೇ 1051 ಮಹಿಳಾ ಖೈದಿಗಳನ್ನು ವಿಚಾರಣೆಗೆ ತರಲಾಗಿತ್ತೆಂದರೆ ಈ ಸಂಖ್ಯೆ ಮತ್ತು ಹೋರಾಟದ ಶಕ್ತಿ ಅರ್ಥವಾದೀತು. ಇಂತಹ ಹಿನ್ನೆಲೆಯಲ್ಲಿಯೇ 1882 ರಲ್ಲಿ ಜರ್ಮನಿಯ ಕಮ್ಯುನಿಸ್ಟ್ ನಾಯಕಿ ಕ್ಲಾರಾ ಐಸ್ನರ್ ಜೆಟ್ಕಿನ್ ಪ್ಯಾರೀಸ್‌ಗೆ ಭೇಟಿ ನೀಡಿದ್ದು. ತನ್ನ ಸೈದ್ಧಾಂತಿಕ ಹರವನ್ನು ಅಲ್ಲಿ ಆಳಗೊಳಿಸಿಕೊಂಡಿದ್ದು.

ಹಾಗೆಯೇ 1889 ರಲ್ಲಿ ಪ್ಯಾರೀಸ್‌ನಲ್ಲಿ ಸ್ಥಾಪಿತವಾದ ಎರಡನೆ ಅಂತರಾಷ್ಟ್ರೀಯ ದಲ್ಲಿ ಪುರುಷ ಮತ್ತು ಮಹಿಳೆಯರಿಗೂ ಸಮಾನ ಹಕ್ಕು ಪ್ರಶ್ನೆಯನ್ನು ಎತ್ತಲಾಯಿತು. ಇದು ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರಥಮ ಧ್ವನಿ. ಅಂತೆಯೇ ಮಹಿಳೆಯರಿಗೆ ಮತದಾನದ ಹಕ್ಕನ್ನು ಒಳಗೊಂಡಂತೆ ಈ ಪ್ರಶ್ನೆಯ ಮೇಲಿನ ಪ್ರಚಾರಾಂದೋಲನದ ನೇತೃತ್ವವಹಿಸಿದರು ಕ್ಲಾರಾ. 1902, 1910 ರಲ್ಲಿ..... ಹೀಗೆ ಆರು ಸಮಾಜವಾದಿ ಮಹಾಧಿವೇಶನಗಳಲ್ಲಿ ಈ ನಿರ್ಣಯ ಅಂಗೀಕೃತವಾಯಿತು.

1908 ರ ಫೆಬ್ರವರಿ ಕೊನೆ ರವಿವಾರ, ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಸಮಾಜವಾದಿ ಮಹಿಳೆಯರು ಮೊದಲ ಮಹಿಳಾ ದಿನವನ್ನು ಆಚರಿಸಲು ಮುಂದಾದರು. ಅಂದು ಮಹಿಳೆಯರ ಮತದಾನದ ಹಕ್ಕು, ರಾಜಕೀಯ -ಆರ್ಥಿಕ ಹಕ್ಕುಗಳಿಗಾಗಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಮ್ಯಾನ್ ಹಟನ್ ನಗರದಲ್ಲಿ 2000ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದ್ದರು.

1908 ಮಾರ್ಚ್ 8ರಂದು ನ್ಯೂಯಾರ್ಕಿನಲ್ಲಿ ಹೊಲಿಗೆ (ಗಾರ್ಮೆಂಟ್ಸ್) ಕಾರ್ಖಾನೆಗಳ ಮಹಿಳಾ ಕಾರ್ಮಿಕರು 10 ಗಂಟೆ ಕೆಲಸ, ಲಿಂಗತಾರತಮ್ಯ ವಿರುದ್ಧ ಮತ್ತಿತರೆ ಯೂನಿಯನ್‌ನ ಬೇಡಿಕೆ, ದೇಶದ ಚುನಾವಣೆಯಲ್ಲಿ ಮತದಾನದ ಹಕ್ಕಿಗಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಆಳುವವರಿಂದ ತೀವ್ರ ದಮನ, ದಬ್ಬಾಳಿಕೆ ಎದುರಿಸಬೇಕಾಯಿತು.

ಈ ಮಹತ್ವದ ದಿನದ ನೆನಪಿನಲ್ಲಿ 1910 ರಲ್ಲಿ ಸೇರಿದ್ದ ಅಂತರಾಷ್ಟ್ರೀಯ ಸಮಾಜವಾದಿ ಮಹಿಳಾ ಮಹಾಧಿವೇಶನವು (ಕೋಪನ್ ಹೆಗನ್) ಆ ದಿನವನ್ನೇ ಅಂತರಾಷ್ಟ್ರೀಯ ಮಹಿಳಾ ದಿನವೆಂದು ನಿರ್ಧರಿಸಿತು. 17 ದೇಶಗಳ 100 ಮಹಿಳಾ ಪ್ರತಿನಿಧಿಗಳು ಇದನ್ನು ಒಕ್ಕೊರಲಿನಿಂದ ಅಂಗೀಕರಿಸಿದರು. ಈ ಸಮ್ಮೇಳನ ಪುರುಷರಿಗಿರುವಂತ ವಯಸ್ಕ ಮತದಾನದ ಹಕ್ಕು ಇರಬೇಕೆಂದೂ ಹಾಗೂ ಮತದಾನಕ್ಕೆ ಆಸ್ತಿಯ ಶರತ್ತು ಇರಕೂಡದೆಂದು, ಹೆರಿಗೆ ಸೌಲಭ್ಯಗಳು, ರಾತ್ರಿಪಾಳಿ ಕೆಲಸ ರದ್ದತಿ, ಮುಂತಾದ ಬೇಡಿಕೆಗಾಗಿಯೇ ಆಗ್ರಹಿಸಲಾಯಿತು. ಇದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ.

ಇಂದಿಗೆ 9 ದಶಕಗಳು ಸರಿದಿವೆ. ಈ ಅವಧಿಯಲ್ಲಿ ಹಲವಾರು ಕ್ರಾಂತಿಕಾರಿ ಬದಲಾವಣೆಗಳಾಗಿವೆ. ರಶಿಯಾದ ಮಹಾನ್ ಅಕ್ಟೋಬರ್ ಕ್ರಾಂತಿ, ಚೀನಾ ಕ್ರಾಂತಿ, ವಿಯೆಟ್ನಾಂ, ಕ್ಯೂಬಾ ಹೀಗೆ ಎಲ್ಲಾ ಮಹತ್ವ ಕ್ರಾಂತಿಗಳು, ರಾಷ್ಟ್ರೀಯ ವಿಮೋಚನಾ ಹೋರಾಟಗಳು ಸಂಭವಿಸಿವೆ. ಈ ನಿರ್ಣಾಯಕ ಹೋರಾಟಗಳಲ್ಲಿ ಮಹಿಳೆಯರ ಪಾತ್ರ ಅತ್ಯಂತ ಗಮನಾರ್ಹ ಹಾಗೂ ಉನ್ನತವಾದುದು.

ಇಂದು ಜಾಗತಿಕ ಅಧಿಪತ್ಯಕ್ಕಾಗಿ ಅಮೆರಿಕ ಹೊಸ ದಾಳಿಗಳನ್ನು ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹರಿಯಬಿಟ್ಟಿದೆ. ತೈಲಕ್ಕಾಗಿ ಇರಾಕ್ ಮೇಲೆ ಯುದ್ಧ ಸಾರಲು ಹೊರಟಿದೆ. ಸಮಾಜವಾದಿ ರಾಷ್ಟ್ರಗಳಿಗೆ ಬೆದರಿಕೆ ಒಡ್ಡುತ್ತಿದೆ. ಈಗಾಗಲೇ ಹಲವಾರು ಗಂಭೀರ ಸಂಕಷ್ಟಗಳ ಸ್ಥಿತಿಯಲ್ಲಿರುವ ಮಹಿಳೆಯರ ಸ್ಥಿತಿಗತಿಯು ಜಾಗತೀಕರಣ - ಉದಾರೀಕರಣದ ಪ್ರಕ್ರಿಯಿಂದಾಗಿ ಇನ್ನೂ ಘೋರವಾಗಲಿವೆ. ಭಾರತದಲ್ಲಿ ಕೋಮುವಾದ, ಧಾರ್ಮಿಕ ಮೂಲಭೂತವಾದ, ಸ್ಥಾಪಿತ ಹಿತಾಸಕ್ತಿಗಳು, ಜಾತೀಯ ಶಕ್ತಿಗಳ ಆಕ್ರಮಣ ತೀವ್ರವಾಗುತ್ತಿದೆ. ಇದಕ್ಕೆ ಮಹಿಳೆ, ಮಕ್ಕಳು ಅತ್ಯಧಿಕವಾಗಿ ಬಲಿಗಳು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಎಲ್ಲಾ ಧಾಳಿಗಳನ್ನು ಹಿಮ್ಮೆಟ್ಟಿಸಲೇಬೇಕು. ಪರಿಸ್ಥಿತಿ ಹೀಗಿರುವಾಗಲೂ ಜಗತ್ತಿನಲ್ಲಿ ಪ್ರತಿರೋಧದ ಶಕ್ತಿಯೂ ಗಮನಾರ್ಹವಾಗಿ ಬೆಳೆಯುತ್ತಿದೆ. ವಿಶ್ವದಾದ್ಯಂತ ಜಾಗತೀಕರಣದ ವಿರುದ್ಧ ನಡೆಯುತ್ತಿರುವ ಹೋರಾಟಗಳು, ಇರಾಕ್ ಮೇಲಿನ ಅಮೆರಿಕಾದ ಯುದ್ಧ ವಿರುದ್ಧ ಎದ್ದಿರುವ ಪ್ರತಿಭಟನೆಗಳ ಮಹಾಪೂರ ಮತ್ತು ಮಹಿಳೆಯರ ಹಕ್ಕುಗಳಿಗಾಗಿ, ತಾರತಮ್ಯ, ದೌರ್ಜನ್ಯಗಳ ವಿರುದ್ಧ ಸಮಾನತೆ - ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟಗಳು ಹೊಸ ಆಶಾಕಿರಣಗಳಾಗಿವೆ. ಇವುಗಳನ್ನು ವಿಸ್ತೃತಗೊಳಿಸಬೇಕಿದೆ.

ಈ ಹಿನ್ನೆಲೆಯಲ್ಲಿ ದುಡಿವ ಜನರ ಪ್ರಾಣಮಿತ್ರನಾದ ಐಕ್ಯರಂಗ ಪತ್ರಿಕೆಯು, ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ವಿಶೇಷ ಸಂಚಿಕೆ ತರಲು ಮುಂದಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಸಿದ್ದಗೊಂಡ ಸಂಚಿಕೆಯಿದು. ಇಂತಹ ಪ್ರಸ್ತಾಪ ಬಂದಾಗ ಸಾಹಸಕ್ಕೆ ಇದರ ಯಶಸ್ಸಿಗೆ ಕೈಜೋಡಿಸಿದವರು ಅನೇಕ ಒಡನಾಡಿಗಳು.

ಈ ಸಂಚಿಕೆಯ ಪ್ರಯೋಜನಕಾರಿ ಯಾದೀತೆಂದು ಚಿಂತನೆಯ ಬೆಳಕು ತೋರೀತೆಂದು ಆಶಿಸುತ್ತೇವೆ.

ಸಂಚಿಕೆ ಸಿದ್ಧಗೊಳಿಸಲು ಸಹಕರಿಸಿದ


- ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ
- ಕೆ.ನೀಲಾ
- ಕೆ.ಎಸ್.ವಿಮಲಾ
- ಎನ್.ಪ್ರಭಾ
- ಎಸ್.ಸತ್ಯಾ
- ಲೇಖಕರಿಗೆ
- ಜಾಹೀರಾತುದಾರರಿಗೆ
- ಓದುಗರಿಗೆ
- ಮುದ್ರಕರಿಗೆ
- ಚಿತ್ರಕೃಪೆ : ಪ್ರಜಾವಾಣಿ, ವಿಜಯಕರ್ನಾಟಕ, ಗಣಶಕ್ತಿ, ಪಿ.ಸಾಯಿನಾಥ್ ಇತರರಿಗೆ

ಕೃತಜ್ಞತೆಗಳು

ಮಹಿಳಾ ಚಳುವಳಿ

ಪಡೆಯುತ್ತಿರುವ ವಿಸ್ತಾರಗಳು ಏರುತ್ತಿರುವ ಉತ್ತುಂಗಗಳು

ಇಂದು ಮಹಿಳಾ ಚಳುವಳಿಗಳು ಕೈಗೆತ್ತಿಕೊಳ್ಳುತ್ತಿರುವ ಹೊಸ ಹೊಸ ಪ್ರಶ್ನೆಗಳನ್ನು ಹಾಗೂ ಚಳುವಳಿ ಬೆಳೆಯುತ್ತಾ ವಿಸ್ತಾರಗೊಳ್ಳುತ್ತಾ ಸಾಗಿರುವುದನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ ಲೇಖಕರು. ಆ ವಿಸ್ತಾರ– ಏರುತ್ತಿರುವ ಉತ್ತುಂಗಗಳೇನು?



ಜಿ.ಎನ್.ನಾಗರಾಜ್

ಮಹಿಳೆಯರ ಸಮಾನತೆಗಾಗಿ ನಡೆಯುತ್ತಿರುವ ಮಹಿಳಾ ವಿಮೋಚನಾ ಚಳುವಳಿ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಹೊಸ ಹೊಸ ಪ್ರಶ್ನೆಗಳನ್ನು ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಈ ಬೆಳವಣಿಗೆಯನ್ನು ಮೂರು ಪದಗಳಲ್ಲಿ ವಿವರಿಸಬಹುದು:

ವಿಸ್ತಾರ, ವಿಸ್ತಾರ, ವಿಸ್ತಾರ: ಒಂದೇ ಪದವನ್ನು ಮೂರು ಬಾರಿ ಪುನರುಚ್ಚರಿಸಿದಂತೆ ಕಂಡರೂ ಮೂರು ಬೇರೆಯೇ ಅರ್ಥವಂತಿಕೆಯನ್ನುಳ್ಳ ಬೇರೆಯೇ ಪದಗಳು.

ಪ್ರಾದೇಶಿಕ ವಿಸ್ತಾರ: ನಗರ ಕೇಂದ್ರಿತವಾಗಿದ್ದ ಮಹಿಳಾ ಚಳುವಳಿ ಗ್ರಾಮಾಂತರ ಪ್ರದೇಶಗಳಿಗೆ, ಮುಂದುವರಿದ ಪ್ರದೇಶಗಳಿಂದ ಹಿಂದುಳಿತ ಪ್ರದೇಶಗಳಿಗೆ, ಹೊಸ ಹೊಸ ರಾಜ್ಯಗಳಿಗೆ ಜಿಲ್ಲೆಗಳಿಗೆ, ಜಿಲ್ಲೆಗಳ ಒಳಗೆ, ಹೊಸ ಪ್ರದೇಶಗಳಿಗೆ ವಿಸ್ತಾರವಾಗತೊಡಗಿದೆ. ಮಹಿಳಾ ಅಸಮಾನತೆಯ ಪ್ರಾದೇಶಿಕ ವೈಶಿಷ್ಟ್ಯಗಳು ಬಿಚ್ಚಿಕೊಳ್ಳತೊಡಗಿವೆ. ಅಭಿವೃದ್ಧಿ ಪ್ರಕ್ರಿಯೆ, ಯೋಜನೆಗಳಲ್ಲಿ ಪ್ರಾದೇಶಿಕ ಅಸಮಾನತೆಯ ಒತ್ತಡ ಮಹಿಳೆಯರ ಮೇಲೆ ಹೊರೆ ಭಾರವಾಗಿರುವುದನ್ನು ಗುರುತಿಸಲಾಗುತ್ತಿದೆ. ಈ ಪ್ರಾದೇಶಿಕ ವಿಸ್ತಾರ ಜಾಗತಿಕ ಮಟ್ಟದಲ್ಲಿಯೂ ಸಾಗಿರುವುದು ಮಹಿಳಾ ಚಳುವಳಿಗೆ ಅದೊಂದು ಆನೇಬಲವನ್ನು ತಂದುಕೊಟ್ಟಿದೆ.

ಸಾಮಾಜಿಕ ವಿಸ್ತಾರ: ಕೇವಲ ಮೇಲ್ವರ್ಗಗಳ, ಮಧ್ಯಮವರ್ಗಗಳ ಮಹಿಳೆಯರಿಗೆ ಸೀಮಿತವಾಗಿದ್ದ ಮಹಿಳಾ ಚಳುವಳಿ ಸಮಾಜದ ವಿವಿಧ ವರ್ಗಗಳನ್ನು ಜಾತಿಗಳನ್ನು , ಧರ್ಮಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳತೊಡಗಿದೆ. ದುಡಿಯುವ ವರ್ಗಗಳನ್ನು ಕೆಳಜಾತಿಗಳನ್ನು ಹೆಚ್ಚು ಹೆಚ್ಚು ಒಳಗೊಳ್ಳುತ್ತಾ ಮುಂದೆ ಸಾಗಿದೆ. ಮೇಲ್ವರ್ಗಗಳಿಗೆ ಮಧ್ಯಮ ವರ್ಗಗಳಿಗೆ ಮಾತ್ರವೇ ಸೀಮಿತವಾಗಿದ್ದ ಕಾಲದಲ್ಲಿದ್ದ ಮಹಿಳಾ ಚಳುವಳಿಯ ಸ್ವರೂಪಕ್ಕಿಂತ ಭಿನ್ನವಾದ ಹೊಸ ಗುಣ ಹೊಸ ಶಕ್ತಿಯನ್ನು ಪಡೆದಿವೆ. ಹೊಸ ವಿಧಾನಗಳನ್ನು ಅನುಸರಿಸುತ್ತಿದೆ. ಕೇವಲ ವಿರಾಮ ಕಾಲವನ್ನು ಕಳೆಯುವ ಹರಟೆಯ ಕಟ್ಟೆಯಾಗಿದ್ದ ಮಹಿಳಾ ಮಂಡಳಗಳು ಕ್ಲಬ್‌ಗಳಂತಹ ಸ್ವರೂಪ ಇನ್ನೂ ವ್ಯಾಪಕವಾಗಿದ್ದರೂ ಅದು ಗೌಣವಾಗಿ ಬಹಳ ಕಾಲವಾಗಿದೆ. ನಂತರದಲ್ಲಿ ಮಧ್ಯಮವರ್ಗದ ಮಹಿಳೆಯರು ಉಳಿದ ವರ್ಗಗಳ ಮಹಿಳೆಯರ ಸಮಸ್ಯೆಗಳನ್ನು ಎತ್ತಿಕೊಳ್ಳುವ ಅವರಿಗಾಗಿ ಇವರು ಚಳುವಳಿ ಮಾಡುವ ಧ್ವನಿ ಎತ್ತುವ ಕೆಲವು ಆಸಕ್ತ ಮಹಿಳೆಯರ ಹಲವಾರು ಗುಂಪುಗಳ ಸ್ವರೂಪವನ್ನು ಪಡೆಯಿತು. ಎಲ್ಲಿಂದಲೋ ಹಣ ಪಡೆದು ಮಹಿಳೆಯರಿಗಾಗಿ ಕೆಲಸ ಮಾಡುವ ಸ್ವಯಂ ಸೇವಸಂಸ್ಥೆಗಳ ಸ್ವರೂಪ ಪ್ರಧಾನವಾಗಿತ್ತು. ಆದರೆ ಸಾಮಾಜಿಕವಾಗಿ ಕೆಳವರ್ಗಗಳಿಗೆ ಕೆಳಜಾತಿಗಳಿಗೆ ಚಳುವಳಿ ಹಬ್ಬುತ್ತಿರುವ ಪರಿಣಾಮವಾಗಿ ಮಹಿಳಾ ಚಳುವಳಿಯು ಸ್ವರೂಪವನ್ನು ಪಡೆದುಕೊಂಡಿದೆ. ಚಳವಳಿಗಳಲ್ಲಿಯೂ ಕೇವಲ ಮನವಿ, ಧರಣೆಗಳ ಬದಲಾಗಿ ಹೆಚ್ಚು ಹೆಚ್ಚು ಸಂಘರ್ಷಮಯವಾಗುತ್ತಾ ಘೆರಾವ್, ಮುತ್ತಿಗೆಗಳ ಸ್ವರೂಪವನ್ನು, ಅಪರೂಪಕ್ಕಾದರೂ ಕೆಲವೆಡೆ ಸೆಣಸಾಟದ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ವಿವಿಧ ಧರ್ಮಗಳ ಮಹಿಳೆಯರನ್ನೂ ಒಳಗೊಳ್ಳುತ್ತಾ ಮಹಿಳಾ ಸಮಾನತೆಯ ಪ್ರಶ್ನೆ ಎಲ್ಲಾ ಮಹಿಳೆಯರ ಪ್ರಶ್ನೆಯಾಗುತ್ತಿದೆ.

ಎತ್ತಿಕೊಳ್ಳುವ ಪ್ರಶ್ನೆಗಳ, ಚಿಂತನೆಯ, ಅಧ್ಯಯನದ ವಿಸ್ತಾರ:

ವಿವಿಧ ಪ್ರದೇಶಗಳಿಗೆ, ಸಾಮಾಜಿಕ ಸ್ತರಗಳಿಗೆ ಮಹಿಳಾ ಚಳುವಳಿ ಹಬ್ಬುತ್ತಿರುವಂತೆಯೇ ಮಹಿಳಾ ಚಳುವಳಿ ಸಮಾನತೆಯ ಪರಿಕಲ್ಪನೆಯನ್ನು ಹಿಗ್ಗಿಸುತ್ತಿದೆ.

ವೈವಿಧ್ಯಮಯವಾದ ಪ್ರಶ್ನೆಗಳನ್ನು ಎತ್ತುತ್ತಲೇ ಅವೆಲ್ಲವನ್ನೂ ಸಮಗ್ರೀಕರಿಸಿ ನೋಡುವ ಪ್ರಯತ್ನಗಳೂ ನಡೆಯುತ್ತಿವೆ. ವಿವಿಧ ರೂಪದ ಅಧ್ಯಯನ ಪ್ರಯತ್ನಗಳು ನಡೆಯುತ್ತಿವೆ. ಚಿಂತನೆಗಳೂ ನಡೆಯುತ್ತಿವೆ.

ವಿಸ್ತಾರದಿಂದ ಔನ್ನತ್ಯಕ್ಕೆ

ಮಹಿಳಾ ಚಳುವಳಿ ಪಡೆಯುತ್ತಿರುವ ವಿಸ್ತಾರ ಏಮ್ಮುಖದ ಚಳುವಳಿಯನ್ನು ಮುಮ್ಮುಖದ ಚಳುವಳಿಯಾಗಿಸಿ ನಿರಾಕಾರ ಸ್ವರೂಪದಿಂದ ಸಾಕಾರಗೊಳಿಸುತ್ತಿದೆ. ಹಳ್ಳಿಗಳಲ್ಲಿ, ನಗರಗಳ ಸ್ಲಂಗಳಲ್ಲಿ, ವಿಸ್ತರಣಗಳಲ್ಲಿ ಪಾಲ್ಗೊಳ್ಳುತ್ತಾ ಹಳ್ಳಿಯಿಂದ ದಿಲ್ಲಿಯವರೆಗೆ ಮಾತ್ರವಲ್ಲ ಬೀಜಿಂಗ್, ನ್ಯೂಯಾರ್ಕ್‌ಗಳವರೆಗೆ ದಾಪುಗಾಲಿಡುತ್ತಿದೆ. ವಿಶ್ವಮಹಿಳೆಯರ ಸಮಾವೇಶಗಳಲ್ಲಿ, ಜಾಗತಿಕ 'ನಡೆ'ಗಳಲ್ಲಿ ಹೊಸ ಔನ್ನತ್ಯವನ್ನು ಪಡೆದುಕೊಳ್ಳುತ್ತಿದೆ. ಕುಡಿಯುವ ನೀರು, ರೇಷನ್ ಕಾರ್ಡ್‌ಗಳಿಂದ ಜಾಗತೀಕರಣದವರೆಗೆ, ಪ್ರೇಮವಿವಾಹ, ಅಂತರ್ಜಾತಿ ವಿವಾಹಗಳಿಂದ ಅಸ್ಪೃಶ್ಯತೆಯವರೆಗೆ, ವರದಕ್ಷಿಣೆ ಹತ್ಯೆಗಳಿಂದ, ಕೋಮುಗಲಭೆಗಳವರೆಗೆ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿವೆ. ಸ್ಥಳೀಯ ಮಟ್ಟದಿಂದ ಜಾಗತೀಕ ಮಟ್ಟಗಳವರೆಗೆ ಅಧ್ಯಯನಗಳು ನಡೆಯುತ್ತಿವೆ. ಜಾಗತಿಕವಾಗಿ ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಜೊತೆಗೆ ಲಿಂಗಾಧಾರಿತ ಅಭಿವೃದ್ಧಿಯ ಪರಿಕಲ್ಪನೆ ಲಿಂಗಾಧಾರಿತ ಅಭಿವೃದ್ಧಿ ಸೂಚ್ಯಾಂಕಗಳು ಈ ಕಲ್ಪನೆಯ ಪರಿಣಾಮವಾಗಿ ದೇಶದ ಮಟ್ಟದಲ್ಲಿ, ರಾಜ್ಯಗಳ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳು, ಮಹಿಳಾ ಆಯೋಗಗಳು, ರೂಪುಗೊಂಡಿವೆ.

ಮಹಿಳಾ ಚಳುವಳಿ ಮೂಡಿಸಿದ ಎಚ್ಚರ ಮಹಿಳಾ ಮತದಾರರನ್ನು ಒಲಿಸಿಕೊಳ್ಳಲು ರಾಜಕೀಯ ಪಕ್ಷಗಳು ಸ್ಪರ್ಧಿಸುವಂತೆ ಮಾಡಿವೆ. ಪುರಸಭೆ, ಪಂಚಾಯತಗಳಲ್ಲಿ ಮಹಿಳಾ ಮೀಸಲಾತಿ ತಂದ ಕರ್ನಾಟಕದ ಜನತಾಪಕ್ಷದ ಸರ್ಕಾರ, ಹಾಗೂ ನಂತರ ದೇಶದ ಮಟ್ಟಕ್ಕೆ ವಿಸ್ತರಿಸಿದ ರಾಜೀವ್ ಗಾಂಧಿ ಸರ್ಕಾರ, ಸ್ತ್ರೀಶಕ್ತಿ, ಮಹಿಳಾ ಸ್ವಸಹಾಯ ಗುಂಪುಗಳು ಇವುಗಳೆಲ್ಲಾ ಮಹಿಳಾ ಚಳುವಳಿಯ ಒತ್ತಡಕ್ಕೆ ಸರ್ಕಾರಗಳು ಮಣಿಯಬೇಕಾದ ಉದಾಹರಣೆಗಳು. ಸಮಾಜದಲ್ಲಿಯೂ ಮಹಿಳಾ ಚಳುವಳಿ ಒಂದು ಸಾರ್ವತ್ರಿಕ ಎಚ್ಚರವನ್ನು ಮೂಡಿಸುತ್ತಿದೆ. ಮಹಿಳೆಯರಲ್ಲಿ ಸಂಘಟನೆಯ ಎಚ್ಚರವನ್ನು, ತಿಳುವಳಿಕೆಯ ಕಾತರವನ್ನು, ಹೋರಾಟದ ಮನೋಭಾವವನ್ನು ಮೂಡಿಸುತ್ತಿದೆ.

ಮಹಿಳಾ ಸಮಾನತೆಯ ಪ್ರಶ್ನೆ ತನ್ನ ವಿರಾಟ ಸ್ವರೂಪದಲ್ಲಿ ಇದೀಗ ತಾನೆ ಬಿಚ್ಚಿಕೊಳ್ಳತೊಡಗಿದೆ. ಈ ಬೆಳವಣಿಗೆ ಮಹಿಳಾ ಚಳುವಳಿಯ ಮುಂದಿನ ಬೆಳವಣಿಗೆಗೆ ಸಹಾಯಕರ ವಾತಾವರಣವನ್ನು ನಿರ್ಮಿಸಿದೆ. ಮಹಿಳಾ ಚಳುವಳಿಯ ದಿಕ್ಕು ದೆಸೆಗಳನ್ನು ಸೂಚಿಸಿದೆ. ಆದರೆ ಮಹಿಳಾ ವಿಮೋಚನೆಯನ್ನು ಸಾಧಿಸುವ ನಿಟ್ಟಿನಲ್ಲಿ ವಿಸ್ತಾರದಿಂದ ವಿಸ್ತಾರಕ್ಕೆ



ಔನ್ನತ್ಯದಿಂದ ಔನ್ನತ್ಯಕ್ಕೆ ಚಳುವಳಿಯ ವಿಸ್ತಾರದಲ್ಲಿ ಹಾಗೂ ವಿಚಾರಶಕ್ತಿಯ ಹಂತದಲ್ಲಿ ಎರಡರಲ್ಲಿಯೂ ಇನ್ನು ಬಹಳ ದೂರದಲ್ಲಿದೆ. ಕೇವಲ ಸಮಸ್ಯೆಗಳ ಲಕ್ಷಣಗಳತ್ತ ಮಾತ್ರ ಕಣ್ಣುನೆಟ್ಟಿರುವ ಮಹಿಳಾ ಚಳುವಳಿ ಸಮಸ್ಯೆಯ ಬೇರಿಗೆ ಇನ್ನೂ ಕೈಹಾಕಬೇಕಿದೆ. ಆದರೆ ಅದೇ ಸಮಯದಲ್ಲಿ ಮಹಿಳಾ ಚಳುವಳಿಯ ಬೆಳವಣಿಗೆಯಿಂದ ಮಹಿಳೆಯರನ್ನು ತುಳಿಯುವ, ಶೋಷಿಸುವ ಹಿಂಸಿಸುವ ಮೂಲಕ ತಮ್ಮ ಸ್ಥಾನಗಳನ್ನು ಪಡೆದುಕೊಂಡಿದ್ದ, ರಕ್ಷಿಸಿಕೊಂಡಿದ್ದ ಅನಿಷ್ಠ ಶಕ್ತಿಗಳೂ ಕೂಡ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಬೆಳೆದಿವೆ. ಎಚ್ಚರಗೊಳ್ಳುತ್ತಿರುವ ಮಹಿಳೆಯರ ಪ್ರಜ್ಞೆಯನ್ನು ಕದಡಲು, ಗೊಂದಲಗೊಳಿಸಲು, ಮಂಕುಗೊಳಿಸಲು ಮತ್ತೆ ತೂಕಡಿಕೆಗೆ, ನಿದ್ದೆಗೆ ದೂಡಲು ಹಳೆಯ ಆಯುಧಗಳನ್ನು ಹರಿತಗೊಳಿಸಿ ಅಣಿ ಮಾಡಲಾಗುತ್ತಿದೆ. ಹೊಸ ಆಯುಧಗಳನ್ನು ತಯಾರಿಸಲಾಗುತ್ತಿದೆ. ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಎಲ್ಲಾ ರೀತಿಯ ಕೋಮುವಾದದೊಳಗಿನ ಪೂಜೆ ಪುನಸ್ಕಾರಗಳು,ವೃತ, ಉತ್ಸವಗಳ ಹೊಸ ಅವತಾರಗಳು, ಹರಿಕಥೆ, ಉಪನ್ಯಾಸಗಳ ನಾರಿಗೌರವ, ಕುಟುಂಬ ಮೌಲ್ಯ, ಮಹಿಳೆಯರ ಉಡುಪು, ತೊಡುಗೆಗಳ ಬಗೆಗಿನ ಪ್ರಶ್ನೆಗಳು ಇವು ಹಳೆಯ ಆಯುಧಗಳನ್ನು ಮಸೆದು ಕಾಳಗಕ್ಕೆ ತಂದವುಗಳು. ಅದರೆ ಅದೇ ರೀತಿ ಜಾಗತೀಕರಣ, ನಿರುದ್ಯೋಗ, ಯುವತಿಯರಿಗೆ ಉದ್ಯೋಗ, ಶೋಷಣೆ ಮತ್ತು ವಜಾಗಳು ಶಿಕ್ಷಣದ ವೆಚ್ಚವನ್ನು ಹೆಚ್ಚಿಸುವ ಮೂಲಕ ಶಿಕ್ಷಣ ವಂಚನೆ, ಫ್ಯಾಶನ್‌ಶೋಗಳು, ಸೌಂದರ್ಯಸ್ಪರ್ಧೆಗಳು, ಅರೆಬೆತ್ತಲೆ ನೃತ್ಯ ಸಂಗೀತಗಳು, ಸಿನೆಮಾ, ಟಿ.ವಿಗಳು, ಕೊಳ್ಳುಬಾಕತನವನ್ನು ಉದ್ದೇಶಿಸುವ ಜಾಹೀರಾತುಗಳು, ವಿಚಾರ ರಹಿತ ಬದುಕಿನ ಆಕರ್ಷಣೆಗಳು ಇತ್ಯಾದಿ ಹೊಸ ಆಯುಧಗಳನ್ನು ಸನ್ನದ್ಧಗೊಳಿಸ ಲಾಗಿದೆ.

ಮಹಿಳಾ ಚಳುವಳಿಯ ಬೆಳವಣಿಗೆಗಳಿಗೆ ಇರುವ ಸದಾವಕಾಶಗಳನ್ನು ಬಳಸಿಕೊಂಡು ಪ್ರಾದೇಶಿಕ, ಸಾಮಾಜಿಕ ಹಾಗೂ ಆವರಿಸಿಕೊಳ್ಳುತ್ತಿರುವ ಪ್ರಶ್ನೆಗಳ ವಿಸ್ತಾರಗಳೆಂಬ ಮೂರು ದಿಕ್ಕುಗಳತ್ತ ದಾಪುಗಾಲಿಡುತ್ತಾ ಮಹಿಳಾ ಚಳುವಳಿ ವಿಸ್ತಾರದಿಂದ ವಿಸ್ತಾರಕ್ಕೆ ಬೆಳೆಯಬೇಕಾಗಿದೆ. ಕರ್ನಾಟಕದ ಎಲ್ಲ ಮೂಲೆಗಳನ್ನು ಆವರಿಸಬೇಕಾಗಿದೆ. ದಶಲಕ್ಷಗಟ್ಟಲೆ ಮಹಿಳೆಯರನ್ನು ತಲುಪುವ ಲಕ್ಷಗಟ್ಟಲೆ ಮಹಿಳೆಯರನ್ನು ಅಣಿನೆರೆಸುವ ಸಾಮರ್ಥ್ಯವನ್ನು ಸಾಧಿಸಬೇಕಾಗಿದೆ. ಕೋಮುವಾದದ, ಜಾಗತೀಕರಣ ಮಹಾನ್ ತಡೆಗೋಡೆಗಳನ್ನು ಕೆಡವಲು ಮಹಾನ್ ಶಕ್ತಿಯನ್ನು ಗಳಿಸಬೇಕಾಗಿದೆ. ಇವುಗಳು ಚೆಲ್ಲುತ್ತಿರುವ ಮಹಾ ಮಂಕು ಬೂದಿಗಳನ್ನು ನಿಷ್ಕ್ರಿಯಗೊಳಿಸುವ ಮಹತ್ತರ ವೈಚಾರಿಕೆಯ ಉತ್ತುಂಗವನ್ನು ಮುಟ್ಟಬೇಕಾಗಿದೆ. ಸಮಸ್ಯೆಗಳ ಲಕ್ಷಣಗಳನ್ನು ಕುರಿತು ವಿಚಾರಿಸುವುದು ಅವುಗಳನ್ನು ಮಾತ್ರ ಎದುರಿಸುವುದಕ್ಕೆ ಸೀಮಿತಗೊಳ್ಳುವುದಕ್ಕೆ ಬದಲಾಗಿ ಸಮಸ್ಯೆಗಳ, ಮೂಲ ಬೇರನ್ನೇ ಹಿಡಿದು ಅಲುಗಾಡಿಸುವದರತ್ತ ಗುರಿಯಿಡಬೇಕಾಗಿದೆ.

(ಲೇಖಕರು ಸಿಪಿಐ(ಎಂ) ನ ಕರ್ನಾಟಕ ರಾಜ್ಯಸಮಿತಿ ಕಾರ್ಯದರ್ಶಿಯಾಗಿರುತ್ತಾರೆ.)

ಜನರಿಗೆ ಬೇಕಾದ್ದನ್ನೇ ನೀಡುತ್ತೇವೆ...

ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ 'ನಿರ್ಲಕ್ಷ್ಯ' ಹಾಗೂ 'ಬಳಸಿಕೊಳ್ಳುವ' ಎರಡು ವೈಪರೀತ್ಯದ ನೆಲೆಗಳಲ್ಲಿ ನಿಂತಿದೆ. ಈ ನಿರ್ಲಕ್ಷ್ಯದ ನೆಲೆ ಮಹಿಳೆಯರ ಬದುಕಿನ ಸ್ಥಿತಿ–ಗತಿಯನ್ನು, ಅವರ ಸಾಧನೆಗಳನ್ನು, ಸೋಲುಗಳನ್ನು, ಅಪಮಾನಗಳನ್ನು, ನಿರಂತರ ಪ್ರಯತ್ನಗಳನ್ನು, ಬದುಕುವ ಛಲವನ್ನು ಸಮೂಹ ಮಾಧ್ಯಮಗಳ ಪುಟಗಳಿಂದ ಸಂಪೂರ್ಣವಾಗಿ ಮರೆ ಮಾಡಿಬಿಟ್ಟಿವೆ.



ಸತ್ಯಾ .ಎಸ್

ಅವಳಿಗೆ ತನ್ನ ಮಗಳದೇ ಚಿಂತೆಯಾಗಿತ್ತು.

ಇನ್ನೂ ಹೈಸ್ಕೂಲಿನ ಹುಡುಗಿ. ಆಗಲೇ 'ಮಿತ ಆಹಾರ, ಸ್ಲಿಮ್ ದೇಹದ' ಭೂತ ಹುಡುಗಿಯ ತಲೆ ಹೊಕ್ಕಿತ್ತು. ಟಿ.ವಿ.ಸೀರಿಯಲ್‌ಗಳಲ್ಲಿ ತೋರಿಸುವ ಬಳುಕುವ ಮೈಯಿನ, ಮಿಂಚುವ ಮೈನ ಹುಡುಗಿಯರಂತೆ ತಾನಿರಬೇಕೆಂದು ಮಗಳು ಹಠ ತೊಟ್ಟಿದ್ದಳು. ಅದರೆ ಅವಳ ವಯಸ್ಸೋ ಕಲ್ಲು ತಿಂದು ಕರಗಿಸುವಂತದ್ದು. ಅವಳಾಡುವ ಆಟ, ಓದುವ ಪಾಠ, ಓಡಾಟಕ್ಕೆಲ್ಲ ತಟ್ಟೆ ತುಂಬ ಊಟ ತಿನ್ನಬೇಕಿತ್ತು. ಅದು ಬಿಟ್ಟು ಥೇಟ್ ಟಿ.ವಿ.ಧಾರವಾಹಿಗಳಲ್ಲಿ ತೋರಿಸುವಂತೆ ನೂಡಲ್ಸ್, ಫ್ರೆಂಚ್ ಚಿಪ್ಸ್, ಪಾನಿಪೂರಿ, ಕಟ್ಲೆಟ್, ಸ್ಯಾಂಡ್‌ವಿಚ್‌ಗಳನ್ನು ಬೆರಳ ತುದಿಯಲ್ಲಿ ಮುಟ್ಟಿ ನಾಲಗೆಗೆ ರುಚಿ ತೋರಿಸಿ ಎದ್ದು ಬಿಡುತ್ತಿದ್ದಳು.'ಮನೆಯಲ್ಲಿ ಇಲ್ಲದ ಟಿ.ವಿ.ಅದೆಲ್ಲಿಂದ ತನ್ನ ಪ್ರಭಾವ ಬೀರಿತು' ಎಂದು ನನ್ನ ಗೆಳತಿ ಕಂಗಾಲಾಗಿದ್ದಳು.

ನಾನು ಮುಂದೆ ಹರವಿಕೊಂಡಿದ್ದ ನಾಲ್ಕು ಪತ್ರಿಕೆಗಳ ಪುಟ ಪುಟದ ಮೇಲೂ ಎಕ್ಸ್‌ರೇ ಕಣ್ಣು ಬೀರುತ್ತ ಕುಳಿತಿದ್ದೆ. ಹಿಂದಿನ ದಿನ ಸಂಸತ್ತಿನಲ್ಲಿ ಮಂಡನೆಯಾಗಿದ್ದ ಬಜೆಟ್ ತನ್ನ ದೇಶದ 50 ಶೇ. ಜನರಿಗೆ ಏನೆಲ್ಲಾ ಸುಖ-ದುಃಖದ ಬುತ್ತಿ ಕೊಟ್ಟಿದೆ ಎಂದು ಹುಡುಕುತ್ತಿದೆ. ಹಿಂದಿನ ದಿನದ ಟಿ.ವಿ.ಚಾನೆಲ್‌ಗಳ ವಿಶ್ಲೇಷಣೆಗಳು ತಜ್ಞರಿಗೆ ಹೆಚ್ಚು ಪ್ರಿಯವಾದ ಆರ್ಥಿಕ ಪಾರಿಭಾಷಿಕ ಪದಗಳ ಪ್ರದರ್ಶನದಂತೆ ಕಂಡಿತ್ತು. ಈ ತಜ್ಞರ ತಂಡ ತಂಡಗಳಲ್ಲಿ ಕಂಡಿದ್ದು ಒಂದೆರಡು ಮಹಿಳೆಯರ ಮುಖಗಳು ಮಾತ್ರ. ಬಜೆಟ್ ಕುರಿತ ಸಾಮಾನ್ಯ ಜನರ ಅಭಿಪ್ರಾಯ ಸಂಗ್ರಹಣೆಯಲ್ಲಿ ಮಹಿಳೆಯರ ಮುಖ ಕಂಡಿದ್ದವು. ಹೆಚ್ಚಿನವರೆಲ್ಲರನ್ನು ಕೇಳಿದ್ದು ಅಡಿಗೆ ಅನಿಲ ಸಿಲಿಂಡರ್, ಸೀಮೆ ಎಣ್ಣೆ, ಖಾದ್ಯ ತೈಲ ಇತ್ಯಾದಿ ಇತ್ಯಾದಿ ಅಡಿಗೆ ಮನೆ ವಸ್ತುಗಳ ಬೆಲೆ ಏರಿಕೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮಾತ್ರ. ಉತ್ತರಗಳು ನಿರೀಕ್ಷೆಯಂತೇ ಇದ್ದವು.

ನಮ್ಮ ದೇಶದಲ್ಲಿ ಸುಮಾರು 30 ರಷ್ಟು ಕುಟುಂಬಗಳ ಜವಾಬ್ದಾರಿಯನ್ನು ಮಹಿಳೆಯರು ಏಕಾಂಗಿಯರಾಗಿ ನಿಭಾಯಿಸುತ್ತಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ ಮಿಲಿಯಾಂತರ ಜನರಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕವಾಗಿದೆ. ಅದರೆ ನಮ್ಮ ಮಾಧ್ಯಮಗಳಿಗೆ ಬಜೆಟ್‌ಗೂ ಈ ಒಂದು ವರ್ಗಕ್ಕೂ ಇರುವ ನೇರವಾದ ಸಂಬಂಧ ಅರಿವಾಗುವುದಿಲ್ಲ. ಸಮೂಹ ಮಾಧ್ಯಮಗಳ ಮಟ್ಟಿಗೆ ಮಹಿಳೆಗೆ ಅಡಿಗೆ, ಅಲಂಕಾರ, ಮಾತ್ಸರ್ಯ, ಕುಟುಂಬ, ಸೌಹಾರ್ದತೆಯೊಂದಿಗೆ ಮಾತ್ರ ಸಂಬಂಧವಿದೆ.

ವೈಪರೀತ್ಯದ ನೆಲೆ

ಪತ್ರಿಕೆಗಳಾಗಲಿ, ಟಿ.ವಿ.ಚಾನೆಲ್‌ಗಳಾಗಲಿ ಸುದ್ದಿ, ಮಾಹಿತಿ, ಶಿಕ್ಷಣ, ಚರ್ಚೆ, ಸಂವಾದ ಸಂಬಂಧಿ ವಿಷಯಗಳಲ್ಲಿ ಮಹಿಳೆಯರ ಅಸ್ತಿತ್ವವನ್ನೇ ನಿರ್ಲಕ್ಷಿಸುತ್ತವೆ. ಆದರೆ ಮನರಂಜನೆಯೆಂದರೆ ಅಲ್ಲಿ ಮಹಿಳೆಯರನ್ನು ಎಲ್ಲಾ ಬಗೆಗಳಲ್ಲೂ 'ಬಳಸಿಕೊಳ್ಳುತ್ತಿವೆ.' ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ 'ನಿರ್ಲಕ್ಷ್ಯ' ಹಾಗೂ 'ಬಳಸಿಕೊಳ್ಳುವ' ಎರಡು ವೈಪರೀತ್ಯದ ನೆಲೆಗಳಲ್ಲಿ ನಿಂತಿದೆ. ಈ ನಿರ್ಲಕ್ಷ್ಯದ ನೆಲೆ ಮಹಿಳೆಯರ ಬದುಕಿನ ಸ್ಥಿತಿ-ಗತಿಯನ್ನು, ಅವರ ಸಾಧನೆಗಳನ್ನು, ಸೋಲುಗಳನ್ನು, ಅಪಮಾನಗಳನ್ನು, ನಿರಂತರ ಪ್ರಯತ್ನಗಳನ್ನು, ಬದುಕುವ ಛಲವನ್ನು ಸಮೂಹ ಮಾಧ್ಯಮಗಳ ಪುಟಗಳಿಂದ ಸಂಪೂರ್ಣವಾಗಿ ಮರೆ ಮಾಡಿಬಿಟ್ಟಿವೆ. ಗುಲ್ಬರ್ಗಾದ ಕೊಂಚಾವರಂ ತಾಂಡಾದಲ್ಲಿ ಹಸಿವೆ ನೀಗಿಸಲು ಮಕ್ಕಳನ್ನು ಮಾರಿದ ಅಮ್ಮಂದಿರ ಒಡಲ ನೋವು, ಬಳ್ಳಾರಿಯ ವಣೇನೂರು ಹಳ್ಳಿಯಲ್ಲಿ ಜಾತಿಯ ಮದವೇರಿದವರಿಂದ ಬೆತ್ತಲೆ ಮೆರವಣಿಗೆಯ ಶಿಕ್ಷೆಗೆ ಗುರಿಯಾದ ತಾಯಿ, ಸಾಲುಸಾಲಾಗಿ ಹೆಣ್ಣು ಹೆತ್ತಿದ್ದಕ್ಕಾಗಿ ಗಂಡನಿಂದ ಬೆಂಕಿಗಾಹುತಿಯಾದ ಮಹಿಳೆ,

ಮೊದಲಾದವರೆಲ್ಲ ಒಂದು ಘಟನೆಯಾ ಧರಿಸಿದ ಸುದ್ದಿಗಳಾಗಿ ಮಾತ್ರ ಕಾಣುವ ದುರಂತ ಇಂದಿನ ಸಮೂಹ ಮಾಧ್ಯಮ ಗಳನ್ನು ಆವರಿಸಿದೆ. ಮಾರುಕಟ್ಟೆ ಆಧಾರಿತ ಮಾರಾಟ ಕ್ರಮಗಳನ್ನು ಅನುಸರಿಸುವ ಸೋಪ್, ಟೂತ್‌ಪೇಸ್ಟ್, ವಾಷಿಂಗ್ ಮಶಿನ್, ಶೇವಿಂಗ್ ಕ್ರೀಂನಂತೆ ಪತ್ರಿಕೆಗಳನ್ನು ಅಥವಾ ಟಿ.ವಿ.ಸೀರಿಯಲ್‌ಗಳನ್ನು ಮಾರಾಟ ಮಾಡುತ್ತಿರುವ ಮಾಧ್ಯಮಗಳು ಮಾರಾಟದ ತಂತ್ರವಾಗಿ ಮಾತ್ರ ಮಹಿಳೆಯರನ್ನು ಬಳಸುತ್ತಿದೆ.

ಜಾಹೀರಾತು ದಾರರಿಂದ ನಿಯಂತ್ರಿಸಲ್ಪಟ್ಟ ಮಾಧ್ಯಮವು ಜಾಹೀರಾತು ಕಂಪನಿಗಳ ಉತ್ಪನ್ನಗಳನ್ನು ಖರೀದಿಸುವಂತಹ ಗ್ರಾಹಕರನ್ನು ತಲುಪುವ ಧಾವಂತದಲ್ಲಿದೆ.

ಗ್ರಾಹಕ ಸಂಸ್ಕೃತಿಯ ಧಾವಂತ

ಪತ್ರಿಕೆಗಳು ಹಾಗೂ ಚಾನೆಲ್ ಗಳಲ್ಲಿ ಲಕ್ಷಾಂತರ ರೂಪಾಯಿಗಳ ಜಾಹೀರಾತು ನೀಡುವ ಸೌಂದರ್ಯ ವರ್ಧಕ ಸಾಮಗ್ರಿಗಳು, ಆಹಾರೋತ್ಪನ್ನ ಗಳು, ಗ್ರಾಹಕವಸ್ತುಗಳ ಕಂಪನಿಗಳಿಗೆ ಹಸಿದವರು, ನೊಂದವರು, ಬೆಂದವರು, ಬಡವರು, ಛಲದವರು, ತಮ್ಮ ವಸ್ತುಗಳನ್ನು ಖರೀದಿಸುವ ಗ್ರಾಹಕರಾಗು ವುದಿಲ್ಲ. ಆದ್ದರಿಂದ ಸಾಲ ಮಾಡಿಯಾದರೂ ಅವರ ವಸ್ತುಗಳಿಗೆ ಮುಗಿ ಬೀಳುವ ಗ್ರಾಹಕರನ್ನೇ ಗುರಿಯಾಗಿಟ್ಟು ಕೊಂಡು, ಅವರನ್ನು 'ಆಕರ್ಷಿಸುವಂತಹ' ಹೂರಣ ನೀಡುವಂತೆ ಒತ್ತಾಯಿಸುತ್ತವೆ. ಈ ಆಕರ್ಷಿಸುವ 'ಹೂರಣ'ವು ಜನರಿಗೆ ಮಾಹಿತಿಯನ್ನಾಗಲಿ ಶಿಕ್ಷಣವನ್ನಾಗಲಿ ನೀಡುತ್ತಿಲ್ಲ.

ಇಂತಹ ಆಕರ್ಷಣೆಗೆ ಗುರಿಯಾದ ನೋಡುವ ವರ್ಗ ಕೊಟ್ಟಿದ್ದನ್ನು ಓದುವ, ನೋಡುವ ನೀರಸ ಪ್ರಕ್ರಿಯೆಯಲ್ಲಿ ಮುಳುಗಿದೆ. ಈ ಮನೋಭಾವವನ್ನು 'ಜನರಿಗೆ ಬೇಕಾದ್ದನ್ನೇ ನೀಡುತ್ತೇವೆ' ಎಂದು ತಿರುಗಿಸಿ ಹೇಳುವ ಮಾಧ್ಯಮ ದೊರೆಗಳು ಮನರಂಜನೆಯ ಹೆಸರಿನಲ್ಲಿ ಅತ್ಯಂತ ಅನಾರೋಗ್ಯಕರವಾದ, ಮಹಿಳೆಯರ ಬದುಕಿಗೆ ಅಪಾಯಕಾರಿಯಾದಂತಹ, ಅವಹೇಳನಕಾರಿಯಾದಂತಹ ಕಥೆಗಳನ್ನು ಹೆಣೆದು ಸುರಿಯುತ್ತಿವೆ. ವಾಸ್ತವ ಬದುಕಿಗೆ ದೂರವಾದ ಕಥೆಗಳು ಕಲ್ಪನೆಗೆ ಮಾತ್ರ ನಿಲುಕುವಂತಹ ಪಾತ್ರಗಳನ್ನು ಮಾದರಿಗಳಂತೆ ಬಿಂಬಿಸುತ್ತಿದೆ.

ನಿರ್ಭಾವ

ಮಾಧ್ಯಮಗಳ ಈ ಎರಡೂ ಧೋರಣೆಗಳ ಬಗ್ಗೆ, 'ನಿರ್ಲಕ್ಷ್ಯ' ಮತ್ತು 'ಬಳಕೆ', ಈಗ ಸಾಕಷ್ಟು ಚರ್ಚೆಗಳು ನಡೆದಿವೆ.



ಮಾಧ್ಯಮಗಳು ಹೇಳಿದ್ದೆಲ್ಲಾ ನೂರಕ್ಕೆ ನೂರು ಸತ್ಯ ಎನ್ನುವ ಕಾಲ ಸಂದು ಹೋಗಿದೆ. ಸುದ್ದಿಯಲ್ಲಾಗಲಿ, ಮನರಂಜನೆಯಲ್ಲಾಗಲಿ ಮಾಧ್ಯಮಗಳಿಗೆ ಇರುವ ಸ್ವಹಿತಾಸಕ್ತಿಗಳನ್ನು ಬಯಲಿಗೆಳೆಯಬೇಕು

ಇಂತಹ ಚರ್ಚೆಗಳನ್ನು ಆರಂಭಿಸಿದ ಸಂಘಟಿತ ಶಕ್ತಿಗಳು ಮಾಧ್ಯಮದವರನ್ನೂ ಈ ಚರ್ಚೆಗಳಲ್ಲಿ ಒಳಗೊಂಡಿದೆ. ಇಂತಹ ಚರ್ಚೆಗಳಿಂದಾಗಿ ಅಲ್ಪಸ್ವಲ್ಪ ಬದಲಾವಣೆ ಗಳಾಗಿದ್ದರೂ ಜನರಿಗೆ ಬೇಕಾದ್ದನ್ನು ನೀಡುವ ಫಾರ್ಮುಲಾ ಸುಲಭದ್ದಾಗಿ ದಕ್ಕುತ್ತಿದೆ. ಹೀಗಾಗಿ ನೋಡುವವರು ಹಾಗೂ ಓದುವವರ ಭಾಗವಹಿಸುವಿಕೆ ಇಲ್ಲದೇ ಮಾಧ್ಯಮಗಳ ನಿರ್ಲಕ್ಷ್ಯವನ್ನು ತೊಡೆಯುವುದಾಗಲಿ, ಮಹಿಳೆಯರನ್ನು ಬಳಸಿಕೊಳ್ಳುವುದನ್ನಾಗಲಿ ತಡೆಯಲು ಆಗುವುದಿಲ್ಲ. ಪ್ರಶ್ನೆ ಕೇಳುವ ಅಭ್ಯಾಸವೇ ಇಲ್ಲದ ನಿರ್ಭಾವ ಓದುಗರು ಹಾಗೂ ಪ್ರೇಕ್ಷಕರು ಒಂದೋ ಮಾಧ್ಯಮಗಳು ಕೊಟ್ಟಿದ್ದನ್ನು ವಿಶ್ಲೇಷಿಸದೆ ಅನುಕರಿಸುತ್ತಾರೆ ಇಲ್ಲವೇ ತಮಗೆ ಸುಲಭವಾಗಿ ದಕ್ಕದಿರುವುದನ್ನು ಕನಸುಗಳಲ್ಲಿ ಪಡೆಯಲು ಹಾತೊರೆಯುತ್ತಾರೆ. ಈ ನಿರ್ಭಾವವೇ ಮಾಧ್ಯಮದ ಮಸಾಲೆ ಹೂರಣಗಳಿಗೆ ಕಾರಣವಾಗಿದೆ.

ಮಾಧ್ಯಮ ಸೃಷ್ಟಿಸುತ್ತಿರುವ ನಿಷ್ಕ್ರಿಯತೆ

'ಮಾಧ್ಯಮಗಳಿಗಿರುವ ಅಪಾರವಾದ ಶಕ್ತಿ ಎಲ್ಲರಿಗೂ ಗೊತ್ತಿದೆ. ದಿನಬೆಳಗಾದರೆ ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರೂ ಮಾಧ್ಯಮಗಳು ಉಣಬಡಿಸಿದ ವಿವಿಧ 'ತಿನಿಸು'ಗಳ ಬಗ್ಗೆಯೇ ಮಾತನಾಡುತ್ತಿರುತ್ತಾರೆ. ಅಷ್ಟೇ ಅಲ್ಲ. ಮಾಧ್ಯಮಗಳ ಅಪಾರ ಶಕ್ತಿಯ ಅರಿವಾಗಿದ್ದು ಕೆಲವು ವರ್ಷಗಳ ಹಿಂದೆ ಗಣೇಶ ಹಾಲು ಕುಡಿದ ಪ್ರಸಂಗದಲ್ಲಿ. ಎಲ್ಲೋ ಕಲ್ಲಿನ ಗಣೇಶನ ವಿಗ್ರಹ ಹಾಲು ಕುಡಿಯಿತೆಂಬ ಒಂದು ಸುದ್ದಿ ದಿನಬೆಳಗಾಗುವುದರೊಳಗೆ ಇಡೀ ದೇಶದ ತುಂಬೆಲ್ಲ ಎಲ್ಲ ಗಣಪಗಳಿಗೆ ಲೀಟರುಗಟ್ಟಲೆ ಹಾಲು ಸುರಿಯುವಂತೆ ಮಾಡಿತ್ತು. ಇಂತಹ ಸುದ್ದಿಗಳನ್ನು ತಟ್ಟನೆ ಅನುಕರಿಸುವ ಓದುಗರು ಅಥವಾ ನೋಡುಗರು ಇಂದಿನ ದಿನಗಳಲ್ಲೂ ಮಹಿಳೆಯರು 'ಸತಿ' ಹೋದಾಗ, ಮಹಿಳೆಯರನ್ನು ದಾಸಿಯರಂತೆ ಮಾರಾಟ ಮಾಡಿದಾಗ, ಮಾಟಗಾತಿಯರೆಂದು ಕಲ್ಲು ಹೊಡೆದು ಹತ್ಯೆ ಮಾಡಿದಾಗ ಮೂಕ ಪ್ರೇಕ್ಷಕರಂತೆ ಇದ್ದುಬಿಡುತ್ತಾರೆ.

ಈ ಮೌನವನ್ನು ಒಡೆಯುವ ಕೆಲಸ ಈಗ ತುರ್ತಾಗಿ ಆಗಬೇಕಿದೆ. ಅಸಾಧ್ಯವಾದುದನ್ನು ನಿರಾಕರಿಸುವ, ಅಗತ್ಯವಾದುದನ್ನು ಹಕ್ಕೆಂದು ಪಡೆಯುವ ಚೈತನ್ಯವನ್ನು ತೋರಿಸಬೇಕಿದೆ. ಮುಂಬೈ, ದೆಹಲಿ ಮುಂತಾದ ನಗರಗಳಲ್ಲಿರುವ ಮಾಧ್ಯಮ ಕಾವಲು ಸಮಿತಿಗಳ ಮಾದರಿಯಲ್ಲೆ ಮೂಕ ಪ್ರೇಕ್ಷಕರ ಸಂವೇದನೆಗಳನ್ನು ಎಚ್ಚರಿಸಬೇಕಿದೆ.

ಮಾಧ್ಯಮಗಳು ಹೇಳಿದ್ದೆಲ್ಲಾ ನೂರಕ್ಕೆ ನೂರು ಸತ್ಯ ಎನ್ನುವ ಕಾಲ ಸಂದು ಹೋಗಿದೆ. ಸುದ್ದಿಯಲ್ಲಾಗಲಿ, ಮನರಂಜನೆಯಲ್ಲಾಗಲಿ ಮಾಧ್ಯಮಗಳಿಗೆ ಇರುವ ಸ್ವಹಿತಾಸಕ್ತಿಗಳನ್ನು ಬಯಲಿಗೆಳೆಯಬೇಕು. ಕಾಣದ ಮಹಿಳೆಯರನ್ನು ಕಾಣಿಸುವ, ಕಾಣಿಸುವ ಮಹಿಳೆಯರನ್ನು ಸಕಾರಣವಾಗಿ ಕಾಣಿಸುವ ಪ್ರಯತ್ನಗಳು ನಡೆಯಬೇಕಿದೆ. ಮಾಧ್ಯಮಗಳನ್ನು ವಿಮರ್ಶಾತ್ಮಕವಾಗಿ ನೋಡುವ ದೃಷ್ಟಿಕೋನವನ್ನು ಬೆಳೆಸಬೇಕಿದೆ.

(ಲೇಖಕರು - ಮಂಗಳೂರಿನಲ್ಲಿ ಪತ್ರಕರ್ತರಾಗಿದ್ದಾರೆ)

ವಿಶ್ವದ ಮಹಿಳೆಯರೆಲ್ಲಾ ಒಂದಾಗಿ

ಮಾರ್ಚ್ 8 ಅಂತರ್ರಾಷ್ಟ್ರೀಯ ಮಹಿಳಾ ದಿನ ಮಹತ್ವ ಮತ್ತು ನಂತರದ ಪ್ರಮುಖ ಹೋರಾಟಗಳತ್ತ ಒಂದು ನೋಟ

92 ವರ್ಷಗಳ ಇತಿಹಾಸವನ್ನು ಹೊಂದಿದ ಅಂತರ ರಾಷ್ಟ್ರೀಯ ಮಹಿಳಾದಿನ. ಮಹಿಳಾ ಸ್ವಾತಂತ್ರ, ಸಮಾನತೆಗಾಗಿ ನಡೆಯುವ ಹೋರಾಟಕ್ಕೆ ಸ್ಫೂರ್ತಿ ನೀಡುವ ದಿನ. ಶ್ರಮಿಕ ವರ್ಗದ ಹೋರಾಟದ ಚರಿತ್ರೆಯ ಭಾಗವಾಗಿಯೇ ಮಾರ್ಚ್- 8 ರ ಹೋರಾಟವನ್ನೂ ಅರ್ಥೈಸಿದರೆ ಮಾರ್ಚ್-8ರ ಮಹತ್ವ ಅರ್ಥವಾಗುತ್ತದೆ.

ಮಹಿಳಾ ದಿನದ ಇತಿಹಾಸ:


1829 ರಷ್ಟು ಹಿಂದೆಯೇ ಪ್ರಾರಂಭವಾದ ಮಹಿಳಾ ಕಾರ್ಮಿಕರ ಹೋರಾಟದ ಮೂಲಕ ನಾವು ಇತಿಹಾಸದ ಪುಟಗಳಲ್ಲಿ ಇಳಿದರೆ ಮಾರ್ಚ್-8ರ ಹೋರಾಟಕ್ಕೆ ಸ್ಫೂರ್ತಿ ನೀಡಿದ ಹಲವಾರು ಹೋರಾಟಗಳನ್ನು ನೋಡಬಹುದು.

ಹೋರಾಟ ಬೆಳೆದು ಬಂದ ಬಗೆ:

ಕೈಗಾರಿಕಾ ಕ್ರಾಂತಿ ಮಹಿಳೆಯರನ್ನು ಸಾಮೂಹಿಕ ಉತ್ಪಾದನಾ ವಲಯಕ್ಕೆ ಸೆಳೆಯಿತು. ನಾಲ್ಕು ಗೋಡೆಗಳಿನಂದಾಚೆ ವಿಶಾಲ ಪ್ರಪಂಚಕ್ಕೆ ಕಾಲಿಟ್ಟ ಮಹಿಳೆಯರ ಸ್ಥಿತಿ-ಗತಿಗಳಲ್ಲಿ ಮಹತ್ತರ ಬದಲಾವಣೆ ಕಂಡುಬರದಿದ್ದರೂ, ಒಂದೇ ಸೂರಿನಡಿ ಅಪಾರ ಸಂಖ್ಯೆಯಲ್ಲಿ ಸೇರತೊಡಗಿದ ಮಹಿಳೆಯರಲ್ಲಿ ಶೋಷಣೆಯ ಅರಿವು ಮೂಡತೊಡಗಿತು. ಕೈಗಾರಿಕಾ ಕ್ರಾಂತಿಯಿಂದಾಗಿ ಸಾಮೂಹಿಕ ಉತ್ಪಾದನಾ ವಲಯಕ್ಕೆ ಕಾಲಿಟ್ಟರೆಂದ ಮಾತ್ರಕ್ಕೆ ಜರ್ಝರಿತಗೊಳಿಸುವ ಗೃಹಕೃತ್ಯದ ಜವಾಬ್ದಾರಿಯಿಂದ ಮಹಿಳೆಯರಿಗೆ ಬಿಡುಗಡೆ ದೊರೆಯಲಿಲ್ಲ. ಮಹಿಳೆಯರನ್ನು ಒಟ್ಟು ಸಮಾಜದ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ಗೃಹಕೃತ್ಯದ ಜವಾಬ್ದಾರಿ ಕೂಡ ಕುಟುಂಬದ ಸದಸ್ಯರೆಲ್ಲರ ಸಾಮೂಹಿಕ ಜವಾಬ್ದಾರಿ ಎಂಬ ಪ್ರಜ್ಞೆಯನ್ನು ಬೆಳೆಸಲು ಕ್ಯೂಬಾದಂತಹ ರಾಷ್ಟ್ರದಲ್ಲಿ ಮಾತ್ರ ಸಾಧ್ಯವಾಗಿದೆ. ಫಿಡೆಲ್ ಕ್ಯಾಸ್ಟ್ರೋ ಇದನ್ನು "ಕ್ರಾಂತಿಯೊಳಗಿನ ಕ್ರಾಂತಿ" ಎಂದು ಬಣ್ಣಿಸುತ್ತಾರೆ. ಆದರೆ ಮಹಿಳೆಯರಿಗೆ ತಾವು ಒಳಪಟ್ಟಿರುವ ಶೋಷಣೆಯ ಸ್ವರೂಪದ ಅರಿವನ್ನು ಅವರು ಕಾಲಿಟ್ಟ ಬಾಹ್ಯ ಪ್ರಪಂಚ ತಂದುಕೊಟ್ಟಿತು. ಅದರ ವಿರುದ್ಧ ಹೋರಾಟ ನಡೆಸಲು ಪ್ರೇರಣೆಯನ್ನೂ ನೀಡಿತು.

ಇಂತಹ ಕೆಲವು ಹೋರಾಟಗಳು:

1820 ರಲ್ಲಿ ಅಮೇರಿಕಾ, ಇಂಗ್ಲೆಂಡ್ ದೇಶಗಳ ಮಹಿಳಾ ಗಿರಣಿ ಕಾರ್ಮಿಕರ ಮುಷ್ಕರ 1845 ರಲ್ಲಿ ಅಮೆರಿಕಾದ ಪಶ್ಚಿಮ ಪೆನ್ಸಿಲ್ವೇನಿಯಾದ ಗಿರಣಿ ಕಾರ್ಮಿಕ ಮಹಿಳೆಯರ ಮುಷ್ಕರ. 1888-89 ರಲ್ಲಿ ಬ್ರಿಟನ್ನಿನಲ್ಲಿ ಎದ್ದ ದೊಡ್ಡ ಕಾರ್ಮಿಕ ಅಲೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಅಸಂಘಟಿತ ವಲಯದ ಮಹಿಳಾ



ಮಾರ್ಚ್ 8, 2003 , ಬೆಂಗಳೂರಿನಲ್ಲಿ - ದಿನಾಚರಣೆ. ಬೆಂಗಳೂರು, ಮಂಡ್ಯ, ಕೋಲಾರ, ತುಮಕೂರು ಜಿಲ್ಲೆಗಳಿಂದ ರ್‍ಯಾಲಿಗೆ ಬಂದವರು

ಐದು ವರ್ಷಗಳಲ್ಲಿ ಮಹಿಳೆಯರ ಮೇಲೆ ಹಿಂಸಾಚಾರ ಹೆಚ್ಚಾಗಿದೆ

(ಅಖಿಲ ಭಾರತ ಸಂಖ್ಯೆ 1995 ರಿಂದ 1999 ರ ವರೆಗೆ ಹೆಚ್ಚಳದ ಶೇಕಡಾವಾರು)

ಹಿಂಸಾಚಾರ 1995-99ರವರೆಗೆ ಹೆಚ್ಚಳದ ಶೇಕಡ	
ಬಲಾತ್ಕಾರ	2.55
ಅತ್ಯಾಚಾರ	1.18
ಕಿರುಕುಳ	12.24
ಮನೆಯಲ್ಲಿ ಹಿಂಸಾಚಾರ	7.65
ವರದಕ್ಷಿಣೆ ಸಾವು	6.33
ಅಪಹರಣ	1.37
ಇತರ	4.63
ಒಟ್ಟು	0.38

ಪಶ್ಚಿಮ ಬಂಗಾಳದಲ್ಲಿ ಮಹಿಳೆಯ ಸ್ಥಿತಿಗತಿಯಲ್ಲಿ ಪ್ರಗತಿ

- ಪಂಚಾಯತ ಸದಸ್ಯರಲ್ಲಿ ಶೇಕಡಾ 40 ಮಹಿಳೆಯರು
- ಶಿಶುಗಳ ಮರಣದ ದರ 1981 ರಲ್ಲಿ 91 (ಸಾವಿರಕ್ಕೆ) ದಿಂದ 1997 ರಲ್ಲಿ 55 ಕ್ಕೆ ಇಳಿದಿದೆ. ಇದು ರಾಷ್ಟ್ರೀಯ ಸರಾಸರಿ 74 ಕ್ಕಿಂತ ಬಹಳ ಕಡಿಮೆ.
- ಭೂಸುಧಾರಣೆಯಿಂದ ಮಹಿಳೆಯರ ಸ್ಥಿತಿಗತಿ ಉತ್ತಮ ಪಡಿಸುವುದರಲ್ಲೂ ಪಶ್ಚಿಮ ಬಂಗಾಳ ಮುಂದೆ ಇದೆ. 5 ಲಕ್ಷ ಜಂಟಿ ಪಟ್ಟಾಗಳು ಮತ್ತು 50 ಸಾವಿರ ಮಹಿಳೆಯರಿಗೆ ಪಟ್ಟಾಗಳು ಸೇರಿವೆ.
- ಮಹಿಳಾ ಸಾಕ್ಷರತೆಯಲ್ಲಿ ಪಶ್ಚಿಮ ಬಂಗಾಳ ದಾಪುಗಾಲಿಟ್ಟಿದೆ. 1991 ರಲ್ಲಿ ಶೇಕಡಾ 46 ರಿಂದ 1997 ರಲ್ಲಿ ಶೇಕಡಾ 63 ಕ್ಕೆ ಏರಿದೆ.
- ಸಾಕ್ಷರತಾ ಏರಿಕೆ ಗ್ರಾಮೀಣ ಪ್ರದೇಶ ದಲ್ಲೇ ಹೆಚ್ಚು. 19.8 ಶೇಕಡಾದಷ್ಟು ಏರಿ ಸಾಕ್ಷರತಾ ದರ ಶೇ 58 ಆಗಿದೆ. ನಗರ ಪ್ರದೇಶಗಳಲ್ಲಿ ಶೇಕಡಾ 7.7 ಏರಿ, ಸಾಕ್ಷರತಾ ದರ ಶೇಕಡಾ 76 ಆಗಿದೆ.
- ಉಚ್ಚ ಶಿಕ್ಷಣದಲ್ಲಿ ಮಹಿಳೆಯರ ಪಾಲು ಪಶ್ಚಿಮ ಬಂಗಾಳದಲ್ಲಿ ಶೇಕಡಾ 40 ಆಗಿದೆ(ರಾಷ್ಟ್ರೀಯ ಸರಾಸರಿ ಶೇಕಡಾ 33.5 ಕ್ಕಿಂತ ಮುಂದಿದೆ)

ಕಾರ್ಮಿಕರು ಪಾಲ್ಗೊಂಡಿದ್ದು, 20ನೇ ಶತಮಾನದವರೆಗೂ ಅಮೇರಿಕಾ, ಇಂಗ್ಲೆಂಡ್‌ನಂತಹ ಮುಂದುವರೆದ ದೇಶಗಳಲ್ಲಿಯೂ ಮಹಿಳೆಯರಿಗೆ ಸಿಗದ ಓಟಿನ ಹಕ್ಕುಗಳಿಗಾಗಿ ನಡೆಸಿದ ಹೋರಾಟ. (ಪ್ರಥಮ ಹಂತದಲ್ಲಿ ಸೀಮಿತ ವಲಯದ ಮಹಿಳೆಯರಿಗಾಗಿಯಷ್ಟೇ ಬೇಡಿಕೆಯಾಗಿ ಬಂದಿದ್ದರೂ) ನಂತರ 1907 ರಲ್ಲಿ ನಡೆದ ನ್ಯೂಯಾರ್ಕಿನ ಗಾರ್ಮೆಂಟ್ ಕಾರ್ಖಾನೆಯ ಮಹಿಳಾ ಕಾರ್ಮಿಕರ ಹೋರಾಟ- ದಿನಕ್ಕೆ 10 ಘಂಟೆಯ ಕೆಲಸ, ಲಿಂಗ, ಜನಾಂಗ, ಆಸ್ತಿ, ವಿದ್ಯೆ ಮುಂತಾದ ತಾರತಮ್ಯವಿಲ್ಲದ, ಎಲ್ಲರಿಗೂ ಮೂಲಭೂತ ಹಕ್ಕಾಗಿ ಮತದಾನದ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನಗಳು ಅವರ ಬೇಡಿಕೆಯಾಗಿತ್ತು. ನ್ಯಾಯಾರ್ಕಿನ ರಟ್ಲೇರ್ ಚೌಕದಲ್ಲಿ ನಡೆದ ಬೃಹತ್ ಪ್ರದರ್ಶನದ ಮೂಲಕ ಮಾರ್ಚ್-8 ಯಶಸ್ಸಿನ ದಿನವಾಗಿ ಬಂದು ಈ ದಿನವನ್ನು "ಅಂತರ ರಾಷ್ಟ್ರೀಯ ಮಹಿಳಾ ದಿನ" ವನ್ನಾಗಿಸಿದ ಕೀರ್ತಿ ಕಮ್ಯೂನಿಸ್ಟ್ ನಾಯಕಿ ಜರ್ಮನಿಯ ಕ್ಲಾರಾಂಜೆಟ್‌ರೆನ್‌ರವರಿಗೆ ಸಲ್ಲುತ್ತದೆ. 1910 ರಲ್ಲಿ ಕೂಪನ್ ಹೇಗನ್‌ನಲ್ಲಿ ನಡೆದ 2ನೇ ಅಂತರರಾಷ್ಟ್ರೀಯ ಶ್ರಮಿಕ ಸಮ್ಮೇಳನದಲ್ಲಿ ಮಾರ್ಚ್-8 ನ್ನು "ಅಂತರರಾಷ್ಟ್ರೀಯ ಮಹಿಳಾ ದಿನ" ವನ್ನಾಗಿ ಘೋಷಿಸಬೇಕೆಂಬ ಒತ್ತಾಯವನ್ನು ಮುಂದಿಟ್ಟರು. 1911ರಿಂದ ಈ ದಿನ ಅಂತರರಾಷ್ಟ್ರೀಯ ಮಹಿಳಾ ದಿನವಾಗಿ ವಿಶ್ವದ ಎಲ್ಲೆಡೆ ಆಚರಿಸಲ್ಪಡುತ್ತಿದೆ. 1911 ರ ಮಾರ್ಚ್ 8ರಂದು ಜರ್ಮನಿಯ ಬೀದಿಗಳಲ್ಲಿ ಲಕ್ಷಾಂತರ ಮಹಿಳೆಯರು, ಪುರುಷರು ಸೇರಿದಂತೆ ಈ ದಿನವನ್ನು ಆಚರಿಸಿದ ದಾಖಲೆಗಳಿವೆ. ರಷ್ಯಾದ ಝಾರಿಸಂ ವಿರುದ್ಧ ನಡೆದ ರಷ್ಯಾ ಕ್ರಾಂತಿಯ ಸಂದರ್ಭದಲ್ಲಿಯೂ 'ಅಂತರ ರಾಷ್ಟ್ರೀಯ ಮಹಿಳಾ ದಿನ' ದಂದು ಬೀದಿಗಳಲ್ಲಿ ಯುದ್ಧ ವಿರೋಧಿ ಘೋಷಣೆಗಳನ್ನು ಕೂಗಿ ಪೋಲೀಸ್, ಸೈನಿಕರ ದಬ್ಬಾಳಿಕೆಯನ್ನು ಲೆಕ್ಕಿಸದೇ ಹೋರಾಟ ನಡೆಸಿದ ಇತಿಹಾಸವಿದೆ. ನಿಜವಾಗಿ ಮಹಿಳೆಯರ ವಿಮೋಚನೆಗೆ ದಾರಿಮೂಡಿದ ರಷ್ಯಾ ಕ್ರಾಂತಿಯಲ್ಲೂ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದು. ಮತದಾನದ ಹಕ್ಕು, ವಿವಾಹ ವಿಚ್ಛೇದನದ ಹಕ್ಕು ಮುಂತಾದ ಹಕ್ಕುಗಳನ್ನು ಅಲ್ಲಿನ ಮಹಿಳೆಯರು ಪಡೆಯಲು ಸಾಧ್ಯಮಾಡಿಕೊಟ್ಟದ್ದು ಕ್ರಾಂತಿಯ ಮೂಲಕ ಬಂದ ಸಮಾಜವಾದೀ ವ್ಯವಸ್ಥೆ ಅಂತೆಯೇ 1936 ರ ಮಾರ್ಚ್ 8 ರಂದು ಸ್ಪ್ಯಾನಿಷ್ ಮಹಿಳೆಯರು ಜನರಲ್ ಫ್ರಾಂಕೋನ ಪ್ಯಾನೆಸ್ವ ಆಳ್ವಿಕೆಯನ್ನು ವಿರೋಧಿಸಿ ನಡೆಸಿದ ಪ್ರತಿಭಟನೆ, 1943 ರ ಮಾರ್ಚ್ 8 ರಂದು ಇಟಲಿಯಲ್ಲಿ ಸಾವಿರಾರು ಮಹಿಳೆಯರು ಮುಸಲೋನಿಯ ವಿರುದ್ಧ ನಡೆಸಿದ ಪ್ರತಿಭಟನಾ ಪ್ರದರ್ಶನ, ವಿಯಟ್ನಾಂ ಮೇಲೆ ಅಮೇರಿಕಾದ ಆಕ್ರಮಣದ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ, ಚಿಲಿಯಲ್ಲಿ 89 ರ ಮಾರ್ಚ್ 8 ರಂದು ಮಿಲಿಟರಿ ಪಡೆಯ ದಮನಕಾರಿ ನೀತಿಯ ವಿರುದ್ಧದ ಹೋರಾಟ ಖೋಮೇನಿಯ ಮೂಲಭೂತವಾದದ ವಿರುದ್ಧ ಟೆಹ್ರಾನ್‌ನಲ್ಲಿ 81 ರ ಮಾರ್ಚ್ 8 ರಂದು ಸಾವಿರಾರು ಮುಸ್ಲಿಂ ಮಹಿಳೆಯರು ಬೀದಿಗಿಳಿದ ಹೋರಾಟ ಹೀಗೆ ಹಲವು ಹತ್ತು ಹೋರಾಟಗಳ ಇತಿಹಾಸದ ಮೂಲಕ ಅಂತರರಾಷ್ಟ್ರೀಯ ಮಹಿಳಾ ದಿನ ಬೆಳೆದುಬಂದಿದೆ. 2000 ರಲ್ಲಿ ಬಡತನ-ದಾರಿದ್ರ್ಯ ವಿರುದ್ಧ ಮಹಿಳೆಯರ ಜಾಗತಿಕ ನಡೆ ಅಭೂತಪೂರ್ವ ಘಟನೆಯಾಗಿದೆ. ಹೀಗೆ ಒಟ್ಟು ಸಮಾಜದ ಸಮಸ್ಯೆಗಳ ಪರಿಹಾರದೊಂದಿಗೆ, ಮಹಿಳೆಯರ ಸಮಸ್ಯೆಗಳಿಗೂ ಪರಿಹಾರ ಸಿಗಲು ಸಾಧ್ಯ ಎಂಬ ದೃಢ ವಿಶ್ವಾಸದೊಂದಿಗೆ ಹೋರಾಟ ನಡೆಸುತ್ತಿರುವ ಹಲವಾರು ಮಹಿಳಾ ಸಂಘಟನೆಗಳು ಸಮೂಹಗಳು ಸೇರಿ ವಿಶ್ವ ಮಹಿಳಾ ಚಳುವಳಿಯಾಗಿ ರೂಪುಗೊಂಡಿದೆ. ○

ಜಾಗತೀಕರಣದ ಧಾಳಿ : ಅಧೋಗತಿಯತ್ತ ಅಸಂಘಟಿತ ಕ್ಷೇತ್ರದ ಮಹಿಳೆಯರು

ಮಹಿಳೆ ಇಂದು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ ಎರಡು ಮುಖಗಳಿವೆ. ಆಕೆ ಶ್ರಮಜೀವಿಯಾಗಿ, ಮತ್ತು ಮಹಿಳೆಯೆಂಬ ಕಾರಣಕ್ಕೆ ಇಬ್ಬಗೆಯ ಶೋಷಣೆ--ದಮನಕ್ಕೆ ಈಡಾಗಿದ್ದಾಳೆ. ಉದಾರೀಕರಣ-ಜಾಗತೀಕರಣದ ಆಕ್ರಮಣದಲ್ಲಿ ಮಹಿಳಾ ಕಾರ್ಮಿಕರ ಪರಿಸ್ಥಿತಿ ಇನ್ನೂ ಶೋಚನೀಯವಾಗುತ್ತಿದೆ. ಮಹಿಳಾ ಕಾರ್ಮಿಕ ವರ್ಗದ ಸಮರ ಸಂಕೇತಿಸುವ ದಿನವಾದ ಮಾರ್ಚ್ 8 ರಂದು ಅಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರ ಸ್ಥಿತಿ-ಗತಿಯನ್ನು ಬಿಚ್ಚಿಟ್ಟಿರುವ ಲೇಖಕಿ 2ನೇ ಕಾರ್ಮಿಕ ಆಯೋಗದ ಶಿಫಾರಸುಗಳಂತಹ ಧಾಳಿಗಳ ಸ್ವರೂಪಗಳೇನು ಎಂದು ವಿವರಿಸಿದ್ದಾರೆ.



ಎಸ್.ವರಲಕ್ಷ್ಮಿ

ನಿರಂತರ ಬೆಲೆ ಏರಿಕೆ, ಉದ್ಯೋಗ ದೊರೆಯದಿರುವುದು ಕಾರ್ಖಾನೆಗಳ ಮುಚ್ಚುವಿಕೆ ಸ್ವಯಂ ನಿವೃತ್ತಿಯಿಂದಾಗಿ ಉದ್ಯೋಗ ಕಳೆದುಕೊಳ್ಳುವುದರಿಂದಾಗಿ ಕುಟುಂಬದಲ್ಲಿನ ಪುರುಷ ಸದಸ್ಯರ ನಿರುದ್ಯೋಗ, ಪಡಿತರ ವ್ಯವಸ್ಥೆಯ ನಾಶ, ಸಾಲ ಹೆಚ್ಚಳಿಕೆ ಇತ್ಯಾದಿ ಕುಟುಂಬದ ನಿರ್ವಹಣೆಯ ಬೆಂಬಲಕ್ಕಾಗಿ ಹೆಚ್ಚೆಚ್ಚು ಮಹಿಳೆಯರು ಕೆಲಸಕ್ಕೆ ಬರುವಂತಾಗಿದೆ. ಗಂಡಂದಿರ ಕುಡಿತದಿಂದಾಗಿಯೂ ತಮ್ಮನ್ನು ಮತ್ತು ತಮ್ಮ ಮಕ್ಕಳನ್ನು ಕಾಪಾಡಿಕೊಳ್ಳಲು ಮಹಿಳೆಯರು ಕೆಲಸ ಮಾಡುವ ಅವಶ್ಯಕತೆ ಉಂಟಾಗಿದೆ. ಸಂಘಟಿತ ವಲಯದಲ್ಲಿನ ಅವಕಾಶ ಕ್ಷೀಣಿಸುತ್ತಿರುವುದರಿಂದ ಈ ಮಹಿಳೆಯರು ಅಸಂಘಟಿತ ವಲಯದಲ್ಲಿ ಮಾತ್ರ ಉದ್ಯೋಗವನ್ನು ಕಂಡುಕೊಳ್ಳುವಂತಾಗಿದೆ. ಉದ್ಯೋಗಕ್ಕೆ ಸೇರುತ್ತಿರುವ ಮಹಿಳೆಯರ ಸಂಖ್ಯೆ ಏರುತ್ತಿರುವಾಗಲೇ ಅವರ ಬದುಕು ಮತ್ತು ಉದ್ಯೋಗದ ಪರಿಸ್ಥಿತಿ ಹದಗೆಡುತ್ತಿದೆ.

ಈಗಾಗಲೇ ತುಂಬಿ ತುಳುಕುತ್ತಿರುವ ಅಸಂಘಟಿತ ವಲಯದಲ್ಲಿ ಅನಿಶ್ಚಯವಾದ, ಗುತ್ತಿಗೆಯ, ತಾತ್ಕಾಲಿಕ, ಅರೆಕಾಲಿಕ, ದಿನಗೂಲಿಯ ತುಂಡು ಕನಿಷ್ಠ ಕೂಲಿಯನ್ನು ಕೊಡದೇ, ಸಮಾನ ವೇತನ, ಭವಿಷ್ಯನಿಧಿ, ಹೆರಿಗೆ ಸೌಲಭ್ಯಗಳು, ಇ.ಎಸ್.ಐ, ಬೋನಸ್, ಸಂಬಳಸಹಿತ ರಜಾದಿನಗಳು ಮುಂತಾದ ಕಲ್ಯಾಣ ಮತ್ತು ಕಾನೂನುಬದ್ಧ ಸೌಲಭ್ಯಗಳು ಇವೆಲ್ಲಾ ನ್ಯಾಯ ಸಮ್ಮತವಾಗಿದ್ದು ಜಾರಿಯಾಗುತ್ತಿಲ್ಲವೋ ಅಂತಹ ಅಸಂಘಟಿತ ವಲಯಗಳಲ್ಲಿ ಮಹಿಳೆಯರು ಶೇ.96 ರಷ್ಟು ದುಡಿಯುತ್ತಿದ್ದಾರೆ.

ಸುಧಾರಣಾ ನೀತಿಗಳು ಹೊಡೆತಗಳು:

ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್ ನಿರ್ದೇಶಿತ ನೀತಿಗಳು ಜನರು ಅದರಲ್ಲೂ ಕಾರ್ಮಿಕವರ್ಗದ ಮೇಲೆ ಹೊರಲಾರದ ಹೊರೆಯನ್ನು ಹೇರುತ್ತಿವೆ. ನಿರುದ್ಯೋಗ ಬಡತನ ಹೆಚ್ಚಾಗಿದೆ. ಈ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳು ದುಡಿಯುವ ಮಹಿಳೆಯರನ್ನು ಅತ್ಯಂತ ತೀಕ್ಷ್ಣವಾಗಿ ಭಾದಿಸುತ್ತಿವೆ.

a)ಅಸಂಘಟಿತ ವಲಯದ ಉದ್ಯೋಗಗಳ ಮೇಲೂ ಹೊಡೆತ:

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಉದ್ಯೋಗಿಗಳನ್ನಾಗಿ ಪಡೆದಿರುವ ಗೋಡಂಬಿ, ತೆಂಗಿನನಾರು, ಆಹಾರ ಸಂಸ್ಕರಣೆ, ಹಾಲು ಉತ್ಪಾದನೆ, ಬೀಡಿ, ಕಟ್ಟಡ, ಅಗರಬತ್ತಿ, ಕೈಮಗ್ಗ, ಪ್ಲಾಂಟೇಶನ್ ಇನ್ನೂ ಮುಂತಾದ ಸಣ್ಣ ಪ್ರಮಾಣದ ಮತ್ತು ಸಾಂಪ್ರದಾಯಿಕ ವಲಯಗಳ ನೂರಾರು ಉದ್ದಿಮೆಗಳು - ಬಹಿರಂಗ ಸಾಮಾನ್ಯ ಪರವಾನಗಿಯಡಿಯಲ್ಲಿ 1750 ವಸ್ತುಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳುತ್ತಿವೆ. ಆದ್ದರಿಂದ ಈ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಸಾವಿರಾರು ಮಹಿಳೆಯರು ಕೆಲಸ ಕಳೆದುಕೊಳ್ಳುತ್ತಿದ್ದಾರೆ.

ಉದಾ- **ಬೀಡಿ:** ರಾಜ್ಯದಲ್ಲಿ 7 ಲಕ್ಷ ಕುಟುಂಬಗಳು ಬೀಡಿ ಉದ್ದಿಮೆಯನ್ನೇ ಅವಲಂಬಿಸಿದೆ. ಆಮದು ನೀತಿಯಿಂದಾಗಿ ಬೇರೆ ದೇಶಗಳಿಂದ ಕಡಿಮೆ ಬೆಲೆಗೆ ಬೀಡಿ ಭಾರತಕ್ಕೆ ಬರುತ್ತಿದೆ. ಸಿಗರೇಟುಗಳಲ್ಲಿ ಮಿನಿ ಸಿಗರೇಟು ಬೀಡಿಯ ರೇಟಿಗೆ ಸಿಗುವುದರಿಂದ ಬೀಡಿಗೆ ಮಾರುಕಟ್ಟೆ ಕ್ರಮೇಣ ಕಡಿಮೆಯಾಗುತ್ತಿದೆ. ಈ ಕ್ಷೇತ್ರದಲ್ಲಿ ಶೇ.100 ಮಹಿಳೆಯರೇ ದುಡಿಯುತ್ತಿದ್ದಾರೆ. 1000



ಬೀಡಿಗೆ 52 ರೂಪಾಯಿ ಕೊಡಬೇಕೆಂದೂ ಕನಿಷ್ಠ ಕೂಲಿ ಕಾನೂನು ಹೇಳಿದೆ. ವಾಸ್ತವವಾಗಿ ಆ ಮಹಿಳೆಗೆ ಸಿಗುವ ಕೂಲಿ 30 ಅಥವಾ 35 ರೂ.ಗಳು ಮಾತ್ರ. ಏಕೆಂದರೆ 1000 ಬೀಡಿಗಳಲ್ಲಿ ಕನಿಷ್ಠ 150 ರಿಂದ 200 ಬೀಡಿ ಸರಿಯಿಲ್ಲವೆಂದೂ ಗುತ್ತಿಗೆದಾರ ಪಕ್ಕಕ್ಕಿಡುತ್ತಾನೆ. ಈ ಮಹಿಳೆಯರಿಗೆ ಖಾಯಂ ಕೆಲಸ ಕೊಡಬೇಕೆಂದಿದ್ದರೂ ಮಾಲೀಕರು ಕಾನೂನುಗಳ ಕಾಯ್ದೆಯ ಸೌಲಭ್ಯಗಳನ್ನು ತಪ್ಪಿಸಲು ಖಾಯಂ ಮಹಿಳಾ ಕೆಲಸಗಾರರಿಗೆ ವಾರಕ್ಕೆ 3 ಅಥವಾ 4 ದಿನಗಳು ಮಾತ್ರ ಕೆಲಸ ಹಾಗೂ ಆ ಕೆಲಸಕ್ಕೂ ಒಳ್ಳೆಯ ಎಲೆ ಮತ್ತು ತಂಬಾಕನ್ನು ಕೊಡದೇ ಸತಾಯಿಸುವುದು ಸಾಮಾನ್ಯವಾಗಿದೆ. ಖಾಯಂ ಅಲ್ಲದ ಅಂದರೆ ಗುರ್ತಿನ ಚೀಟಿ ಲಾಗ್ ಪುಸ್ತಕ, ಪಿ.ಎಫ್. ಇಲ್ಲದ ಮಹಿಳೆಯರಿಗೆ ಹೆಚ್ಚಿನ ಕೆಲಸವನ್ನು ಕೊಟ್ಟು ಕಡಿಮೆ ಕೂಲಿಗೆ ಬೀಡಿ ಕಟ್ಟಿಸುವುದು ಹೆಚ್ಚಾಗಿದೆ. ಕಷ್ಟವಿದೆಯೆಂದು ತಮಗೆ ಕೊಡಬೇಕಾದ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ. ಈ ಸೌಲಭ್ಯಗಳು ಕೂಡಾ ಎಲ್ಲಿ ಆ ಮಹಿಳೆಯರು ಸಂಘಟಿತರಾಗಿದ್ದಾರೋ ಅಲ್ಲಿ ಮಾತ್ರವೇ ದೊರಕುತ್ತಿದೆ. ಈ ಕ್ಷೇತ್ರದಲ್ಲಿ ಮಹಿಳಾ ಬಾಲ ಕಾರ್ಮಿಕರು ಹೆಚ್ಚುತ್ತಿದ್ದಾರೆ.

ಪ್ಲಾಂಟೇಶನ್: ಈ ಕ್ಷೇತ್ರದಲ್ಲಿ ಖಾಯಮಾತಿ ಹೋಗಿ ಗುತ್ತಿಗೆ ಪದ್ದತಿ ಹೆಚ್ಚಾಗುತ್ತಿದೆ. ಪ್ಲಾಂಟೇಶನ್ ಕಾರ್ಮಿಕರಿಗೆ ಕನಿಷ್ಠ ಕೂಲಿ ಕೊಡಬೇಕು, ವಸತಿ ಸೌಲಭ್ಯ, ವಸತಿಯಿರುವ ಕಡೆ ಪ್ರತ್ಯೇಕ ಆಸ್ಪತ್ರೆ, ಶಾಲೆಗಳನ್ನು ಒದಗಿಸಬೇಕೆಂದಿದೆ. ಆದರೆ ಇವೆಲ್ಲವೂ ಸಂಪೂರ್ಣ ಜಾರಿಯಾಗಿಲ್ಲ. ಈ ಮಹಿಳೆಯರು ತೋಟಗಳಲ್ಲಿ ದುಡಿಯುವುದಷ್ಟೇ ಅಲ್ಲದೆ ಮಾಲೀಕರ ಮನೆಗೆಲಸವನ್ನು ಮಾಡಬೇಕಾದ ಪರಿಸ್ಥಿತಿಯಿದೆ. ಈ ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ . ಹೆಚ್ಚಾಗಿ ಲೈಂಗಿಕ ಕಿರುಕುಳಕ್ಕೆ ಒಳಪಡುತ್ತಿದ್ದಾರೆ. ಮೊದಲೆಲ್ಲಾ ಕಾರ್ಮಿಕರನ್ನು ಹುಡುಕಿಕೊಂಡು ಮಾಲೀಕರ ವಾಹನಗಳ ಮುಖಾಂತರ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಕಾರ್ಮಿಕರು ಪ್ಲಾಂಟೇಶನ್ ಬಾಗಿಲುಗಳಲ್ಲಿ ಕಾಯಬೇಕಾಗಿದೆ. ಆಮದು ನೀತಿಯು ಈ ಕೈಗಾರಿಕೆಯ ಮೇಲೆ ತೀವ್ರ ಪರಿಣಾಮ ಬೀರಿದೆ. ಈ ಕಾರ್ಮಿಕರು ಅವಿದ್ಯಾವಂತರಾಗಿರುವುದರಿಂದ ಬೇರೆಡೆ ಕೆಲಸಗಳಿಲ್ಲದೆ ವಲಸೆ ಹೋಗುವ ಪರಿಸ್ಥಿತಿಯಿದೆ.


ಗಾರ್ಮೆಂಟ್ಸ್: ಬೆಂಗಳೂರು ನಗರವೊಂದರಲ್ಲೇ ಅಸಂಖ್ಯಾತ ಕಾರ್ಖಾನೆಗಳು ನೋಂದಣಿಯಾಗಿವೆ. ಇಲ್ಲಿ ತಯಾರಾಗುವ ಬಟ್ಟೆಗಳು ವಿದೇಶಗಳಿಗೆ ಹೆಚ್ಚು ಹೋಗುತ್ತವೆ. ಈ ಕೈಗಾರಿಕೆಗೆ ಸ್ಪರ್ಧೆಯಿದೆ. ಆದ್ದರಿಂದ ಇಲ್ಲಿ ದುಡಿಯುವ ಮಹಿಳೆಯರಿಗೆ 'ವರ್ಕ್ ಟಾರ್ಗೆಟ್'ನ್ನು ಕೊಟ್ಟು ಕೆಲಸ ಮಾಡಿಸುತ್ತಾರೆ. ಹೆಚ್ಚಾಗಿ ವಿಧವೆಯರು, ಗಂಡನಿಂದ ಬೇರ್ಪಟ್ಟಿರುವವರು, ವರದಕ್ಷಿಣೆ ಕೊಡಲಾಗದೇ ಮದುವೆಯಾಗದಿರುವ ಮಹಿಳೆಯರು ದುಡಿಯುತ್ತಾರೆ. ಇಂದಿಗೂ ಇಲ್ಲಿ ಕನಿಷ್ಠ ಕೂಲಿ ಜಾರಿಯಿಲ್ಲ. ಎಷ್ಟೇ ವರ್ಷ ದುಡಿದರೂ ಹೆಲ್ಪರ್ಸ್ 750ರಿಂದ 1500 ರೂ ಆಪರೇಟರ್‌ಗೆ 1200ರಿಂದ 2000

ಸಂಘಟಿತರಾಗಿ ಮಹಿಳಾ ಕಾರ್ಮಿಕರಿಗೆ ಕೇವಲ ಹಿಂಬಾಲಕರಾಗದೇ ನಮ್ಮ ಹಕ್ಕುಗಳನ್ನು, ಘನತೆಯನ್ನು ರಕ್ಷಿಸುವ ಬದುಕಿನ ಅಭಿವೃದ್ಧಿಗಾಗಿ ಹಗಲು ಕೂಡಾ ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕಾಗಿದೆ.

ಕಾರ್ಮಿಕ ಸಂಘಗಳಲ್ಲಿ ಲಿಂಗ ವಿಭಜನೆಗೆ ಪ್ರೋತ್ಸಾಹ

ಮಹಿಳಾ ಕಾರ್ಮಿಕರ ಸಂಘಟನೆಯನ್ನು ಪ್ರೋತ್ಸಾಹಿಸುವ ಹೆಸರಿನಲ್ಲಿ ಆಯೋಗ ಹೀಗೆ ಶಿಫಾರಸ್ಸು ಮಾಡಿದೆ. "ಸರಕಾರ ಮಹಿಳಾ ಕಾರ್ಮಿಕರ ಸದಸ್ಯತ್ವ ಆಧಾರಿತ ಸಂಘಟನೆಗಳನ್ನು ಕಾರ್ಮಿಕ ಸಂಘ ಕಾಯ್ದೆಯಡಿ ವ್ಯಾಪಕವಾಗಿ ನೋಂದಾಯಿಸಿಕೊಳ್ಳಲು ಹಾಗೂ ರಫ್ತು ಸಂಸ್ಕರಣಾ ವಲಯಗಳಲ್ಲಿ ಮಹಿಳಾ ಕಾರ್ಮಿಕರನ್ನು ರಕ್ಷಿಸಲು ಅವುಗಳಿಗೆ ಮಾನ್ಯತೆ ನೀಡಲು ಅವಕಾಶ ನೀಡಬೇಕು." ಇದು ಲಿಂಗದ ಆಧಾರದಲ್ಲಿ ಕಾರ್ಮಿಕ ಆಂದೋಲನವನ್ನು ಛಿದ್ರಗೊಳಿಸಲು ದಾರಿ ಮಾಡಿಕೊಡುತ್ತದೆ. ಉದಾರೀಕರಣ, ಜಾಗತೀಕರಣದ ಧೋರಣೆಗಳ ಫಲವಾಗಿ ಮಹಿಳಾ ಕಾರ್ಮಿಕರ ಜೀವನ ಪರಿಸ್ಥಿತಿಗಳ ಮೇಲೆ ಮಾಲೀಕರ ಹೆಚ್ಚುತ್ತಿರುವ ಧಾಳಿಗಳ ವಿರುದ್ಧ ಹೋರಾಡಲು ಮಹಿಳಾ ಕಾರ್ಮಿಕರು ಹೆಚ್ಚು ಸಂಘಟಿತರಾಗಬೇಕು. ಮತ್ತು ಕಾರ್ಮಿಕ ವರ್ಗದ ತಮ್ಮ ಸೋದರರೊಂದಿಗೆ ಹೆಚ್ಚು ಸಕ್ರಿಯ ಪಾತ್ರವಹಿಸಬೇಕು. ಇಂದು ಕೂಡಾ ಹಲವು ಸಂಸ್ಥೆಗಳಲ್ಲಿ ಮಾಲೀಕರು ಸಂಬಳಗಳನ್ನು ಕೆಳಮಟ್ಟಕ್ಕೆ ತರಲು ಕಾರ್ಮಿಕ ಆಂದೋಲನವನ್ನು ವಿಫಲಗೊಳಿಸಲು ಮಹಿಳಾ ಕಾರ್ಮಿಕರನ್ನು ಬಳಸಿಕೊಳ್ಳುತ್ತಾರೆ. ಮಹಿಳೆಯರ 'ಸದಸ್ಯತ್ವ ಆಧಾರಿತ ಸಂಘಟನೆಗಳು' ಕಾರ್ಮಿಕ ಆಂದೋಲನವನ್ನು ಲಿಂಗದ ಆಧಾರದಲ್ಲಿ ವಿಭಜಿಸಿ ಮಾಲಿಕರಿಗೆ ಪುರುಷ ಮತ್ತು ಮಹಿಳಾ ಕಾರ್ಮಿಕರಿಬ್ಬರ ಶೋಷಣೆಯನ್ನು ಹೆಚ್ಚಿಸಲು ನೆರವಾಗಬಹುದಷ್ಟೆ. ಕಾರ್ಮಿಕ ಆಂದೋಲನದ ಈ ಕೃತಕ ಅಪಾಯಕಾರಿ ವಿಭಜನೆಯನ್ನು ವಿರೋಧಿಸಲೇಬೇಕು.

ಮಾತ್ರ. ಕನಿಷ್ಠ 10 ಗಂಟೆಗಳ ಕೆಲಸ, ಹೆಚ್ಚಿನ ಅವಧಿಯ ಕೆಲಸಕ್ಕೆ OT (over time) ಹೆಚ್ಚಿನ ಕೂಲಿ ಇಲ್ಲ. ಈ ಮಹಿಳೆಯರು ತಮಗೆ ಅಗತ್ಯವಿದ್ದಾಗ ರಜೆ ಮಾಡುವ ಹಾಗಿಲ್ಲ. ಆಡಳಿತ ವರ್ಗದ ಪರ್ಮಿಷನ್ ಇಲ್ಲದೆ ಕೆಲಸಕ್ಕೆ ರಜೆ ಹಾಕಿದರೆ ಕೆಲಸವೇ ಇಲ್ಲ. ಕಿಲೋ ಮೀಟರ್‌ಗಳಿಂದ ಪ್ರಯಾಣ ಮಾಡಿ ಬರುವಾಗ 5-10 ನಿಮಿಷ ಲೇಟಾದರೆ ಅಂದು ಕೆಲಸವಿಲ್ಲ, ರಸ್ತೆ ಬದಿಗಳಲ್ಲಿ ಕುಳಿತು ಊಟ ಮಾಡಬೇಕು, 20 ಮಹಿಳೆಯರು ಕೆಲಸ ಮಾಡುವ ಕಡೆಗಳಲ್ಲಿ ಕ್ರಷ್ ಹಾಗೂ ವಿಶ್ರಾಂತಿ ಗೃಹಗಳನ್ನು ಕಲ್ಪಿಸಬೇಕೆಂದಿದ್ದರೂ ಹಲವಾರು ಕಾರ್ಖಾನೆಗಳಲ್ಲಿ ಈ ಸೌಲಭ್ಯ ಇಲ್ಲ. ಕಾರ್ಖಾನೆಯೊಳಗೆ ನೈಸರ್ಗಿಕ ಕ್ರಿಯೆಗಳಿಗೆ ಅಂದರೆ ಶೌಚಾಲಯಕ್ಕೆ ಹೋಗಬೇಕಿದ್ದರೆ ಒಬ್ಬ ಕಾರ್ಮಿಕಳಿಗೆ ಒಂದು ದಿನದಲ್ಲಿ ಒಂದು ಬಾರಿ ಮಾತ್ರ ಶೌಚಾಲಯಕ್ಕೆ ಹೋಗುವ ಅವಕಾಶ. ಅಂದರೆ ನೂರಾರು ಮಹಿಳೆಯರು ದುಡಿಯುವ ಈ ಕಾರ್ಖಾನೆಗಳಲ್ಲಿ ಕಡಿಮೆ ಶೌಚಾಲಯಗಳಿರುವುದರಿಂದ ಟೋಕನ್ ಪದ್ಧತಿಯಿದೆ. ಒಂದು ಗುಂಪು (3-4 ಜನ) ಹೋಗಿ ಬರುವ ತನಕ ಇನ್ನೊಂದು ಗುಂಪು ಕಾಯಬೇಕು. ಈ ವಿಷಾದದ ಸಂಗತಿಗೆ ನಾಗರೀಕ ಸಮಾಜ ತಲೆ ತಗ್ಗಿಸಬೇಕಿದೆ.

> 
>
> **ಪಂಚನಾಮೆ**
>
> ಬೆಂಕಿಗಾಹುತಿಯಾಗಿ ಸುಟ್ಟುಹೋದ
> ನನ್ನ ಶರೀರದ ಅವಶೇಷಗಳ ಬೂದಿ
> ತುಸುತುಸುವೇ ಸರಿಸಿದರೆ ಪಕ್ಕಕೆ
> ಮುದ್ದೆ ಕರಕಲು ಮಾಂಸದ ಮಧ್ಯೆ
> ಎದ್ದುಕಾಣುವ ಬಿಳಿದಾದ
> ನನ್ನ ಬಲಗಾಲಿನ ಮೂಳೆ
> ಮಧ್ಯ ಸೀಳುಬಿಟ್ಟದ್ದು
> ಸತ್ಯವನು ಸಾರಿ ಸಾರಿ ಹೇಳುತ್ತಿದ್ದರೂ
> ಪೊಲೀಸರು ಅಧಿಕಾರಿಗಳು ಬಂದರು
> ಮಹಜರು - ಪಂಚನಾಮೆ ನಡೆಸಿದರು
> ವರದಿಯಲ್ಲಿ ದಾಖಲಿಸಿ ಹೋದರು
> ಇದು ಆತ್ಮಹತ್ಯೆಯ ಪ್ರಕರಣವೆಂದು.
>
> **- ಕೆ.ಶರೀಫರ ಕವನಗಳು**
> (ಪಾಂಚಾಲಿ ಸಂಕಲನದಿಂದ)

ಇಲ್ಲಿ ವರ್ಕ್ ಟಾರ್ಗೆಟ್ ಇರುವುದರಿಂದ ಮೇಲ್ವಿಚಾರಕರು ಗಂಡಸರೇ ಆಗಿರುವುದರಿಂದ ಸಹಜವಾಗಿ ಲೈಂಗಿಕ ಕಿರುಕುಳಕ್ಕೊಳಗಾಗುವ ಹಲವಾರು ಸಂದರ್ಭಗಳೇ ಹೆಚ್ಚಾಗಿವೆ. ಮೂಲಭೂತ ಹಕ್ಕಾದ ಹೆರಿಗೆ ಸೌಲಭ್ಯ ಪಡೆಯಲು ಈ ಮಹಿಳೆಯರು ಕೆಲಸಕ್ಕೆ ರಾಜಿನಾಮೆ ಕೊಟ್ಟು ಹೆರಿಗೆ ನಂತರ ಹೊಸದಾಗಿ ಕೆಲಸಕ್ಕೆ ನೇಮಕವಾಗಬೇಕು. ಇನ್ನು ಕ್ರಷ್ ಸೌಲಭ್ಯ ಎಲ್ಲಿ? ಕಾರ್ಮಿಕ ಕಾನೂನುಗಳು ಬಲವಾಗಿದ್ದರೂ ಅವುಗಳ ಜಾರಿಯಾಗದೇ ಅಸಂಘಟಿತ ಕ್ಷೇತ್ರದ ಮಹಿಳೆಯರ ಪರಿಸ್ಥಿತಿ ದಯನೀಯವಾಗಿದೆ.

ಶೋಷಣೆ ಹೆಚ್ಚಿಸುವ ಆಯೋಗ

ಇಂತಹ ಕ್ಷೇತ್ರಕ್ಕೆ ಮತ್ತು ದುಡಿಯುವ ವರ್ಗಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇವರನ್ನು ಶೋಷಿಸಲು ಇನ್ನಷ್ಟು ಸಹಾಯಕವಾಗುವ ಹಾಗೆ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು ರಚಿಸಿ ಅದರ ಶಿಫಾರಸುಗಳನ್ನೊಪ್ಪಲು ಮುಂದಾಗಿದೆ. ಕಾರ್ಮಿಕರು ತಮ್ಮ ಬೇಡಿಕೆಗಳ ಸಲುವಾಗಿ ಮುಷ್ಕರ ಮಾಡಬೇಕಾದರೆ ಶೇ.51 ಕಾರ್ಮಿಕರ ಮತ ಅಥವಾ ಸಹಿ ಬೇಕು ಇಲ್ಲದಿದ್ದರೆ ಅಂತಹ ಮುಷ್ಕರಗಳನ್ನು ಕಾನೂನು ಬಾಹಿರವೆಂದೂ, ಸಂಘದ ನೋಂದಾವಣೆಯನ್ನು 3 ವರ್ಷಗಳ ಕಾಲ ನಿಷೇಧಿಸಬಹುದೆಂದಿದೆ. ಕೆಲಸದ ಭದ್ರತೆಯಿಲ್ಲದ ಈ ಕ್ಷೇತ್ರದಲ್ಲಿ ಇನ್ನು ಮುಂದೆ ಮುಷ್ಕರ ಮಾಡಲು ಅಸಾಧ್ಯವಾಗಿದೆ. ಇದೇ ಆಯೋಗ ಕಾರ್ಮಿಕರಿಗೆ ಆರೋಗ್ಯ ಪಾಲನೆ, ವೃದ್ಧಾಪ್ಯ ಸೌಲಭ್ಯ ಸೇರಿದಂತೆ ಸರ್ವವ್ಯಾಪಿ ಹಾಗೂ ಬಹುಪ್ರಯೋಜನಕಾರಿ ಸಾಮಾಜಿಕ ಭದ್ರತೆಯನ್ನು ಒದಗಿಸಲು ನಿರ್ದಿಷ್ಟ ಕ್ರಮಗಳನ್ನು ಶಿಫಾರಸ್ಸು ಮಾಡುತ್ತಲೇ ಆಯೋಗ ಈ ಪ್ರಯೋಜನಗಳನ್ನು ಗಳಿಸಲು ಅವರ ಸ್ವಂತ ವಂತಿಗೆಯ ಮೇಲೆಯೇ ಹೆಚ್ಚು ಗಮನ ಕೇಂದ್ರೀಕರಿಸಿದೆ.

ದುಡಿಯುವ ಮಹಿಳಾ ವಿರೋಧಿ ಶಿಫಾರಸ್ಸುಗಳು

ಸಾಧಾರಣವಾಗಿ ಎಲ್ಲಾ ಕ್ಷೇತ್ರದ ದುಡಿಯುವ ಮಹಿಳೆಯರು ಒಂದಲ್ಲ ಒಂದು ರೀತಿಯಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಪಡಬೇಕಾದ ಸಂದರ್ಭಗಳು ಹೆಚ್ಚಿವೆ. 1997 ರಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ಸುಪ್ರಿಂ ಕೋರ್ಟ್‌ನ ತೀರ್ಪು ಹಿಂದೆ ಈ ಬಗ್ಗೆ ಒಂದು ಕಾನೂನು ರಚಿಸಬೇಕು ಎಂದು ಸರ್ಕಾರಕ್ಕೆ ನಿರ್ದೇಶನವಿತ್ತು 5 ವರ್ಷಗಳಾದರೂ ಇದುವರೆಗೂ ಯಾವುದೇ ಕಾನೂನು ಮಾಡಿಲ್ಲ.

ಈ ಸಮಸ್ಯೆಯನ್ನು ಆಯೋಗ ಒಪ್ಪಿದೆಯಾದರೂ ಯಾವುದೇ ಪರಿಹಾರ ಸೂಚಿಸಿಲ್ಲ. 20ಕ್ಕಿಂತ ಹೆಚ್ಚು ಅಥವಾ 50ಕ್ಕಿಂತ ಕಡಿಮೆ ಕಾರ್ಮಿಕರನ್ನು ದುಡಿಸಿಕೊಳ್ಳುವ ಸಂಸ್ಥೆಗಳಿಗೆ ಸೂಚಿಸಿರುವ ಮಾದರಿ ಸ್ಥಾಯಿ ಆದೇಶಗಳಲ್ಲಿ ನೀಡಿದ, ಯಾವುದು ದುರ್ವರ್ತನೆ? ಎಂಬ ದೊಡ್ಡ ಪಟ್ಟಿಯಲ್ಲಿ ಮಹಿಳಾ ಕಾರ್ಮಿಕರಿಗೆ ಲೈಂಗಿಕ ಕಿರುಕುಳ ನೀಡುವುದನ್ನು ಸೇರಿಸಿದೆ.

ಉದಾರೀಕರಣದೊಂದಿಗೆ ಮಹಿಳೆಯರು ಓವರ್ ಟೈಂ ಮತ್ತು ರಾತ್ರಿ ಪಾಳಿಗಳಲ್ಲಿ ದುಡಿಯಬೇಕೆನ್ನುತ್ತಾರೆ ಮಾಲೀಕರು. ಇದಕ್ಕನುಸಾರವಾಗಿ ಫ್ಯಾಕ್ಟರಿ ಕಾನೂನನ್ನು ತಿದ್ದುಪಡಿ ಮಾಡಲು ಭಾರತ ಸರ್ಕಾರ ನಿರ್ಧರಿಸಿದೆ. ರಾಜ್ಯದಲ್ಲಿ ಬಹಳಷ್ಟು ವರ್ಷಗಳ ಹಿಂದೆಯೇ ಅನುಮತಿ ನೀಡಿದೆ. "ಒಂದು ಸಂಸ್ಥೆಯಲ್ಲಿ ರಾತ್ರಿ ಪಾಳಿಯಲ್ಲ ಮಹಿಳೆಯರ ಸಂಖ್ಯೆ 5ಕ್ಕಿಂತ ಕಡಿಮೆ ಇಲ್ಲದಿದ್ದರೆ ಮತ್ತು ಆಡಳಿತ ಮಂಡಳಿ ಅವರ ಸಾರಿಗೆ ಸುರಕ್ಷಿತತೆ ಹಾಗೂ ಪಾಳಿಯ ಮೊದಲು ಮತ್ತು ನಂತರ ವಿಶ್ರಾಂತಿಗೆ ತೃಪ್ತಿಕರ ವ್ಯವಸ್ಥೆಯನ್ನು ಒದಗಿಸಲು ಸಾಧ್ಯವಿದ್ದರೆ ಮಾತ್ರ ಕೆಲಸ ಮಾಡಿಸಬೇಕು. ಆದರೆ ನಮ್ಮ

ಅಸಮಾನ ವೇತನ

ಕಬ್ಬು ನಾಟಿ ಕೆಲಸದಲ್ಲಿ ತಲಾ 300 ರೂಪಾಯಿ ಕೂಲಿ ಕೇಳುವ 8 ಜನ ಗಂಡಾಳುಗಳನ್ನು ತೆಗೆದು ತಲಾ 200 ರೂಪಾಯಿ ಕೂಲಿಗೆ ಕೆಲಸ ಮಾಡುವ 10 ಜನ ಹೆಣ್ಣಾಳುಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಒಟ್ಟು 400 ರೂಪಾಯಿ ಉಳಿತಾಯ ಮಾಲೀಕನಿಗೆ. ಕನಿಷ್ಠ ಕೂಲಿ ಕಾಯಿದೆಯನ್ನು ಉಲ್ಲಂಘಿಸಿ ಹಾಗೂ ಮಹಿಳೆಯರಿಗೆ ವೇತನದಲ್ಲಿ ತಾರತಮ್ಯ ಮಾಡಿ ಆಂಧ್ರಪ್ರದೇಶದ ಜಮೀನ್ದಾರರು ವರ್ಷಕ್ಕೆ ಸುಮಾರು 2,500 ಕೋಟಿ ರೂಪಾಯಿ ಲಾಭಗಳಿಸುತ್ತಿದ್ದಾರೆ.

ಕೇರಳದಲ್ಲಿ, ಅಂಚೆ ಮತ್ತು ತಂತಿ ಇಲಾಖೆಯಲ್ಲಿ 4ನೇ ದರ್ಜೆ ನೌಕರರಾಗಿ ಕೆಲಸ ಮಾಡುತ್ತಿದ್ದ ಮಹಿಳೆಯರ ಮುಂದೆ ಒಂದು ದಿನ ಧುತ್ತೆಂದು ಒಂದು ಅರ್ಜಿ ಬಂತು. ನಿಮಗೆಷ್ಟು ದಿನಗೂಲಿ ಬೇಕು ಎಂಬುದು ಆ ಅರ್ಜಿಯ ಒಂದು ಪ್ರಶ್ನೆ. ಈ ಕಾಲಂನಲ್ಲಿ ಅತ್ಯಂತ ಕಡಿಮೆ ಮೊತ್ತ ಸೂಚಿಸಿದ್ದವರಿಗೆ ಕೆಲಸ ಸಿಕ್ಕಿತು. ಹೆಚ್ಚು ಕೇಳಿದವರಿಗೆ ಕೊಕ್ ಕೊಟ್ಟರು.

ಅನುಭವ ಯಾವುದೇ ಸೌಲಭ್ಯಗಳನ್ನು ಕೊಡದೇ ರಾತ್ರಿ ಪಾಳಿಯಗಳಲ್ಲಿ ಕೆಲಸ ಮಾಡಿಸುತ್ತಿರುವುದು."

ಹೆರಿಗೆ ಸೌಲಭ್ಯ: ಹೆರಿಗೆ ಸೌಲಭ್ಯವನ್ನು ಎಲ್ಲಾ ಕ್ಷೇತ್ರಗಳಲ್ಲಿ ಜಾರಿ ಮಾಡಬೇಕೆಂದೂ ಹೇಳಿದೆ. ಕಾನೂನಿನ ಯೋಜನೆಯನ್ನು ಸಾಮಾಜಿಕ ವಿಮೆಯಾಗಿ ಪರಿವರ್ತಿಸುವುದು ಅಗತ್ಯ ಹೆರಿಗೆ ಸೌಲಭ್ಯ ಕಾನೂನನ್ನು ಇಎಸ್ಐ ಕಾನೂನಿನೊಂದಿಗೆ ಸಮಗ್ರೀಕರಿಸಿದರೆ ಈ ಗುರಿ ಈಡೇರಬಹುದು. ಸಾಧ್ಯವಿಲ್ಲದಿದ್ದರೆ ಒಂದು ಪ್ರತ್ಯೇಕ ಸಾ.ವಿಮಾ ಯೋಜನೆಯನ್ನು ಕೇವಲ ಹೆರಿಗೆ ಸೌಲಭ್ಯಕ್ಕಾಗಿ ಅಥವಾ 'ಕೆಲಸದಲ್ಲಿ ಗಾಯ ಸೌಲಭ್ಯ'ದೊಂದಿಗೆ ನೀಡುವ ಬಗ್ಗೆ ಪರಿಶೀಲಿಸಬಹುದು" ಎಂದಿದೆ. ಅಂದರೆ ಕೆಲಸ ಭದ್ರತೆಯಿಲ್ಲದೆ, ಕನಿಷ್ಠ ಕೂಲಿಯೂ ಇಲ್ಲದ ಅಸಂಘಟಿತ ಕ್ಷೇತ್ರದ ಮಹಿಳೆಯರು ತಮ್ಮ ಹೆರಿಗೆ ಸೌಲಭ್ಯಕ್ಕಾಗಿ ವಿಮೆಯ ಮೂಲಕ ಹಣ ತೆರಬೇಕು.

ಅಸಮಾನ ಕೂಲಿ: ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚು ಅಸಮಾನ ಕೂಲಿಗಳು ಉದಾ: ಮಹಿಳಾ ಕೃಷಿ ಕಾರ್ಮಿಕರು, ಅಂಗಡಿ ಮತ್ತು ಕಟ್ಟಡ ಕೆಲಸಗಾರರು "ಸಂಬಳದ ವಿಷಯದಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರಲ್ಲಿ ಬೇಧ ಭಾವವಿರುವುದಿಲ್ಲ ಮತ್ತು ಒಂದೇ ಮಾಲೀಕನ ಅಡಿಯಲ್ಲಿರುವ ಎಲ್ಲಾ ಕಾರ್ಮಿಕರಿಗೆ ಸಮಾನ ಅಥವಾ ಅದೇ ರೀತಿಯ ಕೆಲಸಕ್ಕೆ ಸಮಾನ ಸಂಬಳ ನೀತಿ ಅನ್ವಯಿಸುತ್ತದೆ" ಎಂದಷ್ಟೇ ಹೇಳಿದೆ ಅನುಷ್ಠಾನದ ಬಗ್ಗೆ ಒತ್ತು ಕೊಟ್ಟಿಲ್ಲ.

ಅಂಗನವಾಡಿ ಕಾರ್ಮಿಕರು: ಅರ್ಥವಿಲ್ಲದ ಶಿಫಾರಸ್ಸುಗಳು

ಐಸಿಡಿಎಸ್ ಯೋಜನೆಗಳನ್ನು 3 ವರ್ಷದೊಳಗೆ ಮಕ್ಕಳನ್ನು ಸೇರಿಸುವಂತೆ ಪುನಃ ರೂಪಿಸಬೇಕಾದ ಅಗತ್ಯವಿದೆ. ಅನುಷ್ಠಾನ ಮತ್ತು ಹಣ ನೀಡಿಕೆಗಳಲ್ಲಿ ಈಗಿರುವ ದೌರ್ಬಲ್ಯಗಳನ್ನು ಸರಿಪಡಿಸಬೇಕಾಗಿದೆ. ವೇತನಗಳು, ಕೆಲಸದ ಪರಿಸ್ಥಿತಿ, ಮಕ್ಕಳ ಪಾಲನೆ, ಕೆಲಸಗಾರರ ತರಬೇತಿ ಮತ್ತು ಯೋಗ್ಯತಾ ಪತ್ರ ಇವನ್ನೆಲ್ಲಾ ಧೋರಣೆಯ ಮಟ್ಟದಲ್ಲಿ ಪರಿಶೀಲಿಸಬೇಕಾದ ಅಗತ್ಯವಿದೆ.

ಅಂಗನವಾಡಿ ಮತ್ತು ಬಾಲವಾಡಿ ನೌಕರರ ಸಂಬಳ, ಸಾಮಾಜಿಕ ಭದ್ರತೆಯ ಬಗ್ಗೆ ಆಯೋಗ ಹೀಗೆಂದಿದೆ "ಅಂಗನವಾಡಿ ಕೆಲಸಗಾರರು ಮತ್ತು ಬಾಲವಾಡಿ ಕೆಲಸಗಾರರು ಗೌರವಧನ ಎಂಬ ಕೇವಲ ನಾಮಮಾತ್ರದ ಸಂಬಳಗಳನ್ನು ಪಡೆಯುತ್ತಾರೆ. ಇಂತಹ ಕೆಲಸಗಾರರನ್ನು ಅಸಂಘಟಿತ ವಲಯದ ಭಾಗವಾಗಿ ಪರಿಗಣಿಸಲಾಗುತ್ತದೆ. ಅವರು ಕೂಲಿ ಮತ್ತು ಸಂಬಂಧಪಟ್ಟ ಸಾಮಾಜಿಕ ಭದ್ರತೆ ಕ್ರಮಗಳಿಗೆ ಅರ್ಹವಾಗಿದ್ದಾರೆ. ಇದನ್ನು ಅಸಂಘಟಿತ ಕಾರ್ಮಿಕರಿಗಾಗಿ ಶಾಸನದಲ್ಲಿ ಸೂಚಿಸುತ್ತೇವೆ."

ಶಾಸನಬದ್ಧ ಕನಿಷ್ಠ ವೇತನಕ್ಕೆ ಅಂಗನವಾಡಿ ನೌಕರರ ಅರ್ಹತೆಯನ್ನು ಒತ್ತಿ ಹೇಳಿದ ನಂತರ ಅದೇ ಸಮಯದಲ್ಲಿ ಆಯೋಗ ಇಂತಹ ಸಾಧ್ಯತೆಯನ್ನು ತಳ್ಳಿಹಾಕಿದೆ. ಈ ಯೋಜನೆ "ಹಣಕ್ಕಾಗಿ ಸಂಪೂರ್ಣವಾಗಿ ಸರಕಾರವನ್ನು ಅವಲಂಬಿಸಿರುವುದು ಅದರ ತಾಳಿಕೆ ಸಾಮರ್ಥ್ಯದ ಅಭಾವವನ್ನು ಇನ್ನಷ್ಟು ಹೆಚ್ಚಿಸುತ್ತದೆ" ಸದ್ಯಕ್ಕೆ ಐಸಿಡಿಎಸ್ ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಹಾಗೂ ನಗರದ ಕೊಳಚೆ ಪ್ರದೇಶಗಳಲ್ಲಿ ಬಡ ಮತ್ತು ಪೋಷಿತ ಮಕ್ಕಳಿಗೆ ರೂಪಿಸಿದ ಕೆಲವೇ ಉತ್ತಮ ಯೋಜನೆಗಳಲ್ಲಿ ಒಂದಾಗಿದೆ. ಇತ್ತೀಚೆಗೆ ಸರ್ಕಾರ ಈ ಯೋಜನೆಯಿಂದ ಹೊರಬರಲು ಸ್ವಯಂ ಸೇವಾ ಸಂಘಗಳಿಗೆ ಮತ್ತು ಪಂಚಾಯತಿಗಳಿಗೆ ವಹಿಸಿಕೊಡಲು ಹಲವು ಪ್ರಯತ್ನ ನಡೆಸಿದೆ. ದೇಶದಾದ್ಯಂತ ಅಂಗನವಾಡಿ ನೌಕರರು ಇದನ್ನು ಬಲವಾಗಿ ವಿರೋಧಿಸಿದ್ದಾರೆ. ಅದರಿಂದಾಗಿ ಸರ್ಕಾರ ಸ್ವಲ್ಪ ಮಟ್ಟಿಗೆ ಹಿಂದೆ ಸರಿಯುವಂತಾಗಿದೆ. ಈ ಹಿನ್ನೆಲೆಯಲ್ಲಿ ಆಯೋಗದ ಈ ಅಭಿಪ್ರಾಯ ಈ ಯೋಜನೆಯಿಂದ ಹೇಗಾದರೂ ತಪ್ಪಿಸಿಕೊಳ್ಳುವ ಪ್ರಯತ್ನಗಳನ್ನು ಮುಂದುವರಿಸಲು ಸರ್ಕಾರಕ್ಕೆ ಪ್ರೋತ್ಸಾಹ ನೀಡುತ್ತದೆ. ಈ ಮೂಲಕ ಅಂಗನವಾಡಿ ನೌಕರರ ಪ್ರಯೋಜನಕ್ಕೆ ನೀಡಿರುವ ಅದರ ಇತರ ಶಿಫಾರಸ್ಸುಗಳು ಅರ್ಥವಿಲ್ಲದ್ದಾಗಿದೆ.

ಕಣ್ಣೊರೆಸುವ ತಂತ್ರ:

ಒಟ್ಟಿನಲ್ಲಿ 2ನೇ ರಾಷ್ಟ್ರೀಯ ಕಾರ್ಮಿಕ ಆಯೋಗ ಅಸಂಘಟಿತ ಕ್ಷೇತ್ರ ಮತ್ತು ಇತರ ವಲಯಗಳ ದುಡಿಯುವ ಮಹಿಳೆಯರ ಪರಿಸ್ಥಿತಿಯ ಬಗ್ಗೆ ಕೇವಲ ಲಿಖಿತ ರೂಪದಲ್ಲಿ ಹೇಳಿದೆಯಾದರೂ ಆ ಕಾನೂನುಗಳ ಪ್ರಾಯೋಗಿಕ ಜಾರಿಗೆ ಯಾವುದೇ ಕ್ರಮವನ್ನು ವಹಿಸದಿರುವುದು ಕಣ್ಣೊರೆಸುವ ತಂತ್ರವಾಗಿದೆ.


ಸಮರಾಂಗಣಕ್ಕೆ

'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕೇವಲ ಆಚರಣೆಯಾಗದೇ ತಮ್ಮ ಹಕ್ಕುಗಳನ್ನು, ದೇಶವನ್ನು ಕಾಪಾಡುವ, ಬದುಕಿನ ವಿಮೋಚನೆಗಾಗಿ ಪಣ ತೊಟ್ಟು ಹೋರಾಟದ ಸಮರಾಂಗಣ ಇಳಿಯಬೇಕಾಗಿದೆ.

(ಲೇಖಕರು ಸಿಐಟಿಯು ವಿನ ರಾಜ್ಯಕಾರ್ಯದರ್ಶಿಗಳು, ಅಂಗನವಾಡಿ ನೌಕರರ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆಗಿದ್ದಾರೆ.)

ಕೌಟುಂಬಿಕ ಹಿಂಸಾಚಾರ ಮತ್ತು ಕಾನೂನುಗಳು

ಹೆಣ್ಣು ಭ್ರೂಣಗಳನ್ನು ಹೊಸಕಿ ಹಾಕುವುದು, ಶಿಶುಗಳನ್ನು ಹತ್ಯೆ ಮಾಡುವುದು, ವರದಕ್ಷಿಣೆ ಹಿಂಸೆಗೆ ಗುರಿಪಡಿಸುವುದು, ಕೀಳು ಭಾಷೆಯಲ್ಲಿ ನಿಂದಿಸುವುದು, ಹೊಡೆಯುವುದು, ಕೊಲ್ಲುವುದು, ಲೈಂಗಿಕ ಕಿರುಕುಳ ನೀಡುವುದು, ವಂಚಿಸುವುದು ಮುಂತಾದಂತಹ ಕೌಟುಂಬಿಕ ದೌರ್ಜನ್ಯಗಳು ಗಾಬರಿ ಹುಟ್ಟಿಸುವಷ್ಟು ಹೆಚ್ಚಾಗುತ್ತಿವೆ. ಮನೆಯೊಳಗೆ ನಡೆಯುವ ಈ ಹಿಂಸಾಚಾರ ಸಮಾಜಕ್ಕೆ ಒಪ್ಪಿತವಾಗಿದೆಯಾದರೂ ಮಹಿಳೆಯರನ್ನು ಬಿಟ್ಟು ಸಮಾಜದ ಕಲ್ಪನೆಯನ್ನು ಪಡೆಯುವುದು ಸಾಧ್ಯವೆ? ಇಂತಹ ಅನಿಷ್ಟಗಳು ನಿರ್ಧಿಷ್ಟವಾಗಿ ಮಹಿಳೆಯರನ್ನು ಬಾಧಿಸುತ್ತಿರುವಾಗ ಇವುಗಳನ್ನು ಸಾಮಾಜಿಕ ಸವಾಲುಗಳೆಂದೇ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ಆಲೋಚಿಸುವ ಮಹಿಳಾ ಕಾನೂನುಗಳ ಜಾರಿ ಮುಂತಾದ ಸ್ಥಿತಿ ಬಗ್ಗೆ ಬೆಳಕು ಚೆಲ್ಲುವ ಕಿರು ಲೇಖನ ಇಲ್ಲಿದೆ.



ಎನ್.ಪ್ರಭಾ

ಇತ್ತೀಚಿನ ಜನಗಣತಿಯ ಪ್ರಕಾರ ಭಾರತದಲ್ಲಿ ಪುರುಷರಿಗಿಂತ ಮೂರು ಕೋಟಿ ಹದಿನೆಂಟು ಲಕ್ಷದ ನಲವತ್ತೆಂಟು ಸಾವಿರದ ಏಳುನೂರ ಇಪ್ಪತ್ತೆಂಟು ಸಂಖ್ಯೆಯ ಮಹಿಳೆಯರು ಕಡಿಮೆಯಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶುಗಳ ಹತ್ಯೆ ಎಂದು ಗುರುತಿಸಲಾಗಿದೆ.

ಅಂದರೆ ಮಹಿಳೆಯರ ಮೇಲಿನ ದೌರ್ಜನ್ಯ ಇಲ್ಲಿಂದಲೇ ಪ್ರಾರಂಭ ವಾಯಿತೆನ್ನಲು ಏನೇನು ಅಡ್ಡಿಯಿಲ್ಲ. ಭ್ರೂಣ ಪರೀಕ್ಷೆ ಮತ್ತು ಹತ್ಯೆ ಕಾನೂನಿನ ಪ್ರಕಾರ ಅಪರಾಧ. 10 ಸಾವಿರ ದಂಡ ಹಾಗೂ ಮೂರು ವರ್ಷ ಸೆರೆವಾಸವನ್ನು ಇದಕ್ಕೆ ವಿಧಿಸಲಾಗಿದೆ. ಆದರೂ ಈ ಅಪರಾಧಗಳ ಸಂಖ್ಯೆಗೆ ಎಣೆಯಿಲ್ಲ. ಒಂದು ಸಾವಿರ ಪುರುಷರಿಗೆ 927 ರ ಪ್ರಮಾಣಕ್ಕೆ ಮಹಿಳೆಯರು ಇಳಿದಿದ್ದೇವೆ. ಇದಕ್ಕೆ ಕೊಡುಗೆಯಾದದ್ದು ವರದಕ್ಷಿಣೆ ಭೂತ, ಪುರುಷ ಪ್ರಧಾನ ಮೌಲ್ಯ.

ವರದಕ್ಷಿಣೆ ಹಿಂಸೆ:

ಕೋಲಾರ ಜಿಲ್ಲೆಯ ಬಂಗಾರ ಪೇಟೆಯಿಂದ ಯುವತಿಯೊಬ್ಬರು ಸಂಘಟನೆಗೆ ಇತ್ತೀಚೆಗೆ ದೂರೊಂದನ್ನು ತಂದಿದ್ದರು. ಆಕೆ ಕೆಲಸ ಮಾಡುವುದು ವಿದೇಶೀ ಬಹುರಾಷ್ಟ್ರೀಯ ಕಂಪನಿಯಲ್ಲಿ. ಅಲ್ಲೇ ಉದ್ಯೋಗದಲ್ಲಿರುವ ಯುವಕನ ಜೊತೆ ಮದುವೆಗೆ ನಿಶ್ಚಿತಾರ್ಥ ನಡೆದಿದೆ. ಏಪ್ರಿಲ್ ತಿಂಗಳಲ್ಲಿ ದಿನಾಂಕ ಗೊತ್ತುಪಡಿಸಿ ಮದುವೆಗೆ ಛತ್ರವನ್ನು ನಿಗದಿ ಮಾಡಿ ಮುಂಗಡ ಹಣ ನೀಡಿದ್ದಾರೆ. ಮದುವೆಗೆ ಎರಡು ತಿಂಗಳಿರುವಾಗ ವರನ 'ಬೇಡಿಕೆ'ಗಳ ಪಟ್ಟಿ ವಧುವಿನ ಟೇಬಲ್ಲಿನ ಮೇಲೆ ಕಛೇರಿಯಲ್ಲಿಯೇ ಮಂಡಿಸಲ್ಪಟ್ಟಿವೆ. ಮುಖ್ಯವಾದ್ದು ಎರಡು ಲಕ್ಷ ನಗದು ಹಣ ಮದುವೆಗೆ ಮುಂಗಡವಾಗಿ ನೀಡುವುದು. ಎರಡನೇ ಶರತ್ತು, ತನ್ನ ತಂದೆ ತಾಯಿಯರಿಗೆ ವಿಧೇಯಳಾಗಿ ಅವರು ಹೇಳಿದಂತೆ ಕೇಳುವುದು. ಮೂರನೇ ಶರತ್ತು ಎಳ್ಳಷ್ಟು ಕೊರತೆ ಬಾರದ ರೀತಿಯಲ್ಲಿ ಅದ್ದೂರಿಯಾಗಿ ಮದುವೆ ಜರುಗಿಸುವುದು. ಇಂಥವೇ ಇನ್ನೂ ಹತ್ತಾರು.

ಇವನ್ನು ಪೂರೈಸಿದರೆ ಮಾತ್ರ ಮದುವೆಯೆಂದು ಹುಡುಗಿಯ ಮುಂದೆ ಧಮಕಿ ಹಾಕಿದಾಗ, ನಿನ್ನ ಜೊತೆ ಮದುವೆಯೇ ಬೇಡವೆಂದು ಯುವತಿ ಮರು ನುಡಿದಳು. ಅದಕ್ಕೆ ಆತನ ಪ್ರತ್ಯುತ್ತರ 'ಅಷ್ಟು ಸಲೀಸಾಗಿ ಭಾವಿಸಬೇಡ. ನಿನ್ನ ಬದುಕನ್ನು ನರಕ ಮಾಡುತ್ತೇನೆ. ಸುಮ್ಮನೆ ಹೇಳಿದಷ್ಟು ಕೇಳು ನಿಮ್ಮಪ್ಪ ಅಮ್ಮನಿಗೆ ಹೇಳು, ವ್ಯವಸ್ಥೆ ಮಾಡು ಎಂಬುದು". ಇಷ್ಟಾದ ನಂತರ ಮದುವೆಗೆ ಮುಂಚೆಯೇ ವಿಚ್ಛೇದನವನ್ನು ಅರಸಿ ಯುವತಿ ಮಹಿಳಾ ಸಂಘಟನೆಯ ಬಾಗಿಲು ತಟ್ಟಿದಳು. ತನ್ನ ರೂಪವನ್ನು ವಿಸ್ತರಿಸಿಕೊಳ್ಳುತ್ತಿರುವ ವರದಕ್ಷಿಣೆಗೆ ಇದೊಂದು ಉದಾಹರಣೆಯಷ್ಟೆ. ಮದುವೆಯ ಸಂದರ್ಭಕ್ಕೆ ಅಥವಾ ನಂತರ ಪ್ರೀತಿಯಿಂದ ಕೊಡುತ್ತಿದ್ದ ಉಡುಗೊರೆಗಳು ಈಗ ವರದಕ್ಷಿಣೆಯಾಗಿ ರೂಪಾಂತರ ಗೊಂಡು 'ವಸೂಲಿ' ಮಾಡುವಲ್ಲಿ ನಿರ್ದಾಕ್ಷಿಣ್ಯ ದಾರಿ ತುಳಿಯುತ್ತಿವೆ. ಮದುವೆಗೆ ಮುಂಚಿತವಾಗಿಯೇ ಪ್ರಾರಂಭವಾಗುವ ವರದಕ್ಷಿಣೆಯ ಕಾಟ ಮದುವೆಯಾಗಿ ಹತ್ತಾರುವರ್ಷ ಸಂಸಾರ ಮಾಡಿದ ಮೇಲೂ ಮುಂದುವರೆಯುತ್ತಿದೆ. ಹಣ, ಒಡವೆ, ಜಮೀನು, ಸೈಟು, ವಾಹನಗಳು, ಗೃಹೋಪಯೋಗಿ ವಸ್ತುಗಳು, ಸರ್ಕಾರಿ ಕೆಲಸ, ವಾಸಕ್ಕೆ ಮನೆ, ಬೆಲೆ ಬಾಳುವ ಬಟ್ಟೆಗಳು, ಹುಟ್ಟುವ ಮಕ್ಕಳಿಗೆ ಆಭರಣಗಳು ಮುಂತಾದವೆಲ್ಲಾ ವರದಕ್ಷಿಣೆ ವ್ಯಾಪ್ತಿಗೆ ಒಳಪಟ್ಟಿವೆ. ವರದಕ್ಷಿಣೆಯ ಬಾಹು ವಿಸ್ತಾರಗೊಂಡಿದೆ. ಇವುಗಳನ್ನು ಭರಿಸಲು ಮಾತಾ-ಪಿತೃಗಳು ಮನೆ-ಮಠ, ಜಮೀನುಗಳನ್ನು ಮಾರಾಟ ಮಾಡುವ ಪರಿಸ್ಥಿತಿಯೇರ್ಪಟ್ಟಿದೆ.

ಭವಿಷ್ಯದಲ್ಲಿ ಸವಾಲಾಗಿ ಪರಿಣಮಿಸುವ

ಈ ಸಮಸ್ಯೆಗಳಿಗೆ ಹೆದರಿ ಮಧ್ಯಮ ವರ್ಗ ಹಾಗೂ ಬಡ ಕುಟುಂಬಗಳು ಹುಟ್ಟುವ ಮುಂಚೆ ಅಥವಾ ನಂತರ ಹೆಣ್ಣು ಶಿಶುಗಳನ್ನು ಹತ್ಯೆ ಮಾಡುತ್ತಿರುವುದು ಮಹಿಳೆಯರ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಮುಖ್ಯ ಕಾರಣವೆನ್ನಬಹುದು.

ಜೊತೆಗೆ ಪುರುಷ ಪ್ರಧಾನ ಮೌಲ್ಯಗಳನ್ನು ಎತ್ತಿ ಹಿಡಿಯುವ ರಾಜಕಾರಣ ಪ್ರಸ್ತುತ, ಅಧಿಕಾರ ವಹಿಸಿಕೊಂಡಿರುವುದು 'ವರದಕ್ಷಿಣೆಯೆಂಬ' ಹಕ್ಕಿಗೆ ರೆಕ್ಕೆ -ಪುಕ್ಕ ಬಲಿತು ಗಿಡುಗನ ರೂಪ ತಾಳುವುದಕ್ಕೆ ಪುಷ್ಟಿ ಒದಗಿಸಿದೆ. ಬಿಜೆಪಿ ಯ ಮಹಿಳಾ ಮೋರ್ಚಾದ ಅಧ್ಯಕ್ಷೆಯಾಗಿದ್ದ ಮೃದುಲಾ ಸಿನ್ಹಾರ ಮಾತುಗಳಲ್ಲೇ ಈ ಕುರಿತು ಕೇಳಿ.....

"ವರದಕ್ಷಿಣೆ ತಪ್ಪು ಆದರೆ ಏನು ಮಾಡುವುದು ಅಳಿಯನಿಗೆ ಕೊಟ್ಟಿದ್ದೇನೆ. ಮಗನಿಗೆ ತೆಗೆದುಕೊಂಡಿದ್ದೇನೆ."

"ಮದುವೆ ಇತ್ಯಾದಿ ವಿಷಯಗಳ ಬಗ್ಗೆ ಹೆಣ್ಣು ಮಕ್ಕಳು ತಾವೇ ನಿರ್ಧಾರ ತೆಗೆದುಕೊಳ್ಳಬಾರದು. ಇದನ್ನು ಕುಟುಂಬಕ್ಕೆ ಬಿಡಬೇಕು."

ಆಳುವ ವರ್ಗದ ಇಂತಹ ಮನಸ್ಥಿತಿಗಳು ಮಹಿಳಾ ಸಮುದಾಯಕ್ಕೆ ಮಾರಕವಾಗಿ ನಿಂತಿವೆ. ದೌರ್ಜನ್ಯ ಎಸಗುವವರಿಗೆ ರಕ್ಷಾ ಕವಚಗಳಾಗುತ್ತಿವೆ.

ಉತ್ತರವೆಲ್ಲಿ?

1961 ರಲ್ಲಿ ವರದಕ್ಷಿಣೆ ನಿಷೇಧ ಕಾಯಿದೆಯನ್ನು ಜಾರಿಗೊಳಿಸಲಾಗಿದೆ. 1984 ರಲ್ಲಿ ಹಾಗೂ 1986 ರಲ್ಲಿ ಎರಡು ಬಾರಿ ತಿದ್ದುಪಡಿಗಳನ್ನು ಮಾಡಲಾಗಿದೆ. ಹಾಗಿದ್ದರೂ ವರ್ಷದಲ್ಲಿ 6500 ಮಹಿಳೆಯರನ್ನು ವರದಕ್ಷಿಣೆಗಾಗಿ ಕೊಲ್ಲಲಾಗುತ್ತಿದೆ. ಹಾಗಿದ್ದ ಮೇಲೆ ಇದಕ್ಕೆ ಪರಿಹಾರವೇನು ಎನ್ನುವುದು ಪ್ರಬಲ ಪ್ರಶ್ನೆಯಾಗಿದೆ. ಉತ್ತರ ಹುಡುಕುವುದು ಅನಿವಾರ್ಯವಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ಸವಿತಾ 18 ವಯಸ್ಸಿನ ಹೆಣ್ಣು ಮಗಳು ಬಡ ಕುಟುಂಬದ ಚಂದದ ಹುಡುಗಿಯನ್ನು ಮಧ್ಯಮ ವರ್ಗದ ರೈತ ಕುಟುಂಬದ ಯುವಕ ಆಸೆ ಪಟ್ಟು ಮದುವೆಯಾದ. ಬಡವರೆಂದು ಗೊತ್ತಿದ್ದೂ ಮದುವೆಯಾದ ಈತ ನಂತರ ತನ್ನ ವಿಕೃತ ಅವತಾರಗಳನ್ನು ಒಂದೊಂದಾಗಿ ಬಿಚ್ಚತೊಡಗಿದ.

ಹೊಡೆಯುವುದು, ಕೀಳು ಭಾಷೆಯಲ್ಲಿ ನಿಂದಿಸುವುದು. ತವರಿಗೆ ಕಳಿಸಲು ನಿರಾಕರಿಸುವುದು. ಕುಂತದ್ದಕ್ಕೆ, ನಿಂತದ್ದಕ್ಕು ತಪ್ಪು ಹುಡುಕಿ ಬಾರಿಸುವುದು. ಮನೆಗೆಲಸವೆಲ್ಲಾ ಈಕೆಯ ಮೇಲೆ ಹೇರುವುದು ಮುಂತಾದ ವರಸೆಗಳನ್ನು ದಿನನಿತ್ಯ ಪ್ರಯೋಗಿಸಿದ.

ಮುಂದುವರೆದು, ತೌರಿನಿಂದ ಹಣ ತೆಗೆದುಕೊಂಡು ಬರುವಂತೆ ಒತ್ತಾಯಿಸಿ ಒಂದು ದಿನ ತೌರಿಗೆ ಕಳಿಸಿದ. ಮರುದಿನವೇ ಬರಬೇಕೆಂದು ಗಡುವು ನೀಡಿದ.


ಫ್ಲೋರಿಕಲ್ಚರ್‌ನಲ್ಲಿ ಕೆಲಸ ಮಾಡುತ್ತಿದ್ದ ಆಕೆಯ ಪಿ.ಎಫ್. ಹಣ ಹಾಗೆಯೇ ಉಳಿದಿತ್ತು. ಅದನ್ನು ತಂದುಕೊಡಬಹುದೆಂಬ ನಿರ್ಧಾರ ಮಾಡಿದ ಆಕೆ ತೌರಿಗೆ ಬಂದು ಮನೆಯಲ್ಲಿ ವಿಷಯ ತಿಳಿಸಿ, ಅರ್ಜಿ ಭರ್ತಿಮಾಡಿ ಸಂಬಂಧಿಸಿದವರಿಗೆ ಹೇಳಿ ಗಂಡನ ಮನೆಗೆ ಹೋಗಲು ಒಂದು ದಿನ ತಡವಾಯಿತು.

ಆಕೆ ಗಂಡನ ಮನೆ ತಲುಪಿದ ಮಾರನೆಯ ಬೆಳಿಗ್ಗೆ ಆಕೆ ಮೃತಪಟ್ಟಿರುವ ಸುದ್ದಿ ಮನೆಯವರನ್ನು ಅಪ್ಪಳಿಸಿತು. ಆಕೆಯಾಗ ಐದು ತಿಂಗಳ ಗರ್ಭಿಣಿ. ಬಡವರ ಮನೆಯ ಹೆಣ್ಣು ಮಗಳ ಸಾವಿಗೆ ಅಷ್ಟೋ ಇಷ್ಟೋ ಪರಿಹಾರ ಘೋಷಿಸುವ ಮಟ್ಟಕ್ಕೆ ಗಂಡನ ಮನೆಯವರು ಹೋದರು. ಅಮಾಯಕ ಬಡ ಕುಟುಂಬದ ನೆರವಿಗೆ ಯಾವ ಮುಖಂಡರು ನಿಲ್ಲಲಿಲ್ಲ. ಪುಡಿಕಾಸಿನ ಆಸೆ ತೋರಿಸಿ ಹುಡುಗಿಯನ್ನು ಮಣ್ಣು ಮುಚ್ಚಿದರು. ಪ್ರಕರಣವನ್ನು ಹೊಸಕಿಹಾಕಿದರು. ಅಸಹಾಯಕ ಕುಟುಂಬ ರೋದಿಸಿ ರೋದಿಸಿ ತೆಪ್ಪಗಾಯಿತು.

ಭಾರತ ದಂಡ ಸಂಹಿತೆಯ 498-ಎ ಪ್ರಕರಣವು ಪತಿಯಿಂದ ಅಥವಾ ಪತಿಯ ಸಂಬಂಧಿಗಳಿಂದ ಮಹಿಳೆಗಾಗುವ ಕ್ರೌರ್ಯವು ದಂಡನಾರ್ಹವೆಂದು ಪರಿಗಣಿಸಿದೆ ಜಾಮೀನು ರಹಿತ ಅಪರಾಧ ಇದಾಗಿದೆ.

ಇಷ್ಟಾದರೂ ಮದುವೆಯಾಗಿರುವ 100 ಮಹಿಳೆಯರ ಪೈಕಿ 20 ಮಹಿಳೆಯರು ಪ್ರತಿನಿತ್ಯವು ಗಂಡನಿಂದ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಿದ್ದಾರೆ. ಇವು ವರದಿಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಮುಚ್ಚಿ ಹೋಗುತ್ತಿರುವ ಪ್ರಕಣಗಳಿಗೆ ಲೆಕ್ಕವಿಲ್ಲ.

ಕಳೆದ ತಿಂಗಳೊಂದರಲ್ಲೆ ಮೂವರು ಅವಿವಾಹಿತ ಯುವತಿಯರು, ತಮ್ಮ ತಾಯಿಯರೊಂದಿಗೆ ಸಂಘಟನೆ ಕಚೇರಿಗೆ ಬಂದು ದೂರುಗಳನ್ನು ಸಲ್ಲಿಸಿದರು. ಈ ಮೂವರ ಸಮಸ್ಯೆಯೂ ಒಂದೇ. ವಿವಾಹವಿಲ್ಲದೆ ಗರ್ಭವತಿಯರಾಗಿರುವುದು. ಯುವತಿಯರ ಮನೆಗಳಲ್ಲಿಯೇ ವಾಸವಿದ್ದ ಮಾವಂದಿರು, ಒಂದು ಪ್ರಕರಣದಲ್ಲಿ ದೂರದ ಸಂಬಂಧಿ, ಇವರ ಜೊತೆ ಸಲಿಗೆ ಬೆಳೆಸಿ ವಿವಾಹವಾಗುವುದಾಗಿ ಆಣೆ-ಭಾಷೆ ನೀಡಿ ಶಾರೀರಕ ಸಂಬಂಧವನ್ನು ಸಂಪಾದಿಸಿ ಗರ್ಭಿಣಿಯರಾದ ನಂತರದಲ್ಲಿ 'ಇದಕ್ಕೆ ಕಾರಣ ನಾವಲ್ಲ ಇವರ ನಡವಳಿಕೆ, ಶೀಲ ಸರಿಯಿಲ್ಲ'ವೆಂದು ನಿರಾಕರಿಸುತ್ತಿರುವುದು, ಬೇರೆ ವಿವಾಹಕ್ಕೆ ಹುಡುಕಾಟ ನಡೆಸುತ್ತಿರುವುದು ಇವರ ದೂರು. ಇವರಲ್ಲಿ ಒಬ್ಬಾಕೆಯ ಹೆರಿಗೆಗೆ ಒಂದು ವಾರ ಬಾಕಿ



ತಿರುಗಿ ನಿಂತ ಆತ್ಮಗಳು

ನೋವು ಹಿಂಸೆ ತಾಳಿಕೊಂಡೆವು
ಕುಡಿತ ಹೊಡೆತ ಸಹಿಸಿಕೊಂಡೆವು
ಬೈಗುಳ ಅಪಮಾನದಲಿ
ದಹಿಸಿಕೊಂಡೆವು
ಸೀಮೇಯೆಣ್ಣೆ ಸುರಿದು ಬೆಂಕಿಯಿಟ್ಟಾಗ
ತಾಳದೆ ಝಳ ಕೂಗಿಕೊಂಡೆವು
ಆಂತ್ಯಗಳು ತಿರುಗಿ ನಿಂತು ಕೇಳಿದವು
ತಾಳೋದಂದ್ರೇ ಎಲ್ಲಿತನಕ?

- ಕೆ.ಶರೀಫಾ

(ಪಾಂಚಾಲಿ ಸಂಕಲನದಿಂದ)

ಇದೆ. ಮತ್ತೊಬ್ಬಳಿಗೆ ಐದು ತಿಂಗಳು ಇನ್ನೊಬ್ಬ ಯುವತಿಗೆ ಏಳು ತಿಂಗಳು.

ಇಂತಹ ವಂಚನೆಯ ಪ್ರಕರಣಗಳ ಶೇ 90 ರಷ್ಟು ಬಂಧುಗಳಿಂದಲೇ ಸಂಭವಿಸುತವೆಂದು ಸಮೀಕ್ಷಾ ವರದಿಗಳು ತಿಳಿಸುತ್ತವೆ.

ಐಪಿಸಿ 366ನೇ ಪ್ರಕರಣವು ವಿಧಿನಿಷಿದ್ದ ಸಂಭೋಗಕ್ಕೆ ಒತ್ತಾಯಪಡಿಸುವ ಅಥವಾ ಪ್ರೇರೇಪಿಸುವ ಕಾರ್ಯವನ್ನು ದಂಡನಾರ್ಹವೆಂದು ಹೇಳಿದೆ. ಆದರೂ ಭಾರತದಲ್ಲಿ ಇಂತಹ ಪ್ರಕರಣಗಳನ್ನು ಒಳಗೊಂಡಂತೆ ಪ್ರತಿ 47 ನಿಮಿಷಗಳಿಗೆ ಒಬ್ಬ ಮಹಿಳೆ ಅತ್ಯಾಚಾರಕ್ಕೆ ಬಲಿಯಾಗುತ್ತಿದ್ದಾಳೆ.

ಮಹಿಳೆ-ಕಾನೂನಿನ ರಕ್ಷಣೆ

ಭಾರತ ದಂಡ ಸಂಹಿತೆಯು ಮಹಿಳೆಯರ ವಿರುದ್ದದ ಅಪರಾಧಗಳಿಗೆ ಸಂಬಂಧಿಸಿ 312 ರಿಂದ 318 ರ ತನಕ ಹಾಗೂ 354, 361, 366, 366ಎ-ಬಿ, 367, 372, 373, 375, 376 ಬಿ, ಸಿ, ಡಿ, 377, 493 ರಿಂದ 498 ಮತ್ತು 498 ಎ ಪ್ರಕರಣಗಳನ್ನು ಪಟ್ಟಿ ಮಾಡಿ ರಕ್ಷಣೆ ಘೋಷಿಸಿದೆ.

ಮೇಲಾಗಿ ಸಂವಿಧಾನದ ಪರಿಚ್ಛೇದ 44 ಸಮಾನ ನಾಗರೀಕ ಹಕ್ಕನ್ನು ಎತ್ತಿ ಹಿಡಿದಿದೆ. ಕೌಟುಂಬಿಕ ಹಿಂಸಾಚಾರದ ವಿರುದ್ಧವಲ್ಲದೆ ಎಲ್ಲ ರೀತಿಯ ಕ್ರೌರ್ಯದ ವಿರುದ್ಧ ಇವಾಗಿವೆ.


ಸಂವಿಧಾನದ ರಕ್ಷಣೆಯಿದ್ದರು, ಮಹಿಳೆಯರಿಗಾಗಿಯೇ ಕಾನೂನುಗಳು ರಚನೆಗೊಂಡಿದ್ದರು, ಮುಂದುವರೆದು ಇನ್ನೂ ಹೊಸ, ಹೊಸ ಕಾನೂನುಗಳು ಪರಿಚಯಗೊಳ್ಳುತ್ತಿದ್ದರು, ಮಹಿಳೆಯರ ಮೇಲೇಕೆ ಇಷ್ಟೊಂದು ಪ್ರಮಾಣದ ಹಿಂಸಾಚಾರಗಳು, ಕೌಟುಂಬಿಕ ದೌರ್ಜನ್ಯಗಳು ಸಂಭವಿಸುತ್ತಿವೆ.

ಹಾಗಿದ್ದಲ್ಲಿ ಸಮಸ್ಯೆಯ ಮೂಲ ಮತ್ತು ಪರಿಹಾರ ಬೇರೆಯದೇ ಆಗಿದೆ ಎನ್ನುವುದನ್ನು ಒಪ್ಪಬೇಕಾಗಿದೆ. ಆ ನಿಟ್ಟಿನಲ್ಲಿ ಆಲೋಚಿಸಬೇಕಿದೆ.

ಪುರುಷ ಪ್ರಧಾನ ಸಾಮಾಜಿಕ ಮೌಲ್ಯಗಳನ್ನೇ ಹಾಸು-ಹೊದ್ದಿರುವ ಈ ವ್ಯವಸ್ಥೆಗೆ ಎಂಥದೇ ಮಹಿಳಾ ಪರ ಕಾನೂನುಗಳನ್ನು ನುಂಗಿ ಜೀರ್ಣಿಸಿಕೊಂಡು ರದ್ದಿಯನ್ನು ಹೊರಗೆ ಹಾಕುವ ಸಾಮರ್ಥ್ಯ ಅಂತರ್ಗತವಾಗಿದೆ. ನೆಪ ಮಾತ್ರಕ್ಕೆ ಕಾನೂನುಗಳನ್ನು ಪೋಣಿಸಿಕೊಂಡು ಮಾರ್ಜಾಲದ ಮಂತ್ರ ಪಠಿಸುವ ಅಂತಃಶಕ್ತಿಯನ್ನು ವಿಪುಲವಾಗಿ ಮೈಗೂಡಿಸಿಕೊಂಡಿದೆ.

ಧರ್ಮಗ್ರಂಥಗಳು ಭೋದನೆ?

ವೇದ-ಉಪನಿಷತ್ತುಗಳು, ಉದ್ದುದ್ದನೆಯ ಗ್ರಂಥಗಳು, ಪುರಾಣಗಳು, ಶಾಸ್ತ್ರ-ಧರ್ಮಗಳು ಮುಂತಾದವು ಪಾಳೆಯಗಾರಿ ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು, ಈ ಸಮಾಜದ ರಕ್ತದೊಳಗೆ ಬಿಳಿಯ ಕಣಗಳಂತೆ ಬೆಳೆಸುತ್ತಾ



ಬಂದಿದ್ದು ಸಾಮಾಜಿಕ ಸಮಾನತೆಯನ್ನು ಮಹಿಳಾ ಸಮಾನತೆಯನ್ನು ತಡೆಯುವ ನಿರೋಧ ಶಕ್ತಿಯನ್ನು ಇವುಗಳು ಮೈಗೂಡಿಸಿಕೊಂಡಿವೆ. ಇಂತಹ ಮೌಲ್ಯಗಳನ್ನು ಅಪ್ಪಿಕೊಂಡು ಅಧಿಕಾರದ ರುಚಿ ಅನುಭವಿಸುವ ಶಕ್ತಿಗಳು ಇದೀಗ ನಿರ್ಣಾಯಕವಾಗಿ ಬೆಳೆಯುತ್ತಿರುವುದು ಮಹಿಳೆಯರ ಹೆಚ್ಚುತ್ತಿರುವ ಸಂಕಷ್ಟಗಳಿಗೆ ನೀರು-ಗೊಬ್ಬರ ಉಣಿಸುತ್ತಿವೆ. 'ದೀರ್ಘ ಸುಮಂಗಲೀ ಭವ, 'ಪತಿಯೇ ಪರದೈವ' ಎನ್ನುವ ಆಶೀರ್ವಚನವು, ವರದಕ್ಷಿಣೆಯನ್ನು ಭರಿಸಿಯಾದರು, ದಿನಬೆಳಗು ಗಂಡನ ಪೂಜಿಸಿಯಾದರೂ, ಹೊಡೆತ, ಬಡಿತ ತಿಂದಾದರೂ ಗಂಡನೊಂದಿಗೆಯೇ ಬಾಳಬೇಕು ಇಲ್ಲವೇ ಸಾಯಬೇಕು ಎನ್ನುವ ಮನಸ್ಥಿತಿಯನ್ನು ವಿವಾಹಿತ ಹೆಣ್ಣುಮಕ್ಕಳಲ್ಲೂ ಅವರ ಕುಟುಂಬ ವರ್ಗದವರಲ್ಲೂ ಮೂಡಿಸಿ ಎಂಥದೇ ಹೀನಾಯ ಪರಿಸ್ಥಿತಿಯಲ್ಲಿಯೂ ಬದುಕಲು ಪ್ರೇರೇಪಿಸುತ್ತವೆ. ಇಂತಹ ಧಾರ್ಮಿಕ, ಸಾಂಸ್ಕೃತಿಕ ಆಲೋಚನೆಯ ಮುಂದೆ 'ಭಾರತ ದಂಡ ಸಂಹಿತೆ'ಯ ಕಲಮುಗಳು ನಿಷ್ಕ್ರಿಯಗೊಳ್ಳುತ್ತವೆ.

'ಶೀಘ್ರಮೇವ ಪುತ್ರ ಪ್ರಾಪ್ತಿರಸ್ತು, ನ ಪುತ್ರಸ್ಯ ಗತಿರ್ನಾಸ್ತಿ'ಯಂತಹ ಪಠಣಗಳು ಹೆಣ್ಣು ಭ್ರೂಣ ಮತ್ತು ಶಿಶುಗಳ ಹತ್ಯೆಗೆ ಪ್ರೇರೇಪಿಸುತ್ತವೆ. ಗಂಡು ಹೆರದ ಜನ್ಮ ಪಾವನವಲ್ಲವೆನ್ನುವ ಮಟ್ಟಕ್ಕೆ ಮನಸ್ಸನ್ನು ಗಟ್ಟಿಗೊಳಿಸಿ ಪುತ್ರ ಸಂತಾನದ ಸಲುವಾಗಿ ಏನನ್ನಾದರೂ ಮಾಡಲು ಸಿದ್ಧಗೊಳಿಸುತ್ತವೆ.

ಇವರಿಂದ ಮಹಿಳೆ ನ್ಯಾಯ ನಿರೀಕ್ಷಿಸಬಹುದೇ?

109 ಮಹಿಳೆಯರ ಮೇಲೆ ಹಿಂಸಾಚಾರದ ಬಗ್ಗೆ ನ್ಯಾಯಾಧೀಶರ ಧೋರಣೆ ಕುರಿತು 1990 ರಲ್ಲಿ ನಡೆಸಿದ ಸಮೀಕ್ಷೆಯಿಂದ ಇದು ತಿಳಿದುಬಂದಿದೆ.

- ಶೇ. 48 ನ್ಯಾಯಾಧೀಶರು ಗಂಡ ಹೆಂಡತಿಯ ಕೆನ್ನೆಗೆ ಹೊಡೆಯುವುದು ಸರಿ ಎಂದರು.
- ಮಹಿಳೆ ಹಿಂಸಾಚಾರ ಎದುರಿಸಿದರೂ ಕುಟುಂಬ ಉಳಿಸಿಕೊಳ್ಳಲು ಅದನ್ನು ಸಹಿಸಬೇಕು ಎಂದರು ಶೇಕಡಾ 74 ನ್ಯಾಯಾಧೀಶರು
- ಶೇ. 50 ನ್ಯಾಯಾಧೀಶರು ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರ ಅಪರೂಪ ಎಂದು ಭಾವಿಸುತ್ತಾರೆ.
- 'ಪ್ರಚೋದನಾಕಾರಿ' ಬಟ್ಟೆಗಳು ಲೈಂಗಿಕ ಹಿಂಸಾಚಾರಕ್ಕೆ ಆಹ್ವಾನ ಎಂದು ಶೇ. 68 ನ್ಯಾಯಾಧೀಶರು ನಂಬಿದ್ದಾರೆ.
- ಶೇ. 34 ವರದಕ್ಷಿಣೆ ಸಾಂಸ್ಕೃತಿಕ ಮೌಲ್ಯಹೊಂದಿದೆ ಎನ್ನುತ್ತಾರೆ.
- ಮಹಿಳೆಯ ನೈತಿಕ ಚಾರಿತ್ರ್ಯ ಲೈಂಗಿಕ ಅತ್ಯಾಚಾರದ ಕೇಸಿನಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂದು ಶೇ. 55 ನ್ಯಾಯಾಧೀಶರು ಭಾವಿಸುತ್ತಾರೆ.

ಈ ಹಂತದಲ್ಲಿ ಕಾನೂನಿನ ಪರಿಧಿಗಳನ್ನು ಮೀರಿದ, ವಿಶಾಲವಾದ ಧಾರ್ಮಿಕ ತಳಹದಿ ಇಂಥವರಿಗಾಗಿ ನೆಲೆ ನಿಲ್ಲುತ್ತದೆ. ಹೀಗಾಗಿಯೇ ಸರ್ವಸ್ವವು ಪುರುಷರಿಗಾಗಿಯೇ ಅನಾವರಣಗೊಳ್ಳುತ್ತವೆ. ಆಸೆ, ಸುಖ, ಆಸ್ತಿ, ಸ್ವತ್ತು, ಸಾಧನೆ, ಸಂಪಾದನೆ ಬೇಕು - ಬೇಡಗಳೆಲ್ಲವು ಪುರುಷರ ನಿರ್ಧಾರಕ್ಕೆ ಒಳಪಡುತ್ತವೆ. ಇದೇ ಪಟ್ಟಿಯಲ್ಲಿ ಮಹಿಳೆಯೂ ಸೇರಿ ಪುರುಷರನ್ನು ತೃಪ್ತಿಪಡಿಸುವ ಸುಖ ಪಡಿಸುವ ಅವರ ಆಕಾಂಕ್ಷೆಗಳಿಗೆ ಒತ್ತಾಸೆಯಾಗಿ ನಿಲ್ಲುವ ಜೀವಂತ ವಸ್ತುವಾಗುತ್ತಾಳೆ. ಮಹಿಳೆಯನ್ನು 'ಪ್ರೇರಕ ಶಕ್ತಿ' ಯೆಂದು ಚಿತ್ರಿಸಿ ನಯವಾಗಿ ವಂಚಿಸುವ ಪುರುಷಪರ ಸಂಸ್ಕೃತಿ ಎಂಥವರನ್ನು ಮೋಸಗೊಳಿಸುತ್ತದೆ. ಆಕೆಯ ಸ್ವತಂತ್ರ ವ್ಯಕ್ತಿತ್ವವನ್ನು ಮರೆಮಾಚುತ್ತದೆ. ಹೀಗಾಗಿಯೇ ಪುರುಷರ ಸಾಧನೆಯ 'ಹಿಂದೆ' ಮಹಿಳೆಯಿರುತ್ತಾಳೆಂಬ ಕಥೆಗಳು ಹೆಣೆಯಲ್ಪಟ್ಟಿವೆ. ಮಹಿಳೆಯರ ಸಾಧನೆಯ ಸಂದರ್ಭಗಳಲ್ಲಿ ಅವಳನ್ನು 'ಪುರುಷ'ನಿಗೆ ಹೋಲಿಸಲಾಗುತ್ತದೆ. (ಇಂದಿರಾ ಗಾಂಧಿಯನ್ನು ಗಂಡೆದೆಯವಳು ಎನ್ನುವ ಹಾಗೆ)

ವಾಸ್ತವದ ಹೋರಾಟ

ಮಹಿಳೆಯರನ್ನು 'ಅವಲಂಬಿತ' ಸ್ಥಾನದಲ್ಲಿರಿಸಿ ಎರಡನೇ ದರ್ಜೆಯ ನಾಗರಿಕರೆನ್ನುವ ಸರ್ಟಿಫಿಕೇಟನ್ನು ನೀಡಿರುವ ಸಮಾಜದ ಒಡಲಿನೊಳಗೆ ಪಾಳೆಯಗಾರಿ ಮತ್ತು ಪುರುಷ ಪ್ರಧಾನ ಮೌಲ್ಯಗಳೆಂಬುವು ಕ್ಯಾನ್ಸರ್ ಹುಣ್ಣುಗಳಾಗಿ ಪರಿಣಮಿಸುತ್ತಿವೆ. ಸಮಾಜದ ಅಂಗಾಗಗಳಿಗೆ ಇಡಿಯಾಗಿ ವ್ಯಾಪಿಸುತ್ತಿದೆ. ಈ ಹುಣ್ಣನ್ನು ಕತ್ತರಿಸಿ ಬಿಸಾಡದೆ ಮೇಲ್ಮೇಲೆ ಹಚ್ಚುವ ಮುಲಾಮಿನಿಂದ ಪರಿಪೂರ್ಣ ಆರೋಗ್ಯ ಸಾಧ್ಯವಿಲ್ಲ. ಹೀಗಾಗಿ ಮಹಿಳಾ ಪರವಾಗಿರುವ ಕಾನೂನುಗಳು ಮುಲಾಮಿನ ರೀತಿಯಷ್ಟೇ! ಪಾಳೆಯಗಾರಿ ಪುರುಷ ಪ್ರಧಾನ ಮೌಲ್ಯಗಳನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸುವುದೆಂದರೆ, ಅದರರ್ಥ ಸಮಾನತೆಯ ಸಮಾಜವನ್ನು ಸ್ಥಾಪಿಸುವುದು, ಜಾತಿ-ಧರ್ಮ, ಮೇಲು-ಕೀಳು, ಕರಿ-ಬಿಳಿ, ಬಡವ-ಬಲ್ಲಿದ, ಪುರುಷ-ಮಹಿಳೆಯೆಂಬ ಭೇದವಿಲ್ಲದ ಸರ್ವರ ಸಮಾನತೆಯನ್ನು ನೆಲೆಗೊಳಿಸುವುದು. ಅಂಥಹ ಸನ್ನಿವೇಶ ಮಾತ್ರವೇ ಮಹಿಳೆಯರನ್ನು ಎಲ್ಲಾ ಪಿಡುಗುಗಳಿಂದ ವಿಮೋಚನೆ ಗೊಳಿಸುತ್ತದೆ ಯೆಂಬ ವಾಸ್ತವದೊಂದಿಗೆ ಹೋರಾಟದ ಅಂಗಳಕ್ಕೆ ಧುಮುಕಿ ಜಯಶೀಲರಾಗುವುದು. ಇಂಥದೇ ಹೋರಾಟದ ಪರಂಪರೆಯಿರುವ ಮಾರ್ಚ್ 8 ನ್ನು ಮಹಿಳಾ ಪರ ದನಿಯಾಗಿ ಮೊಳಗಿಸುವುದು.

(ಲೇಖಕಿ-ಅ.ಭಾ.ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರಿನ ಜಿಲ್ಲಾ ಕಾರ್ಯದರ್ಶಿ, ರಾಜ್ಯ ಸಹ ಕಾರ್ಯದರ್ಶಿ)

ಮಹಿಳೆಯರ ಸ್ಥಿತಿ - ಜಿಲ್ಲೆಗಳ ಹೋಲಿಕೆ

(ಜಿಲ್ಲೆಯ ರ್‍ಯಾಂಕ್ ನಂಬರ್ - 1991 ಅಂಕೆ ಸಂಖ್ಯೆ)

ಜಿಲ್ಲೆ	ಲಿಂಗ ಸಮಾನತೆ ಸೂಚಕ	ಲಿಂಗ ಅನುಪಾತ	ಮಹಿಳಾ ಆಯುಷ್ಯ ನಿರೀಕ್ಷೆ	ಸರಾಸರಿ ಮಹಿಳಾ ಮದುವೆ	ಪುರುಷ ವಯಸ್ಸಿನಲ್ಲಿ ವ್ಯತ್ಯಾಸ	ಸಾಕ್ಷರತಾ ವ್ಯತ್ಯಾಸ ದರದಲ್ಲಿ	ಬಚ್ಚಲ ಮನೆ ಇರುವ ಮನೆಗಳ ಪ್ರಮಾಣ
ಬೆಂಗಳೂರು ನಗರ	3	20	15	5	5	1	1
ಬೆಂಗಳೂರು ಗ್ರಾಮಾಂತರ	8	17	6	6	2	9	11
ಬೆಳಗಾಂ	10	14	14	9	9	18	13
ಬಳ್ಳಾರಿ	17	7	19	19	13	15	16
ಬೀದರ್	18	16	13	18	11	15	18
ಬಿಜಾಪುರ	15	9	12	16	12	20	20
ಚಿಕ್ಕಮಗಳೂರು	5	5	10	10	17	5	6
ಚಿತ್ರದುರ್ಗ	9	19	18	7	6	10	10
ದಕ್ಷಿಣ ಕನ್ನಡ	2	1	1	1	16	3	2
ಧಾರವಾಡ	11	18	16	20	7	14	8
ಗುಲ್ಬರ್ಗಾ	19	11	10	14	14	17	17
ಹಾಸನ	7	2	3	3	19	11	12
ಕೊಡಗು	1	3	2	2	20	1	3
ಕೋಲಾರ	13	7	9	11	8	13	9
ಮಂಡ್ಯ	14	10	7	13	1	8	14
ಮೈಸೂರು	16	15	8	12	4	4	5
ರಾಯಚೂರು	20	4	5	8	15	16	19
ಶಿವಮೊಗ್ಗ	6	12	17	17	10	7	4
ತುಮಕೂರು	12	13	20	15	3	12	15
ಉತ್ತರ ಕನ್ನಡ	4	6	4	4	18	6	7

ಮಹಿಳಾ ವಿಮೋಚನೆಯ ಪರಿಭಾಷೆ

ಮಹಿಳೆ ಸಾಗಿಬಂದ ಹಾದಿ ಮತ್ತು ಏಳು-ಬೀಳುಗಳತ್ತ ಅವಲೋಕಿಸಿರುವ ಲೇಖಕರು, ಬದಲಾಗುತ್ತಿರುವ ಮಹಿಳೆಯರ ಪರಿಸ್ಥಿತಿ – ಬದಲಾದ ಮೂಲಭೂತ ಪ್ರಶ್ನೆಗಳನ್ನು ಗುರುತಿಸುತ್ತಾ ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣ–ವಾಗಿಸುವುದರತ್ತ ಚಿಂತನೆ ಹರಿಸಿದ್ದಾರೆ.



ಡಾ. ಮೀನಾಕ್ಷಿ ಬಾಳಿ

ನಿಸರ್ಗಕ್ಕೆ ಕೋಟ್ಯಾಂತರ ವರ್ಷಗಳ ಇತಿಹಾಸವಿರಬಹುದಾದರೂ, ಜೀವ ಜಗತ್ತಿಗೆ ಕನಿಷ್ಠ ಐದು ಲಕ್ಷ ವರ್ಷಗಳ ಇತಿಹಾಸವಿರುವುದು ಸಧ್ಯ ತಿಳಿದುಬಂದಿದೆ. ಅಲೆಮಾರಿ ಹಂತದ ಸ್ವಚ್ಛಂದ, ಮುಕ್ತ ವಾತಾವರಣದಿಂದ ನಿರ್ಬಂಧಿತ ನಾಗರೀಕ ವ್ಯವಸ್ಥೆಯವರೆಗೆ ಮಾನವನ ಪಯಣ ಹಲವಾರು ಸ್ಥಿತ್ಯಂತರಗಳನ್ನು ಕಾಣುತ್ತಲೇ ನಿರಂತತೆಯನ್ನು ದಾಖಲಿಸಿಕೊಂಡು ಬಂದಿದೆ. ಆ ಹೊತ್ತಿನಲ್ಲಿ ಮನುಷ್ಯ ಕೇವಲ ಮನುಷ್ಯನಾಗಿದ್ದ. ಜೀವ ವಿಕಾಸದ ಹಾದಿಯಲ್ಲಿ ಅತ್ಯಂತ ಪರಿಪೂರ್ಣ ಪ್ರಾಣಿ ಎನಿಸಿಕೊಳ್ಳಲು ಸೃಷ್ಟಿಯ ಇತರ ಜೀವಿಗಳಲ್ಲಿರದ ಬುದ್ಧಿಶಕ್ತಿಯೇ ಕಾರಣವಾಯಿತು. ಅಂತಲೇ ಬುದ್ದಿ ಮಾನವನ ಪ್ರಪಂಚಕ್ಕೆ ಒಂದು ವರವಾಗಿ ಕಾಣಿಸಿಕೊಂಡಿದ್ದರಲ್ಲಿ ಆಶ್ಚರ್ಯವೆನಿಸಲಿಲ್ಲ. ಈ ಶ್ರಮದೊಂದಿಗೆ ಬುದ್ಧಿಶಕ್ತಿ ವಿಕಾಸವಾದಂತೆ ನಾಗರೀಕತೆ ನಾಗಾಲೋಟದಿಂದ ಓಡತೊಡಗಿತು. ಬೇಕು ಎನಿಸಿದಾಗಲೆಲ್ಲ ತನಗೆ ಅನುಕೂಲವಾಗುವಂತೆ ನಿಸರ್ಗವನ್ನು ದುಡಿಸಿಕೊಂಡಂತೆ, ಸಾಮಾಜಿಕ ಸಂರಚನೆಗಳನ್ನು ರೂಢಿಸಿಕೊಂಡ. ಹೀಗೆ ರೂಢಿಸಿಕೊಂಡ ವ್ಯವಸ್ಥೆಗಳಲ್ಲಿ ಮಾನವ ಸಂಸ್ಕೃತಿಯು ಯಾವ ಹಂತದ ಯಾವ ಕ್ಷಣದಲ್ಲಿ ಮೊಲೆ-ಮುಡಿ ಇದ್ದದ್ದು ಹೆಣ್ಣೆಂಬ ಪರಿವೇಷಕ್ಕೆ ಒಳಗಾಯಿತೋ, ಗಡ್ಡ-ಮೀಸೆ ಇದ್ದದ್ದು ಗಂಡೆಂಬ ಧಿಮಾಕಿಗೆ ತುತ್ತಾಯಿತೋ ತಾರ್ಕಿಕವಾಗಿ, ತಾತ್ವಿಕವಾಗಿ ಅಷ್ಟೇ ಏಕೆ ವಸ್ತುನಿಷ್ಠ ಇತಿಹಾಸದ ಭಾಗವಾಗಿಯೂ ಹೆಣ್ಣು ಪರಿಪೂರ್ಣಜೀವಿ. ನೈಸರ್ಗಿಕವಾಗಿ ಹೆಚ್ಚು ತಾಳಿಕೆ- ಬಾಳಿಕೆ ಬರುವ ವ್ಯಕ್ತಿತ್ವ ಅವಳದು. ಹೀಗಿರುವಾಗಲೂ ಹೆಣ್ಣು ಉತ್ಪಾದನಾ ಸಾಮರ್ಥ್ಯವಿದ್ದರೂ ಖಾಸಗಿ ಆಸ್ತಿ ಉಗಮದಿಂದ ಆಸ್ತಿ ಒಡೆತನದ ಹಕ್ಕು ಕಸಿಯಲ್ಪಟ್ಟು ಉತ್ಪಾದನಾ ಪ್ರಕ್ರಿಯೆಯಿಂದ ಬೇರ್ಪಡಿಸಲ್ಪಟ್ಟ ಉಪಭೋಗದ ವಸ್ತುವಾದದ್ದು, ಆ ಮೂಲಕ ಕೊನೆಯೇ ಇಲ್ಲದ ಶೋಷಣೆಗೆ ತುತ್ತಾದದ್ದು ಚಾರಿತ್ರಿಕ ಸತ್ಯ.


ಅಧಃಪತನ

ಮಾತೃಪ್ರಧಾನ ವ್ಯವಸ್ಥೆಯಲ್ಲಿ ಮೂಲಭೂತವಾಗಿ ಲಿಂಗಭೇದದ ಯಾವ ತಾರತಮ್ಯಕ್ಕೂ ಒಳಗಾಗದ ಮಹಿಳೆಯೂ ಸಮಾಜದಲ್ಲಿ ಖಾಸಗಿ ಆಸ್ತಿ ಒಡೆತನದ ಹುಟ್ಟಿನೊಂದಿಗೆ ಪುರುಷ ಪ್ರಧಾನ ವ್ಯವಸ್ಥೆಗೆ ಬಲಿಯಾದಳು. ಧಾರ್ಮಿಕವಾಗಿ "ಮಾಯೆ" ಯೆಂದು, ಬೌದ್ಧಿಕವಾಗಿ ಅಲ್ಪಬುದ್ಧಿಯುವಳೆಂದೂ, ರಾಜಕೀಯವಾಗಿ ಅಶಕ್ತಳೆಂದು, ಸಾಮಾಜಿಕವಾಗಿ ಅಬಲೆಯೆಂದು, ಸಾಂಸ್ಕೃತಿಕವಿಲ್ಲವೆಂದು ಹೀಗೆ ಎಲ್ಲ ರೀತಿಯಲ್ಲೂ ಅಧಃಪತನಕ್ಕೆ ತಳ್ಳಲ್ಪಟ್ಟಿತು. ಇಂಥ ನಂಬಿಕೆಗಳ ಸಾಕಾರವಾಗಿ ಅವಳಿಗಾಗಿ ನಿಕೃಷ್ಟ, ಕನಿಷ್ಠ, ಹೀನ ಬದುಕೊಂದು ಶತಮಾನಗಳುದ್ದಕ್ಕೂ ಅಂಟಿಕೊಂಡು ಬಂದು ಹುಸಿ ಮೌಲ್ಯಗಳ ರುಜುವಾತು ಪಡೆದುಕೊಂಡು ನಿಂತಿತು.

ಬದಲಾಗಬೇಕಾದ ಮಹಿಳಾ ದಿನಾಚರಣೆ

ಕಾಲ ಬದಲಾಗಿದೆ. ವ್ಯವಸ್ಥೆಗಳು ಬುಡಮೇಲಾಗುತ್ತಿವೆ ನಾಗರೀಕತೆ ಯಾರ ಕೈಗೂ ಎಟುಕದಷ್ಟು ತೀವ್ರವಾಗಿ ಓಡುತ್ತಿದೆ. ಕಂಪ್ಯೂಟರ್ ಮಾಹಿತಿ ತಂತ್ರಜ್ಞಾನದ ಪ್ರಭುತ್ವ ಜಾಗತಿಕ ಹಳ್ಳಿಯ ಯಜಮಾನ ಆಕಾಶಕ್ಕೆ ಏಣಿ ಹಚ್ಚಿ ಇನ್ನೇನು ಒಂದು ಹೆಜ್ಜೆ

ತುದಿ ಮುಟ್ಟುವ ಹಂತದಲ್ಲಿದ್ದಾನೆ. ಅವನ ಸಾಧನೆಯು ಧಾಪುಗಾಲಿಗೆ ಆಕಾಶ ಪಾತಾಳಗಳೆಲ್ಲ ಸಾಲದೆ ಹೋಗಿ ತ್ರಿವಿಕ್ರಮನೂ ತತ್ತರಿಸುವ ಸ್ಥಿತಿ ಇದು. ಇಂಥದೊಂದು ವಿರಾಡ್ರೂಪದ ಕ್ಯಾನವಾಸಿನಲ್ಲಿ ಮಹಿಳೆಯ ಚಿತ್ರ ಎಲ್ಲಿದೆ? ಅಕ್ಷರಶಃ ಅವಳ ಸ್ಥಿತಿ-ಗತಿ ಏನಾಗಿದೆ? ಮೇಲ್ನೋಟಕ್ಕೆ ಕಾಣಿಸಿಕೊಳ್ಳುವ ಸ್ಥಿತಿಗಳು ಪ್ರಸ್ತುತ ಸಾಮಾಜಿಕ ಸ್ಥಿತಿಗೂ ತಾಳ - ಮೇಳವಿದೆಯೆ? ಸಾಮಾಜಿಕ ಸಂದರ್ಭದ ಸೂಕ್ಷ್ಮಾತಿಸೂಕ್ಷ್ಮ ಒಳಪದರಿನ ಅಂಚಿನಲ್ಲಿ ಮಹಿಳಾಲೋಕದ ಮನಸ್ಸುಗಳನ್ನು ಬಗೆದು ನೋಡುವುದಾದರೆ ಮಹಿಳಾ ವಿಮೋಚನೆಯ ಹಾದಿ ಎಲ್ಲಿದೆ ಎಂದು ತಡಕಾಡುವಂತಾಗುತ್ತದೆ. ವಿಮೋಚನೆ ಎಂಬ ಪದ ಬಂಧನ ಎಂಬುದರ ಕಡೆಗೆ ಬೆರಳು ಮಾಡುತ್ತದೆ. ಹಾಗಾದರೆ ಮಹಿಳೆ ಎಲ್ಲಿಂದದಲ್ಲೂ ತನ್ನ ವಿಮೋಚನೆಗಾಗಿ ಬಡಿದಾಡಬೇಕಾದ ಅವಸ್ಥೆ ಇನ್ನು ಇದೆ ಎಂಬುದೇ ಚಿಂತೆಗೆ ಕಾರಣವಾಗುವುದಿಲ್ಲವೆ? ಏಕೆಂದರೆ ಪ್ರತಿ ಬಾರಿಯೂ ಮಾರ್ಚ್ 8 ಬಂದೊಡನೆಯೇ ಒಂದಷ್ಟು ಸರಕಾರಿ ಶ್ರಾದ್ಧದಂತಿರುವ ಮಹಿಳಾ ದಿನಾಚರಣೆಗಳು, ಮಾಧ್ಯಮಗಳಿಗೆ ಆಹಾರವಾಗುವ 'ಕಿಸಬಾಯಿ ದಾಸನಂಥ' ವಿರಾಟಗಳು ಮಂತ್ರಿ ಮಹೋದಯರ ಮಹಿಳಾ ಪರ ತುಟಿ ಅನುಕಂಪಗಳು, ಸ್ಟಿಕ್ಕರ್‌ಗಳು, ಘೋಷಣೆಗಳು, ಇದೆ ನೆವದಲ್ಲಿ ಬಾಯ್ಮುಚ್ಚಿಸುವ ರಾಜಕೀಯ ಲಾಬಿಯ ಒಂದೆರಡು ಪ್ರಶಸ್ತಿಗಳು ಇವೆಲ್ಲ ಮಹಿಳೆಯ ಪೂರ್ಣಪ್ರಮಾಣದ ಬಿಡುಗಡೆಗೆ ಸಹಾಯಕಾರಿಯಾಗಬಲ್ಲವೆ? ಎಂಬ ಪ್ರಶ್ನೆಯ ಹಿನ್ನೆಲೆಯಲ್ಲಿ ಪ್ರಜಾತಾಂತ್ರೀಯ ಆಡಳಿತ ಹೊಂದಿದ ಭಾರತದಂಥ ದೇಶದಲ್ಲಿ ಶೇಕಡಾ 33 ಮಹಿಳಾ ಮೀಸಲಾತಿ ಮಸೂದೆ ಪಾಸಾಗಲು ಸಾಧ್ಯವೇ ಇಲ್ಲದಂತಹ ಪಾರ್ಲಿಮೆಂಟರಿ ನಾಟಕ ನಿರ್ಮಾಣವಾಗುತ್ತಿರುವ ವ್ಯಂಗ್ಯವನ್ನು ಗಮನಿಸಬಹುದು. ದೇಶದ ಒಟ್ಟು ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯ ಸಹಭಾಗಿತ್ವ ಸಂಸತ್ತಿನಲ್ಲಿ ಇಂದಿಗೂ ಶೇಕಡಾ 11ನ್ನು ಮುಟ್ಟಿಲ್ಲವೆಂಬುದನ್ನು ಗಮನಿಸಿದಾಗ ಆಶ್ಚರ್ಯವಾಗದೆ ಇರದು. ಸಾಕ್ಷರತೆ ಪ್ರಮಾಣ ಪುರುಷರಿಗೆ



ಹೋಲಿಸಿದಾಗ ತೀರ ಕಡಿಮೆಯಾಗಿದೆ. ಗ್ರಾಮಾಂತರ ಪ್ರದೇಶದ ಮಹಿಳೆಯರ ಜೀವನ ವಿಧಾನ ಇನ್ನುವರೆಗೂ ಆದಿಮಾನವ ಸಂಸ್ಕೃತಿ ಹಂತದಿಂದ ಬಹಳೇನು ಮೇಲೆ ಬಂದಂತೆ ಕಾಣಿಸುವುದಿಲ್ಲ.

ಗಣನೀಯ ಪಾತ್ರ

ಈ ಭೂಮಿಯ ಮೇಲಿನ ಹೆಣ್ಣೆಂಬ ಜೀವಕ್ಕೆ ಒಂದಷ್ಟು ನೆಮ್ಮದಿ ಬೇಕು. ಹಿಡಿ 'ಬದುಕು' ಬೇಕು. ಬೊಗಸಿ ತುಂಬ ಪ್ರೀತಿ ಬೇಕು. ಇಂಥ ಉಪಲಬ್ಧಿಯ ಅಂಗವಾಗಿ ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ, ಸಾಂಸ್ಕೃತಿಕ ಹಿರಿಮೆ, ರಾಜಕೀಯ ಹಕ್ಕು, ಕೌಟುಂಬಿಕ ನ್ಯಾಯ, ಮುಂತಾದವುಗಳು ಸಾಕಾರಗೊಳ್ಳಬೇಕು. ಹಾಗೇ ನೋಡಿದರೆ ಆಧುನಿಕ ಬದುಕು ಒಂದಷ್ಟು ಆರ್ಥಿಕ ಆಧಾರ ಒದಗಿಸುವ ತುರ್ತಿಗೆ ಒಳಗಾದದ್ದು ಇದೆ. ಭಾರತೀಯ ಸಾಮಾಜಿಕ ವ್ಯವಸ್ಥೆ ಮತ್ತು ಕೌಟುಂಬಿಕ ಸಂರಚನೆಗಳು ಇಂದು ಹೊರಳು ಹಾದಿಯಲ್ಲಿವೆ. ಆ ಕಾರಣವಾಗಿ ಹೆಣ್ಣು, ಗಂಡು ಮಂದಿಯೆಲ್ಲ ಬೀದಿಯಲ್ಲಿ ಬಂದು ದುಡಿಯುದಿದ್ದರೆ, ವ್ಯಾಪಾರೀಲೋಕಕ್ಕೆ ಪರಿಚಯಿಸಿಕೊಳ್ಳದಿದ್ದರೆ. ಹೊಟ್ಟೆಯ ಪಾಡು ನಡೆಯುವಂತೆ ಇಲ್ಲ. ಹೀಗಾಗಿ ಇಂದು ಮಹಿಳೆ ನಾಲ್ಕು ಗೋಡೆ ಬಿಟ್ಟು ಹೊರ ಬಂದು ಪುರುಷ ದುಡಿಯಬಹುದಾದ ಎಲ್ಲ ಕ್ಷೇತ್ರಗಳಿಗೂ ಪ್ರವೇಶ ಪಡೆದಿದ್ದಾಳೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಪ್ರಮುಖ ಕೊಂಡಿಯಾಗಿದ್ದಾಳೆ. ಹಾಗೇ ನೋಡಿದರೆ ಯಾವ ಕಾಲಕ್ಕಾದರೂ ದೇಶದ ಒಟ್ಟು ಉತ್ಪಾದನೆಯಲ್ಲಿ ಗಣನೀಯ ಪಾಲು ಮಹಿಳೆಯರದೇ ಎಂಬುದರಲ್ಲಿ ಎರಡು ಮಾತಿಲ್ಲ. ಮನೆಯ ಒಳಗೂ-ಹೊರಗೂ ರಾತ್ರಿ-ಹಗಲು, ಬಾಲ್ಯ-ಯೌವ್ವನ-ಮುಪ್ಪು ಎಲ್ಲಾ ಅವಸ್ಥೆಯಲ್ಲೂ ದುಡಿಯುತ್ತಿದ್ದಾಳೆ. ನರಮಾನವನ ಪ್ರಮುಖ ಪೋಷಕಿಯಾಗಿದ್ದಾಳೆ. ಹೀಗಿದ್ದಾಗಲೂ ಇವತ್ತಿಗೂ ತನ್ನ ಹಕ್ಕಿಗಾಗಿ ಅವಳು ಸಂಘರ್ಷಕ್ಕಿಳಿಯದೆ ಇರುವುದು ಸಾಧ್ಯವಾಗುತ್ತಿಲ್ಲ. ಕೂಲಿ ತಾರತಮ್ಯ ಹಿಡಿದುಕೊಂಡು, ಕೌಟುಂಬಿಕ ಆಸ್ತಿಯ ಹಂಚಿಕೆ ಇರಬಹುದು. ಶಿಕ್ಷಣ, ವೈದ್ಯಕೀಯ ಸೌಲಭ್ಯ, ಮನೆಯ ಒಡೆತನ, ಮಕ್ಕಳ ಹೆರುವ ಹಕ್ಕು ಮುಂತಾದ ಅತ್ಯಂತ ಸಣ್ಣ ಕಾರಣದಿಂದ ಹಿಡಿದು ತೀರ ಗಂಭೀರವಾದ ರಾಜಕೀಯ ಹಕ್ಕು, ಧಾರ್ಮಿಕ ಸ್ವಾತಂತ್ರ್ಯವರೆಗೂ ಅವಳು ಧ್ವನಿ ಎತ್ತಬೇಕಾಗಿದೆ.

ಸಾಫಲ್ಯದ ಪಥ

ಈ ನಿಟ್ಟಿನಲ್ಲಿ ಮಾರ್ಚ್ 8 ರಂದು ನ್ಯೂಯಾರ್ಕಿನಲ್ಲಿ ಸಿದ್ಧ ಉಡುಪು ತಯಾರಕರಾದ

ಆಧುನಿಕ ಭಾರತೀಯ ಬದುಕು ಪರಿವರ್ತನೆಯ ಘಟ್ಟ ಕೊಡುತ್ತಲೇ
ಒಂದು ವರ್ಗದ ಬೆರಳೆಣಿಕೆಯಷ್ಟು ಹೆಣ್ಣುಮಕ್ಕಳಿಗೆ ಉನ್ನತ ಹುದ್ದೆಗಳು, ಗಗನಸಖಿ, ಸಿನಿಮಾತಾರೆ,
ಕಂಪನಿ ನಿರ್ದೇಶಕರು, ವೈದ್ಯರು, ಇಂಜಿನಿಯರ್‌ಗಳು, ರಾಷ್ಟ್ರಗಳ ಮುಂತಾದ ಅವಕಾಶಗಳನ್ನು
ಕೊಡುವಷ್ಟು ಕೂಡ ತನ್ನದೇ ಸ್ವಾತಂತ್ರ್ಯ ಬೆಳೆಸಿಕೊಂಡದ್ದು ಸುಳ್ಳೇನು ಅಲ್ಲ.

ಮಾದರಿ ನೇತೃತ್ವ

ಪಶ್ಚಿಮ ಬಂಗಾಳದಲ್ಲಿ ಮಹಿಳಾ ಪಂಚಾಯತ್ ಸದಸ್ಯರ ಸಂಖ್ಯೆ ಶೇ.33 ಮೀಸಲಾತಿಯನ್ನು ಮೀರಿಸಿ ಶೇ. 43.64 ರಷ್ಟಾಗಿದೆ. ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳೆಯರಿಗೆ ಶೇ.22.50 ಸ್ಥಾನ ಮೀಸಲಿದ್ದರೂ ಆಯ್ಕೆಯಾದವರ ಶೇ.ಸಂಖ್ಯೆ 46.23 ರಷ್ಟಿದೆ. ಒಟ್ಟು ಚುನಾಯಿತ ಮಹಿಳೆಯರಲ್ಲಿ ದಲಿತರ ಸಂಖ್ಯೆ 6256 ಆಗಿದೆ. ಅಂದರೆ ಮೀಸಲಿಟ್ಟ 2458 ಸ್ಥಾನಗಳಿಗಿಂತ ಸುಮಾರು ಮೂರು ಪಟ್ಟು ಹೆಚ್ಚು.

ಮಹಿಳಾ ಕಾರ್ಮಿಕರು ನ್ಯಾಯಕ್ಕಾಗಿ ಎತ್ತಿದ ದನಿ ಮಹಿಳಾ ಹೋರಾಟಕ್ಕೊಂದು ಗಮನಾರ್ಹ ಚಾಲನೆಯಾಗಿತ್ತು ಎಂಬುದನ್ನು ಮರೆಯುವಂತಿಲ್ಲ. ನ್ಯೂಯಾರ್ಕಿನ ಒಂದು ಭಾಗದಲ್ಲಿ ಉದ್ದ ಆ ಕೂಗು ವಿಶ್ವವ್ಯಾಪಿಯಾಗಿ ಎಷ್ಟರಮಟ್ಟಿಗೆ ಅನುರಣಿಸುತ್ತಿದೆ ಮತ್ತು ಬರೀ ಧ್ವನಿಯಾಗುವುದು ಮಾತ್ರವಲ್ಲ ಸಾಫಲ್ಯದ ಪಥದಲ್ಲಿದೆ ಎಂಬುದು ಮುಖ್ಯವಾಗುತ್ತದೆ.

ಕುತಂತ್ರಗಳು

ಆಧುನಿಕ ಭಾರತೀಯ ಬದುಕು ಪರಿವರ್ತನೆಯ ಘೋಜು ಕೊಡುತ್ತಲೇ ಒಂದು ವರ್ಗದ ಬೆರಳೆಣಿಕೆಯಷ್ಟು ಹೆಣ್ಣು ಮಕ್ಕಳಿಗೆ ಐ.ಟಿ.ಹುದ್ದೆಗಳು, ಗಗನಸಖಿ, ಸಿನಿಮಾತಾರೆ, ಕಂಪನಿ ನಿರ್ದೇಶಕರು, ವೈದ್ಯರು, ಇಂಜನಿಯರು, ಕ್ಲರ್ಕುಗಳು ಮುಂತಾದ ಅವಕಾಶಗಳನ್ನು ಕೊಡುವಲ್ಲಿ ಕೂಡ ತನ್ನದೆ ಕುತಂತ್ರ ಬಳಸಿಕೊಂಡದ್ದು ಸುಳ್ಳೇನೂ ಅಲ್ಲ. ದಿನ ಬೆಳಗಾದರೆ ಹೆಚ್ಚಾಗುತ್ತಿರುವ ವರದಕ್ಷಿಣೆ ಸಾವುಗಳು, ವೇಶ್ಯಾವಾಟಿಕೆ ಮತ್ತು ಬಾಲ ವೇಶ್ಯಾವಾಟಿಕೆ ಪ್ರವೃತ್ತಿ ಹಿಂದೆಗಿಂತಲೂ ದೈತ್ಯ ಪ್ರಮಾಣದಲ್ಲಿ ಬೆಳೆಯುತ್ತಿದೆ. ಮುಕ್ತ ಮಾರುಕಟ್ಟೆಗೆ ಹೆಣ್ಣು ಗ್ಲಾಮರಸ್ ಲೋಕದ ಅದ್ಭುತ ಸರಕು. ಅಗ್ಗದ ಭೋಗಕ್ಕೆ ಸುಲಭ ಸಾಧನ. ಇನ್ನೊಂದೆಡೆ ಕೌಟುಂಬಿಕ ದೌರ್ಜನ್ಯ ಕಣ್ಣಿಗೆ ಕಾಣದಷ್ಟು ಸೂಕ್ಷ್ಮ ಮತ್ತು ತೀಕ್ಷ್ಣವಾಗುತ್ತಿದೆ.

ಮಹಿಳೆಯರ ರಕ್ಷಣೆಗಾಗಿ ಯೋಜಿಸಿದ ಕಾನೂನು, ಕೋರ್ಟು, ಪೋಲೀಸು, ಮಹಿಳಾ ಆಯೋಗ ಮುಂತಾದ ಪ್ರಜಾತಾಂತ್ರಿಕ ಅಂಗಗಳು ಸಂಪೂರ್ಣ ನಿಷ್ಕ್ರಿಯವಾಗಿ ಕ್ಯಾಲೆಂಡರಿನ ಹುಲಿಯಂತೆ ಉಳ್ಳವರ ಮನೆಯ ಗೋಡೆಗಳನ್ನು ಅಲಂಕರಿಸಿವೆ. ಬಂಡವಾಳಶಾಹಿ, ಭೂಮಾಲೀಕ, ಪಾಳೆಗಾರಿ ವ್ಯವಸ್ಥೆಯಲ್ಲಿ ಆಧುನಿಕ ಪುರೋಹಿತಶಾಹಿಯ ವ್ಯವಸ್ಥೆಯೊಂದು ಸಂಸ್ಕೃತಿಯ ನೆಪದಲ್ಲಿ ಹೆಣ್ಣನ್ನು ದೇವತೆ ಎಂಬ ಅಪಭ್ರಂಶಕ್ಕೆ ಮತ್ತೆ ತಳ್ಳುತ್ತಿದೆ. ಗ್ರಾಮಮಟ್ಟದಲ್ಲಿ ಒಂದು ಬಿಂದಿಗೆ ನೀರಿಗಾಗಿ ಹತ್ತಾರು ಕಿ.ಮೀ ಕಾದ ಬಿಸಲಿನಲ್ಲಿ ಮಹಿಳೆಯರು ದಾರಿ ಸವೆಸುತ್ತಿದ್ದಾರೆ. ಕನಿಷ್ಠ ಮಟ್ಟದ ಶೌಚಾಲಯಗಳಿಲ್ಲದ ನಮ್ಮ ಹಳ್ಳಿ, ಸ್ಲಮ್‌ಗಳಲ್ಲಿ ಸ್ತ್ರೀಯರಿಗೆ ಬಹಿರ್ದೆಸೆಯೇ ಒಂದು ಶಾಪವೆಂಬಂತಾಗಿದೆ. ನಡೆಯುವ ಒಟ್ಟು ಅತ್ಯಾಚಾರ ಪ್ರಕರಣಗಳಲ್ಲಿ ಶೇಕಡಾ 40 ರಷ್ಟು ಪ್ರಕರಣಗಳು ಸ್ತ್ರೀಯರು ಶೌಚಾಲಯಕ್ಕೆಂದು ಹಳ್ಳಿಗಳ ಕಳ್ಳಿ-ಕಂಟಿ ಸಂದು-ಗೊಂದುಗಳಲ್ಲಿ ಹೋದಾಗ ಸಂಭವಿಸುತ್ತಿವೆ. ಈಗಂತೂ ಜಾಗತೀಕರಣದ ಭೂತ ಕರೆಂಟನ್ನು ಖಾಸಗೀಕರಣಗೊಳಿಸುತ್ತಿದ್ದು, ಕಾರ್ಖಾನೆಗಳು ವಿದ್ಯುತ್ ಬಿಲ್ ಭರಿಸಲಾಗದೆ ಸಂಪೂರ್ಣ ಮುಚ್ಚಲ್ಪಟ್ಟಿವೆ. ನೀರಾವರಿ ಪಂಪ್‌ಸೆಟ್‌ಗಳು ನಿಂತುಹೋಗಿವೆ. ಇದರಲ್ಲಿ ದುಡಿಯುತ್ತಿರುವ ಮಹಿಳೆಯರ ಅನ್ನವನ್ನು ಮಕ್ಕಳ ಗಂಜಿಯನ್ನು ನಿರ್ದಯವಾಗಿ ಕಸಿದುಕೊಳ್ಳಲಾಗುತ್ತಿದೆ. ಅಷ್ಟೇ ಏಕೆ ಬೀಸುವ ಹಿಟ್ಟಿನ ಗಿರಣಿಗಳಿಗೂ ಸಂಚಕಾರ ಬಂದು ಮಹಿಳೆಯರು ಮತ್ತೆ ನಸುಕಿನಲ್ಲೆದ್ದು ಬೀಸುಕಲ್ಲಿನ ಪದಗಳನ್ನು ಅರಣ್ಯರೋದನದ ಮಾದರಿಗೆ ಇಳಿಸಬೇಕಾದ ಅನಿವಾರ್ಯತೆ ಬಂದೊದಗಿದೆ. ಖಾಸಗೀಕರಣ ಪ್ರಕ್ರಿಯೆ ಅಂಗವಾಗಿ ದಿನಕ್ಕೊಂದರಂತೆ ಬರುತ್ತಿರುವ ಹೊಸ ಯೋಜನೆಗಳಂತೂ ಮಹಿಳಾ ಲೋಕಕ್ಕೆ ಶಾಪವಾಗಿ ಪರಿಣಮಿಸುತ್ತಿದೆ. ಒಂದು ಉದಾಹರಣೆ ಕೊಡಬಹುದಾದರೆ, ಉನ್ನತ ಶಿಕ್ಷಣಕ್ಕೆ ಅನುದಾನ ಕಡಿತ ಎಂಬ ಅಸ್ತ್ರ ಏನೆಲ್ಲ ದುಷ್ಪರಿಣಾಮಗಳನ್ನು ಬೀರುವದರೊಂದಿಗೆ



ಚಿತೆಯೇರುವ ಪ್ರಶ್ನೆ

ಏಳೇಳು ಜನುಮದಲಿ
ನನ್ನನ್ನೇ ಸತಿಯಾಗಿ
ಪಡೆಯುವ ವಾಗ್ದಾನವನು
ಅಂದು ನೀ ಮಾಡಿದ್ದೆ
ಸಪ್ತಪದಿ ತುಳಿಯುವಾಗ.
ಇಂದೇಕೆ ಕೇಳುತ್ತಿರುವೆ
"ನಾನು ಸತ್ತರೆ ನೀನು
ನನ್ನೊಂದಿಗೆ ಚಿತೆಯೇರುವೆಯಾ?
ಸತಿಯಾಗುವೆಯಾ?" ಎಂದು
ಆಗ ನಾನು ಹೇಳಿದೆ
"ನೀನಿನ್ನೂ
ನನ್ನ ಕಣ್ಣುಂದೆಯೇ ನಿಂತಿರುವೆ
ಜೀವಂತ ಉಸಿರಾಡುತ್ತಿರುವೆ
ಮೊದಲೊಮ್ಮೆ ನೀನು ನನಗಾಗಿ
ಸತ್ತಾದರೂ ತೋರಿಸು
ಆ ಮೇಲೆ ಬರುವುದು
ನಾನು ಚಿತೆಗೇರುವ ಪ್ರಶ್ನೆ.

- ಕೆ.ಶರೀಫಾ

(ಪಾಂಚಾಲಿ ಸಂಕಲನದಿಂದ)

ಪ್ರಮುಖವಾಗಿ ಮಹಿಳೆಯರು ಮತ್ತು ಬಡವರಿಂದ ಶಿಕ್ಷಣವನ್ನು ಶಾಶ್ವತವಾಗಿ ಕಸಿದುಕೊಳ್ಳುತ್ತದೆ. ಲಿಂಗಭೇದನೀತಿಯ ಕಪಿಮುಷ್ಠಿಯಲ್ಲಿರುವ ಭಾರತೀಯರು ಆಯ್ಕೆಯ ಪ್ರಶ್ನೆ ಬಂದಾಗ ಶಿಕ್ಷಣ ದುಬಾರಿಯಾದಾಗ ಗಂಡುಮಗನಿಗೆ ಇದನ್ನು ದೊರಕಿಸಬಲ್ಲರೆ ಹೊರತು ಹೆಣ್ಣುಮಕ್ಕಳಿಗೆ ಅಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಲೇ ಬೇಕು. ಉನ್ನತ ಶಿಕ್ಷಣದಿಂದ ಮಹಿಳೆ ವಂಚಿಸಲ್ಪಟ್ಟರೆ ಬದಲಾಗುತ್ತಿರುವ ಸಂದರ್ಭದಲ್ಲಿ ಅವಳ ಬುದ್ಧಿಗಿಂತ ಭೌತಿಕ ದೇಹ ಪ್ರಧಾನವಾಗುತ್ತದೆ. ಅವಳ ಎಗ್ಗಿಲ್ಲದ ಅಜ್ಞಾನ, ಅನಕ್ಷರತೆ ಜಾಗತಿಕ ದೊರೆಗಳ ಕೆಲಸಗಳನ್ನು ಸುಗಮಗೊಳಿಸುತ್ತದೆ. ಮಾಧ್ಯಮದ ಜಾಹಿರಾತುಗಳೆಲ್ಲ ಮಹಿಳೆಯನ್ನು ಭೋಗಲೋಲುಪ್ತತೆಯ ಲಾಭದಾಯಕ ಸರಕನ್ನಾಗಿ ಪರಿಗಣಿಸುತ್ತ ಕೀಳು ಮಟ್ಟದ ಪ್ರಚಾರದ ಬಂಡವಾಳವನ್ನಾಗಿ ಮಾಡಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಮಹಿಳೆ ತನ್ನ ವಿಮೋಚನೆಯ ಪರಿಭಾಷೆಯನ್ನು ಪುನಃ ಅನುಸಂಧಾನಗೈಯ್ಯಬೇಕಿದೆ. ಇಂದು ಮಹಿಳೆ ಥಳಕು- ಬಳುಕಿನ ವೇಷ ಹಾಕಿ ಕೈತುಂಬ ಸಂಬಳ ಪಡೆದು ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಬೇಕಾಬಿಟ್ಟಿ ತಿರುಗಾಡುವುದನ್ನು ತನ್ನ ವಿಮೋಚನೆ ಎಂದು ತಿಳಿದುಕೊಂಡಿಲ್ಲ. ಈ ಎಲ್ಲ ಗ್ಲಾಮರಸ್ ದುರ್ಮಾರ್ಗಗಳ ಹಳವಂಡಗಳಿಂದ ಪಾರಾಗಿ ಉತ್ಪಾದನಾ ಸಾಧನ ಸಲಕರಣೆಗಳಲ್ಲಿ ಸಮಭಾಗಿ, ಸಮ ಹಕ್ಕು ಪಡೆಯುವುದು, ಆತ್ಮಸಮ್ಮಾನ, ಆತ್ಮಪ್ರತ್ಯಯದ ಸ್ವಯಂಪೂರ್ಣ ವ್ಯಕ್ತಿತ್ವ ರೂಪಿಸಿಕೊಳ್ಳುವುದನ್ನು ಅವಳು ಸಂಪೂರ್ಣ ವಿಮೋಚನೆ ಎಂದು ಪರಿಗಣಿಸುತ್ತಾಳೆ. ಸಂಪೂರ್ಣ ವಿಮೋಚನೆಯ ಮಾರ್ಗದಲ್ಲಿ ಪರಿವರ್ತನೆಯ ಮಜಲನ್ನು ಸಂಘಟಿತ ವಲಯದೊಂದಿಗೆ ಕಂಡುಕೊಳ್ಳಬೇಕಿದೆ. ಪರಿವರ್ತನೆಯ ಮಾರ್ಗ ಸುಲಭಸಾಧ್ಯವೇನಲ್ಲ. ಆದಕ್ಕಂತಲೆ ಮಹಿಳೆ ಸಮಾನತೆಯ ಸಮಾಜಕ್ಕಾಗಿ, ಆರೋಗ್ಯಪೂರ್ಣ ಬದುಕಿಗಾಗಿ ನಿರಂತರ ಹೋರಾಟಕ್ಕೆ ಇಳಿಯಬೇಕಿದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತ ಎಲ್ಲಾ ಪುರುಷರೊಂದಿಗೆ ಸೇರಿ ಸಾಂಘಿಕ ಶಕ್ತಿಯನ್ನು ಹೆಚ್ಚು ಅನಾವರಣಗೊಳಿಸುತ್ತ ಮುಂದಡಿಯಿಡಬೇಕಾಗಿದೆ.

(ಲೇಖಕರು ಗುಲಬರ್ಗಾದ ಪದವಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ.)

ಡ್ರೆಸ್ ಕೋಡ್.....!


ಹಿಂದೂ ರಾಷ್ಟ್ರ ರಚನೆಯು ಹಿಂದೂ ಮೂಲಭೂತವಾದದ ಅಜೆಂಡಾ ಆಗಿದ್ದರೂ, ಅದು ಇತರೆ ಧಾರ್ಮಿಕ ಮೂಲಭೂತವಾದದ ಬೆಳವಣಿಗೆಗೆ ಪರೋಕ್ಷವಾಗಿ ಕಾರಣವಾಗುತ್ತಿದೆ. ಮಹಿಳೆಯರ ಮೇಲೆ ಹೆಚ್ಚಾದ ನಿಯಂತ್ರಣ ಹೊಂದುವುದೇ ಎಲ್ಲಾ ಧರ್ಮಗಳ ಮೂಲಭೂತವಾದಿಗಳ ಗುರಿಯಾಗಿದೆ. ಇತ್ತೀಚೆಗೆ ಅಲ್ಲಲ್ಲಿ ಮಹಿಳೆಯರ ಮೇಲೆ ಉಡುಪು ಸಂಹಿತೆ ಹೇರಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬರೋಡ ಮತ್ತು ಕಾನ್ಪುರದಲ್ಲಿ ಉಡುಪು ಸಂಹಿತೆ ಹೇರಿದ ಭಜರಂಗ ದಳವಾಗಲೀ, ಮಹಾರಾಷ್ಟ್ರದ ಪತಿತಪಾವನ ಸಂಘಟನೆಯಾಗಲೀ ಮತ್ತು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಭಯೋತ್ಪಾದಕ ಸಂಘಟನೆಯಾಗಲಿ ಇವರೆಲ್ಲರ ಅಸ್ತ್ರ ಮಹಿಳೆಯರ ಉಡುಪಿನ ಮೇಲೆ ನಿಯಂತ್ರಣ ಹೇರುವುದು. ಹೆಚ್ಚಿನ ಮಹಿಳೆಯರಿಗೆ ಇಂತಹ ಆದೇಶಗಳ ಬಗ್ಗೆ ತೀವ್ರ ಅಸಮಾಧಾನವಿದ್ದರೂ ಭಯೋತ್ಪಾದಕರ ಕೈಯಲ್ಲಿರುವ ಬಂದೂಕುಗಳು ಮಹಿಳೆಯರನ್ನು ತಲೆಬಾಗುವಂತೆ ಮಾಡುತ್ತಿವೆ. ಭಾರತೀಯ ಮುಸ್ಲಿಂರಲ್ಲಿ ಬುರ್ಖಾ ಪದ್ಧತಿ ವ್ಯಾಪಕವಾಗಿಲ್ಲದಿರುವಾಗ ಬುರ್ಖಾ ಕಡ್ಡಾಯಗೊಳಿಸುವ ಆದೇಶಗಳು ಮಹಿಳೆಯರನ್ನು ಕೆರಳಿಸಿವೆ. ಮಹಿಳೆಯರ ಈ ವಿರೋಧ ಬುರ್ಖಾ ತೊಡಬೇಕೆಂಬ ನಿಯಮಕ್ಕಿಂತಲೂ ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ನಿಯಂತ್ರಿಸುವ ಮನೋಭಾವದ ಬಗೆಗಿನ ವಿರೋಧವಾಗಿದೆ. ಇಂತಹ ನಿಯಂತ್ರಣಗಳು ಎಲ್ಲಾ ಧರ್ಮಗಳ ಮಹಿಳೆಯರ ಮೇಲೂ ಪರಿಣಾಮ ಬೀರುತ್ತಿರುವುದರಿಂದ ಮಹಿಳೆಯರು ಜಾತಿ-ಧರ್ಮದ ಹಂಗು ತೊರೆದು ಒಗ್ಗಟ್ಟಿನಿಂದ ಇದರ ವಿರುದ್ಧ ಹೋರಾಡಿ, ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಬೇಕಾಗಿದೆ.

★ ★ ★

ಆಗಸ್ಟ್ 11 ರಂದು ಗುಜರಾತ್‌ನ ಹಿಂದೂ ಮಹಾಸಭಾದ ಕಚೇರಿಯಲ್ಲೇ ಭಾರತಿ ಭಾನೋಟ್ ಎಂಬ ಯುವತಿ ಆತ್ಮಹತ್ಯೆ ಮಾಡಿಕೊಂಡಳು. ಕಾರಣ- ಅವಳ ಗಂಡ ಸಲೀಂನಿಂದ ಆಕೆಯನ್ನು ಪ್ರತ್ಯೇಕಿಸಿ ಒಬ್ಬ ಮುಸ್ಲಿಮನನ್ನು ಮದುವೆಯಾದದ್ದಕ್ಕೆ 'ಶುದ್ದೀಕರಣ'ಕ್ಕೆ ಒಳಗಾಗುವಂತೆ ಒತ್ತಡ ಹೇರಲಾಗಿತ್ತು.


★ ★ ★

ಪ್ರತಿವರ್ಷ ಈ ದೇಶದಲ್ಲಿ ಹುಟ್ಟುವ 12 ದಶಲಕ್ಷ ಹೆಣ್ಣು ಮಕ್ಕಳಲ್ಲಿ 3 ದಶಲಕ್ಷ ಮಕ್ಕಳು 15 ಲಕ್ಷಕ್ಕೂ ಮೊದಲೇ ಸಾವನ್ನಪ್ಪುತ್ತಿದ್ದಾರೆ. ಭಾರತದಲ್ಲಿ ಅತೀ ಹೆಚ್ಚು ಬಾಲ ಕಾರ್ಮಿಕರಿದ್ದಾರೆ. ಬಾಲಕಾರ್ಮಿಕರ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚುತ್ತಲೇ ಇದೆ. ಮನೆಗಳಲ್ಲಿ ಮಹಿಳೆಯರು ಗೃಹ ಕೃತ್ಯಗಳ ಹೊರೆಯನ್ನು ಹೆಣ್ಣು ಮಕ್ಕಳ ಪುಟ್ಟ ಹೆಗಲಿಗೇ ವರ್ಗಾಯಿಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಬಾಲ್ಯವೇ ಇಲ್ಲವಾಗಿದೆ.



ಸಂಕಟಗಳ ಹಲವು ಮುಖಗಳು

ಇವು ಬಿಡಿ ಘಟನೆಗಳಲ್ಲ. ಒಡಲುರಿಯ ತಾಪದ ಕಿಡಿಗಳು. ಇಂತಹ ಒಂದೊಂದು ಸಂಗತಿಗಳಿಗೂ ಆಳುವವರ ನೀತಿಗಳಿಗೂ ಇರುವ ಸಂಬಂಧಗಳೇನು?



ಕೆ.ನೀಲಾ

ಈ ಲೇಖನ ಬರೆದ ಹೊತ್ತಿಗೆ ಮತ್ತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ನಮ್ಮನ್ನು ಇನ್ನಷ್ಟು ಗಾಬರಿಗೊಳಿಸುವ ಘಟನೆ ಸಂಭವಿಸಿದೆ. ನಾಗರೀಕ ಸಮಾಜ ತಲೆ ತಗ್ಗಿಸುವಂತಹ ಭಯಂಕರ ಅವಘಡ ನಡೆದಿದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚಾಗಬಾವಿ ಗ್ರಾಮದಲ್ಲಿ 139 ಸಾಮೂಹಿಕ ವಿವಾಹಗಳು ನಡೆದಿದ್ದು ಅವುಗಳಲ್ಲಿ 60 ರಷ್ಟು ಜೋಡಿ ಅಪ್ರಾಪ್ತ ವಯಸ್ಸಿನ ಮಕ್ಕಳಾಗಿದ್ದವು. ಅದರಲ್ಲೂ ವರನಿಗಿಂತಲೂ ವಧುವಿನ ವಯಸ್ಸು ಅತ್ಯಂತ ಕಡಿಮೆ. ಈ ಮದುವೆಗೆ ಮಂತ್ರಿ ಮಹೋದಯರು, ಅಧಿಕಾರಿಗಳು, ಇನ್ನಿತರ ಜನಪ್ರತಿನಿಧಿಗಳು, ಅನೇಕ ಪ್ರತಿಷ್ಠಿತರು ಭಾಗವಹಿಸಿ ಬಡತನದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುತ್ತ ವಧು-ವರರನ್ನು ಆಶೀರ್ವದಿಸಿ ಜೈ ಜೈ ಎನಿಸಿಕೊಂಡು ಕಾರು ಹತ್ತಿದರು. ಇಷ್ಟೆಲ್ಲವೂ ಪೋಲೀಸರ ಸಮಕ್ಷಮದಲ್ಲಿ ನಡೆದಿದೆ. ಸಂಘಟಕರಿಗೂ ಬಾಲ್ಯವಿವಾಹ ಮಾಡಿಸುವುದು ತಪ್ಪು ಮತ್ತು ಅಪರಾಧ ಎನಿಸಲೇ ಇಲ್ಲ.

ಮೇಲ್ನೋಟಕ್ಕೆ ಈ ಪ್ರಕರಣ ಒಂದು ಮಾಮೂಲಿ ಅವಘಡದಂತೆ ಕಾಣಿಸಬಹುದಾದರೂ ಏನೂ ಅರಿಯದ ಹೆಣ್ಣು ಕಂದಮ್ಮಗಳನ್ನು ಮದುವೆ ಮಾಡುವ ಮೂಲಕ ಅವರುಗಳ ಇಡೀ ಭವಿಷ್ಯವನ್ನು ಅಂಧಕಾರದ ಕೂಪಕ್ಕೆ ತಳ್ಳಿದ್ದಾರೆ. ಮದುವೆಯನ್ನು ಒಂದು ಸ್ವಪ್ರತಿಷ್ಠೆಗೆ ಮತ್ತು ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಆಯ್ಕೆಯಾದ ಜನಪ್ರತಿನಿಧಿಗಳ ಸಮಕ್ಷಮದಲ್ಲಿ ಈ ಮದುವೆಗಳು ನಡೆದಿದ್ದು ಬೆಚ್ಚಿಬೀಳಿಸುವಂತಹದ್ದು. ಯಾರು ಕಡೇ ಪಕ್ಷ ಕಾನೂನಿಗಾಗಿಯಾದರೂ ಕಾನೂನನ್ನು ಸಂರಕ್ಷಿಸಬೇಕೋ ಅವರೇ ಸ್ವತಃ ಕಾನೂನು ಮುರಿದ ಕೆಲಸವನ್ನು ರಾಜಾರೋಷವಾಗಿ ಮಾಡಿದ್ದಾರೆ. ಬಾಲ್ಯವಿವಾಹದಿಂದ ಮುಂದೆ ಘಟಿಸುವ ಅನಾಹುತಕಾರಿ ಅವಘಡಗಳಿಗೆ ಮಹಿಳೆ ಮಾತ್ರ ಬೆಲೆ ತೆರಬೇಕಾಗುತ್ತದೆ. ಬಲಿಯಾಗಬೇಕಾಗುತ್ತದೆಂಬ ಕನಿಷ್ಟ ಪ್ರಜ್ಞೆ ಇಲ್ಲದ ಕಂದಾಚಾರ, ಪಾಳೇಗಾರಿ ಮೌಲ್ಯಗಳನ್ನು ಪ್ರತಿಪಾದಿಸುವ, ಪ್ರಶ್ನಿಸದೇ ಇರುವ ಕೇವಲ ಓಟಿನ ರಾಜಕಾರಣಿಗಳು ಜನಪ್ರತಿನಿಧಿಗಳಾಗಿ ಆರಿಸಿ ಬಂದಿರುವ ದುರಂತವನ್ನು ಕಾಣುತ್ತಿದ್ದೇವೆ.

• • •

ಮನೆಗೆಲಸ ಮಾಡುವ ಬಸಮ್ಮ ಒಂದು ಕೈಯಲ್ಲಿ ಔಷಧಿಗಳ ಪಾಕೆಟ್ ಹಿಡಿದುಕೊಂಡು ನಮ್ಮ ಮನೆಗೆ ಬಂದಳು. ಅದು-ಇದು ಮಾತಾಡಿದ ಮೇಲೆ ತನಗೆ ಆರೋಗ್ಯ ಸರಿಯಿಲ್ಲವೆಂದು ಆಸ್ಪತ್ರೆಗೆ ಹೋಗಿರುವುದಾಗಿ ಹೇಳಿದಳು. ನಾನು ಎಂದು ರೂಢಿಯಂತೆ ಏನಾಗಿದೆ , ಎತ್ತ ಕೇಳಿದೆನು. ಇತ್ತೀಚೆಗೆ ಆರೋಗ್ಯ ಸರಿ ಇರುವುದೇ ಇಲ್ಲ. ಟೊಂಕ, ಕೈಕಾಲು ನೋಯುವುದು, ತಲೆ ತಿರುಗುವುದು ಹೆಚ್ಚಾಗುತ್ತಿದ್ದುದು ಹೇಳಿದಳು. ಅವಳನ್ನು ನೋಡಿದರೇ ಹೇಳಬಹುದು, ಮೈಯಲ್ಲಿ ರಕ್ತದ ಕೊರತೆ, ಪೌಷ್ಟಿಕ ಆಹಾರವಿಲ್ಲದ್ದಕ್ಕೆ ನಿಶ್ಯಕ್ತಿ ಎಂದು. 'ಸರಕಾರಿ ದವಾಖಾನೆಗೆ ಹೋಗಬೇಕಮ್ಮಾ, ಖಾಸಗಿ ದವಾಖಾನೆಗಳೆಲ್ಲ ದುಬಾರಿ ಅಲ್ಲೇನು? ಅಂದೆ' ಇಲ್ರಿ ಸರಕಾರಿ ದವಾಖಾನಿಯೊಳಗೆ ಡಾಕ್ಟರ್ ಫೀಸ್ ಒಂದೇ ಇರಾದಿಲ್ಲ. ಒಳಗೆ ಹೋಗಲಿಕ್ಕೆ 5 ರೂ. ಕೊಡಬೇಕು. ಇನ್ನು ಔಷದಿ ಗುಳಿಗೆ ಎಲ್ಲ ಹೊರಗಿಂದೇ ಬರ್ದುಕೊಡತಾರ್‌ರಿ, ನಮ್ಮನಿಲಿಂದ ಸರ್ಕಾರಿ ದವಾಖಾನಿಗಿ ಆಟೋದಾಗ ಹೋಗಬೇಕಾಗ್ತದ. ನಮಗೇನ ಲಾಭ ಇಲ್ಲರಿ, ಸರ್ಕಾರಿ ದವಾಖಾನಿಲಿಂದ"

• • •

ಒಂದು ದಿನ ಉಪನ್ಯಾಸಕಿ ಗೆಳತಿ ಫೋನ್ ಮಾಡಿದಳು. ಆಸ್ಪತ್ರೆಗೆ ಹೋಗಬೇಕೆಂದು

ನಾನಾ ಪರೀಕ್ಷೆಯ ತರುವಾಯ ಮೂತ್ರಪಿಂಡದಲ್ಲಿ ಕಲ್ಲು ಇರುವುದು ತಿಳಿದುಬಂತು. ಅಸಿಡಿಟಿ, ತಲೆಸುತ್ತುವುದು, ಕಿಬ್ಬೊಟ್ಟೆ ನೋವು,ಬಿಳಿ ಮುಟ್ಟು, ಏನೆಲ್ಲ ವ್ಯಾಧಿಗಳು, ಇಷ್ಟು ಸಣ್ಣವಯಸ್ಸಿನಲ್ಲಿಯೇ ಸೇರಿದ್ದು ಹೇಗೆ? ಕಾರಣ ಇಷ್ಟೇ: ಅವಳು ದಿನಾಲು ಬಸ್ ಹತ್ತಿ 40 ಕಿ.ಮೀ ಆಚೆಯ ಊರಿನ ಕಾಲೇಜಿಗೆ ಹೋಗಿ ಮದ್ಯಾಹ್ನದವರೆಗೂ ಮಕ್ಕಳಿಗೆ ಪಾಠ ಮಾಡಿ ಬರಬೇಕು. ಕಾಲೇಜಿನಲ್ಲಿ ಒಂದು ಶೌಚಾಲಯವಿಲ್ಲ. ಗಂಡಸರು ಬಹಿರಂಗವಾಗಿ ಎಲ್ಲೆಲ್ಲೋ ಬಹಿರ್ದೆಶೆ ತೀರಿಸಿಕೊಳ್ಳುವುದು. ಇವಳೆಲ್ಲಿ ಹೋಗಬೇಕು? ಶೌಚಕ್ಕೆ ಹೋಗಬೇಕಾಗುವುದೆಂದು ನೀರು ಕುಡಿಲಾರದ್ದಕ್ಕೆ ಏನೆಲ್ಲ ರೋಗಗಳಿಗೆ ಆಹ್ವಾನ!?

ಸರಿಯಾಗಿ ಒಂದು ವಾರದ ತರುವಾಯ ಹಳ್ಳಿಯಿಂದ ಮಹಿಳೆಯೊಬ್ಬಳು ಆಸ್ಪತ್ರೆಗೆ ಬಂದಳು. ನನ್ನ ಪರಿಚಿತ ಮಹಿಳಾ ಡಾಕ್ಟರ್ ಹತ್ತಿರ ಕಳಿಸಿದೆ. ಹೀಗೆ ಸುಮ್ಮನೆ ಮಾತಾಡುವಾಗ ಡಾಕ್ಟರ್‌ಗೆ ವಿಚಾರಿಸ್ದೆ. ಆ ಹಳ್ಳಿಯ ಮಹಿಳೆಗೆ ಏನಾಗಿತ್ತು? ಎಂದು. ಅದೆಲ್ಲ ಕಾಮನ್ ಬಿಡ್ರಿ. ಯೂರಿನ್ ಇನ್ಸ್‌ಫ್ಯಾಕ್ಷನ್ ಸ್ವಲ್ಪ ಜಾಸ್ತಿಯಾಗಿತ್ತು. ಟ್ರೀಟ್‌ಮೆಂಟ್ ಕೊಟ್ಟಿದ್ದೀನಿ ಅಂದರು. ನನಗೆ ಗೊತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳಿಲ್ಲದ ಕಾರಣ ಕಂಟಿ-ಪೊದೆಗಳತ್ತ ಜಾಗ ಅರಸಿ ಹೋಗಬೇಕು. ಸ್ವಚ್ಛ ಜಾಗ ಎಲ್ಲಿ ಸಿಗಬೇಕು? ಸೂರ್ಯನ ಕಿರಣ ಭೂಮಿಗೆ ಸೋಕುವ ಮೊದಲೇ ಬಹಿರ್ದೆಶೆಗೆ ಹೋಗಿ ಬರಬೇಕಾದ ಕಾರಣ ಕುಳಿತ ಜಾಗ ಎಂತಹದ್ದು ಎಂದು ಗಮನಿಸುವವರಾರು? ಹೀಗಾಗಿ ಬಹುತೇಕ ಹಳ್ಳಿಯ ಹೆಣ್ಣುಮಕ್ಕಳು ಮೂತ್ರದೋಷಕ್ಕೆ ಬಿಳಿಮುಟ್ಟು ಮತ್ತಿತರ ಕಾಯಿಲೆಗೆ ಒಳಗಾಗುತ್ತಾರೆ.

• • •

ಒಮ್ಮೆ ಮನೆಗೆ ಬಂದ ರಂಗಮ್ಮ "ಯವ್ವಾ ನಿಮ್ಮಿಂದ ಸಹಾಯ ಆಗಬೇಕ್ರಿ. ಮಗಳೀಗ ಪರಿಕ್ಷಾಕ್ಕ ಕೂಡಿಸಿಕೊಳ್ಳಲ್ಲ ಅಂತಾರ. ಫೀಸ್ ಕೊಡತೀವಿ ಮತ್ತ ದಂಡನೂ ಕೊಡತೀವಿ ಅಂದ್ರೂ ಟೀಚರ್ರು ಕೇಳವಲ್ರು. ನೀವೂ ಒಂದು ಮಾತು ಹೇಳ್ರಿ" ಅಂದ್ಳು. ಮರುದಿನ ಪರೀಕ್ಷೆ ಒಂಭತ್ತನೇ ಓದುವ ಮಗಳು ಸ್ಲಮ್ ನಿವಾಸಿ ರಂಗಮ್ಮ ಪ್ರತಿವರ್ಷ ಐದಾರು ತಿಂಗಳು ಬೊಂಬಾಯಿಗೆ ಗಂಡ, ಮಕ್ಕಳು ಸಹಿತ ಹೋಗಿ ದುಡ್ಕೊಂಡು ಬರುವರು. ಮಕ್ಕಳಿಗೆ ಎಲ್ಲಿ ಅಂತ ಶಾಲೆಗೆ ಕಳಿಸುವುದು. ಎಲ್ಲೊ ಒಂದು ಕಡೆ ಅಡ್ಮಿಶನ್ ಮತ್ತು ಗೈರುಹಾಜರು. ಅದ್ಹೇಗೋ ರಂಗಮ್ಮ ತನ್ನ ಹೆಣ್ಣುಮಗಳಿಗೆ ಶಾಲೆಗೆ ಕಳಿಸುತ್ತಿರುವಳು. ಹೊಟ್ಟೆ ಪಾಡಿಗೆ ಊರೂರು ಅಲೆಯುವವರು ಹೆಣ್ಣು ಹುಡುಗಿಯರಿಗೆ ಶಾಲೆಗೆ ಕಳಿಸುವುದೇ ಇಲ್ಲ.


ಗಾಬರಿ ಹುಟ್ಟಿಸುವ ಸಂಗತಿಯೊಂದು ಬೆಳಕಿಗೆ ಬಂದಿದೆ. ಇತ್ತೀಚಿನ ದಿನಗಳಲ್ಲಿ ಮುಂಬೈ, ಪುಣೆಗಳಂತಹ ಮಹಾನಗರಗಳಲ್ಲಿ ಶೇ.35 ರಷ್ಟು ಬಾಲವೇಶ್ಯಾವೃತ್ತಿ ಹೆಚ್ಚಾಗಿದೆ. ಅದರಲ್ಲಿ ಬಹುಪಾಲು ಮಕ್ಕಳು ಹೈದ್ರಾಬಾದ್ ಕರ್ನಾಟಕ ಪ್ರದೇಶದಿಂದ ಬಂದವರೇ.

> ಮನುಷ್ಯರೊಂದಿಗೆ ಮಾತಾಡು ಗೆಳತಿ
> ಮನುಷ್ಯರಂತೆ ಮಾತಾಡು
> ಗೆಳತಿ ಕಾಯುತ್ತೇನೆ ಇಲ್ಲೇ ಕಾಳಿಯ
> ಎಲೆ ಉದುರಿದ ಗಿಡದ ಕೆಳಗೆ
> ಉರಿ ಬಿಸಿಲಿನ ಝಳದ ಬೆಳಗೆ.

• • •

ಒಂದು ಕಡೆ ಅಮೇರಿಕದ ಜಾರ್ಜ್ ಬುಷ್ ಜಗತ್ತನ್ನು ತನ್ನ ಬೂಟಿನಡಿ ತೆಗೆದುಕೊಳ್ಳಲು ಬಂದೂಕು ಹಿಡಿದು ನಿಂತಿದ್ದಾನೆ. ಇನ್ನೊಂದೆಡೆ ಭಾರತದಂತಹ ದೇಶದಲ್ಲಿ ಅಮೇರಿಕದ ಬಾಲ ಹಿಡಿಯುವ ವಾಜಪೇಯಿ ಮತ್ತು ಮೋದಿ ಸರ್ಕಾರಗಳು ಕೋಮು ದಂಗೆ ಹಬ್ಬಿಸಿ ಜನಾಂಗೀಯ ಹತ್ಯೆ ನಡೆಸುತ್ತಿದೆ. ಮಗದೊಂದು ಕಡೆ ಈ ದೇಶದಲ್ಲಿ ಹಿಡಿ ಅನ್ನಕ್ಕಾಗಿ, ಔಷಧಿಗಾಗಿ, ಅಕ್ಷರಕ್ಕಾಗಿ, ಕನಿಷ್ಠ ಬದುಕಲಿಕ್ಕೆ ಬೇಕಾದ ಸೌಲಭ್ಯಗಳಿಗಾಗಿ ಜನ ಹಾಹಾಕರಿಸುವ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಇದರ ನಡುವೆ ಜಗತ್ತಿನ ದೇಶದ ರಾಜಕೀಯ ಹುನ್ನಾರಗಳ ಕಿಂಚಿತ್ತೂ ಅರಿವಿಲ್ಲದ ಸಾಮಾನ್ಯ ಜನತೆಯ ಮುಗ್ಧತೆ ಮತ್ತು ಮೌಢ್ಯತೆ ಬೆಚ್ಚಿಬೀಳಿಸುತ್ತದೆ. ಅನೇಕ ಸಭೆಗಳಲ್ಲಿ ನಮ್ಮ ಮಹಿಳೆಯರು ಕೇಳುವುದು 'ಹೆಂಗಾದ್ರು ಮಾಡಿ ಸಾರಾಯಿ ಅಂಗಡಿ ಮುಚ್ಚಿಸಬೇಕ್ರಿ" ಪಾಪ ಆ ಮುಗುದೆಯರಿಗೆ ಗೊತ್ತೇ ಇರುವುದಿಲ್ಲ. ಬೂರ್ಜ್ವಾ ರಾಜಕಾರಣಿಗಳ ಕುರ್ಚಿ ನಿಂತಿರುವುದು ಸಾರಾಯಿ ಮೇಲೆ. ಸ್ವಾತಂತ್ರ್ಯದ 55 ವರ್ಷಗಳ ತರುವಾಯವೂ ಗಾಬರಿ ಹುಟ್ಟಿಸುವ ಅನಕ್ಷರತೆ, ಕಂಗೆಡಿಸುವ ಹೆಣ್ಣು ಶಿಶು ಭ್ರೂಣ ಹತ್ಯೆ - ಅತ್ಯಾಚಾರ ಮತ್ತು ಬಲಾತ್ಕಾರ, ಹೆಚ್ಚುತ್ತಿರುವ ವರದಕ್ಷಿಣೆ ಸಾವುಗಳು, ಬೆಳೆಯುತ್ತಿರುವ ಅಸಹನೆ-ನಿರಾಶೆ ಮತ್ತು ಆತ್ಮಹತ್ಯೆಗಳು ಪ್ರಜ್ಞಾವಂತರ ಮನಸ್ಸುಗಳನ್ನು ತಲ್ಲಣಗೊಳಿಸುತ್ತವೆ. ಈ ದೇಶದಲ್ಲಿ ಆಕಳನ್ನು ರಾಷ್ಟ್ರ ಪ್ರಾಣಿ ಮಾಡುವವೆನ್ನುವವರು ಮತ್ತು ಪೂಜಿಸುವವರಿದ್ದಾರೆ. ಆದರೆ ಹೆಣ್ಣು ಮಗು ವನ್ನು ಗರ್ಭದಲ್ಲೇ ಕತ್ತು ಹಿಸುಕಲಾಗುತ್ತಿದೆ.

ಆದ್ದರಿಂದಲೇ ಇಂದು ಮಹಿಳೆಯು ಜಾಗತೀಕ ವಿದ್ಯಮಾನಗಳನ್ನು ಅರಿಯುತ್ತಲೇ



ಕೊಡ ನೀರಿಗಾಗಿ ಮತ್ತು ರೇಷನ್ ಕಾರ್ಡ್‌ಗಾಗಿ, ಶೌಚಾಲಯಕ್ಕಾಗಿ ಚಳುವಳಿ ನಡೆಸಬೇಕಾಗುತ್ತದೆ. ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಲೇ ಸಮಾನ ಕೂಲಿಗಾಗಿ, ಸಮಾನ ಹಕ್ಕಿಗಾಗಿ ನ್ಯಾಯದ ದನಿ ಎತ್ತಬೇಕಾಗುತ್ತದೆ. ದುಡಿಯುವ ಜನತೆಯ ಐಕ್ಯತೆಯನ್ನು ಅಣಿಗೊಳಿಸುತ್ತಲೇ ಎಲ್ಲ ಮಹಿಳೆಯರ ಹಕ್ಕುಗಳಿಗೆ ದನಿಯಾಗಬೇಕಾಗುತ್ತದೆ. ಆಗ ಮಾತ್ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಅರ್ಥ ಬಂದೀತು.

(ಲೇಖಕರು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರು)

ಕರ್ನಾಟಕದ ಮಹಿಳೆ - ಅಂಕೆ ಸಂಖ್ಯೆಗಳಲ್ಲಿ

ಸೂಚಕ	ಮಹಿಳೆಯರ ಸಂಖ್ಯೆ	ಪುರುಷರ ಸಂಖ್ಯೆ	ವರ್ಷ
ಮಕ್ಕಳ ಸಾವಿನ ಪ್ರಮಾಣ (ಸಾವಿರಕ್ಕೆ)	62	71	1994
ಲಿಂಗ ಅನುಪಾತ (ಸಾವಿರ ಪುರುಷರಿಗೆ)	960	1000	1991
15 ರಿಂದ 34 ವಯಸ್ಸಿನ ಮರಣದ ದರ			
(ಒಟ್ಟು ಮರಣದ ಶೇಕಡಾ)	26.2	14.9	1995
ಸರಾಸರಿ ಮದುವೆ ವಯಸ್ಸು	20.14	26.21	1991
ಸಾಕ್ಷರತಾ ದರ (% ಗಳಲ್ಲಿ)			
ಒಟ್ಟು	38.54	61.46	1991
ಗ್ರಾಮೀಣ ಪ್ರದೇಶ	37.23	62.77	
ನಗರ ಪ್ರದೇಶ	41.85	68.15	
ಶೇಕಡಾ ಕೆಲಸದಲ್ಲಿ ಪಾಲುಗೊಳ್ಳುವಿಕೆ (%)			1991
ಒಟ್ಟು - ಪ್ರಮುಖ ಕ್ಷೇತ್ರಗಳಲ್ಲಿ	22.96	77.04	
ಒಟ್ಟು - ಎಲ್ಲಾ ಕ್ಷೇತ್ರಗಳಲ್ಲಿ	29.62	70.38	
ಗ್ರಾಮೀಣ - ಪ್ರಮುಖ ಕ್ಷೇತ್ರಗಳಲ್ಲಿ	27.64	72.36	
ಗ್ರಾಮೀಣ - ಎಲ್ಲಾ ಕ್ಷೇತ್ರಗಳಲ್ಲಿ	36.80	63.20	
ನಗರ - ಪ್ರಮುಖ ಕ್ಷೇತ್ರಗಳಲ್ಲಿ	12.27	87.73	
ನಗರ - ಎಲ್ಲಾ ಕ್ಷೇತ್ರಗಳಲ್ಲಿ	13.20	86.80	
ಮಹಿಳೆಯರ ವಿರುದ್ಧ ಹಿಂಸಾಚಾರ	*1996*		
ಅತ್ಯಾಚಾರ (ಪ್ರತಿ ಲಕ್ಷ ಮಹಿಳೆಗೆ)	6.251		
ವರದಕ್ಷಿಣೆ ಸಾವು	0.738		



ಹಸಿವು- ಮೇವು


ಬಡವನ ಹೆಂಡತಿ
ಒಡೆದ ಮಡಕೆಯ ಬಾಳು
ಸೋರಿ ಹೋಗುವ ಸುಖ
ಹೆಂಗೆ ತಡೆದಾಳೊ ತಾಯಿ
ಹೆಂಗೆ ಪಡೆದಾಳೊ?
ಒಡೆಯನ ಒಡಲಿಗೆ
ಜೀತಗಾರನು ಗಂಡ
ಸಂಜೀಕೆ ಬಂದಾನು
ಹೊತ್ತು ತಂದಾನು
ಗೊಟಕ್ಕೆನ್ನುವ ಮಕ್ಕಳಿಗೆ
ಗುಟುಕು ಕೊಟ್ಟಾನು
ಬಯಕೆ ಬಾಗಿಲ ಬಳಿ ತವಕದ ತವರು
ಸೀರೆ ತುಂಬ ಕಣ್ಣು ಹರಿದ ಆಸೆ
ನಿಟ್ಟುಸಿರು ತುಂಬಿ ನಿಟ್ಟುಬಿದ್ದ ಸೂರು
ನೆಲಕಚ್ಚಿ ಮಕ್ಕಳು ಜೀವ ಹಿಡಿದಾವೊ
ಹೊಟ್ಟೆ ಹೊಕ್ಕು ನಿಂತ ಹಸಿವಿನ ಅಬ್ಬರ
'ಬಲಿ ಕೊಡುವಿರೊ ಇಲ್ಲ ತಲೆ
ಕೊಡುವಿರೊ?'
ಹೊತ್ತೇಸು ಆದರೂ ಗಂಡ ಬರಲಿಲ್ಲ
ಬಾಯ್ತೆರೆದ ಹಸಿವಿಗೆ ಬಲಿಯ ತರಲಿಲ್ಲ.
ಬಡವನ ಹೆಂಡತಿ, ಕತ್ತಲ ಭೀತಿ
ನಿದ್ದೆ ಬೀದಿಗೆ ಬೆಳಕ ಚೆಲ್ಲವ್ವೆ
ಗಂಡನ ಬರವಿಗೆ ಕಾದು ನಿಂತವ್ವೆ
ಬಡಗಂಡ ಬಂದಾಗ
ಒಳಗೆ ಕಾಲಿಟ್ಟಾಗ
ಬರದ ಭೂಮಿಗೆ ನೆರೆ ಬಂತು
ಉದ್ದ ನಾಲಗೆ ಚಾಚಿ
ಹದ್ದು ಮೀರಿತು ಹಸಿವು
ಬುಡ್ಡಿ ಬೆಳಕಾಗೆ ನರಳಿ ನೋಡ್ಯಾಳೊ
ಹೊತ್ತು ತಂದಿದ್ದ ಮೈ ತುಂಬ ಮನ ತುಂಬ
ಹೆಂಡತಿ ಮಕ್ಕಳಿಗೆ ಹಂಚಿದರೂ ಉಳಿದೀತು
ದಿನಾ ಕುಂತುಂಡರೂ ಒರತೆ ಉಕ್ಕೀತು
ಒಡೆಯನ ಕೊಡುಗೆ ಬಾಸುಂಡೆ ಮೇವು
ಸಾಯಲಾರದ ಹಿಂಸೆ, ಬೆಳೆವ ನೋವು.

- ಬರಗೂರು ರಾಮಚಂದ್ರಪ್ಪ
(ಸಂಕಲನದಿಂದ)

ಸ್ವಾತಂತ್ರ್ಯ ಸಂಗ್ರಾಮದ ಓರ್ವ ಸ್ವಾಭಿಮಾನಿ ಮಹಿಳೆ

ಅತ್ತರ್ ಕೌರ್

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪುರುಷರಷ್ಟೇ ಮಹಿಳೆಯರೂ ಮಹೋನ್ನತ ಪಾತ್ರ ವಹಿಸಿದ್ದಾರೆ. ಅಂತಹ ಕೆಲವೇ ಮಹಿಳಾ ಹೋರಾಟಗಾರರ ಹೆಸರುಗಳು ಪ್ರಚಲಿತವಾಗಿವೆ. ಆದರೆ ಅಷ್ಟಾಗಿ ಬೆಳಕಿಗೆ ಬಾರದ ತ್ಯಾಗ, ಸ್ವಾಭಿಮಾನಗಳಿಂದ ಹೋರಾಡಿ ಬದುಕಿದ್ದ ಅನೇಕರು ಇದ್ದಾರೆ. ಅಂತಹವರಲ್ಲಿ ಮರೆಯಲಾಗದ ಪಂಜಾಬಿನ ಹೆಮ್ಮೆಯ ಸ್ವಾಭಿಮಾನಿ ಮಹಿಳೆ ಅತ್ತರ್ ಕೌರ್



ನೇಮಿಚಂದ್ರ

ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ಪುಟಗಳಲ್ಲಿ, ಎಲ್ಲೋ ಒಂದು ಕಡೆ ಕಂಡ ಹೆಸರು 'ಅತ್ತರ್ ಕೌರ್' ಜಲಿಯನ್‌ವಾಲಾ ಬಾಗ್ ದುರಂತದಲ್ಲಿ ಹುತಾತ್ಮರಾದ ಪತಿಯ ಹೆಣಕ್ಕೆ ಹೆಗಲು ಕೊಟ್ಟು ತಂದ ಗರ್ಭಿಣಿ ಅತ್ತರ್ ಕೌರ್, ಬ್ರಿಟಿಷ್ ಸರಕಾರ ಪರಿಹಾರವಾಗಿ ನೀಡಲು ಬಂದ, ಆ ಕಾಲಕ್ಕೆ ದೊಡ್ಡ ಮೊತ್ತವಾದ 25,000 ರೂಗಳನ್ನು ನಿರಾಕರಿಸಿದ ಸ್ವಾಭಿಮಾನಿ ಮಹಿಳೆ. 'ನನ್ನ ಪತಿಯನ್ನು ಕಿತ್ತುಕೊಂಡರೇನು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿಯಲು ನನ್ನಲ್ಲಿನ್ನೂ ಇಬ್ಬರು ಗಂಡು ಮಕ್ಕಳಿದ್ದಾರೆ' ಎಂದು ಸಾರಿದ ಮಹಿಳೆ. ಆಕೆಯ ಗರ್ಭದಲ್ಲಿದ್ದ ಕೂಸು, ಇಂದು 78 ವರ್ಷಗಳ ವಯೋವೃದ್ಧ ಸ್ವಾತಂತ್ರ್ಯ ಹೋರಾಟಗಾರ ಸೋಹನ ಲಾಲ್ ಭಾರತಿ. ಇವರು ಅಮೃತಸರದಲ್ಲಿಯೇ ವಾಸಿಸುತ್ತಿದ್ದಾರೆ ಎಂದು ತಿಳಿದಾಗ, ಈ ಮಹಾಮಾತೆಯ ಬಗ್ಗೆ ತಿಳಿವ ಆಸ್ಥೆ, ನನ್ನನ್ನು ಅಮೃತಸರಕ್ಕೆ ಕೊಂಡೊಯ್ದಿತು.

ವಿಳಾಸವಿಲ್ಲದೆ, ಹೆಸರು ಮಾತ್ರ ಗೊತ್ತಿದ್ದು, 'ಸೋಹನ್‌ಲಾಲ್ ಭಾರತಿ, ಜಲಿಯನ್‌ಬಾಲ್‌ಬಾಗ್ ಹುತಾತ್ಮರ ಪತ್ನಿ ಅತ್ತರ್ ಕೌರ್ ಅವರ ಪುತ್ರ, ಕೇರಾಫ್ ಜಲಿಯನ್‌ವಾಲಾ ಬಾಗ್' ಎಂದು ಹಿಂದಿಯಲ್ಲಿ ಬರೆದ ನನ್ನ ಪತ್ರ ಎಂಟು ದಿನಗಳ ನಂತರ ಅವರಿಗೆ ತಲುಪಿದ್ದೊಂದು ಆಶ್ಚರ್ಯ. ಜಲಿಯನ್‌ವಾಲಾ ಬಾಗ್‌ನ ಕಛೇರಿಯಲ್ಲಿ ತಮ್ಮ ವಿಳಾಸ ಕೊಟ್ಟು, ಆ ದಿನ ನನಗಾಗಿ ಕಾಯುತ್ತಿದ್ದರು ಸೋಹನಲಾಲ್ ಭಾರತಿ.

ಸಣ್ಣ ಗಲ್ಲಿಯೊಂದರ ಹಳೆಯ ಚಿಕ್ಕ ಮನೆಯಲ್ಲಿ ತಮ್ಮ ತಾಯಿಯ ನೆನಪುಗಳನ್ನು ಭಾರೀ ಗಾತ್ರದ ಫೈಲುಗಳ ತುಂಬಾ ಕಾದಿರಿಸಿರುವ ಸೋಹನಲಾಲ್, ಈ ವೀರಮಾತೆಯ ಬದುಕಿನ ಪುಟಗಳನ್ನು ನನ್ನೆದುರು ಹರವಿಟ್ಟರು.

1896 ರಲ್ಲಿ ಹುಟ್ಟಿದ ಅತ್ತರ್ ಕೌರ್, 1910 ರಲ್ಲಿ ಭಾಗಮಲ್ ಭಾಟಿಯಾ ಅವರನ್ನು ವಿವಾಹವಾಗಿದ್ದರು. ಭಾಟಿಯಾ, 'ಲಕಡಿಮಂಡೀ ಬಸಾರ್'ನಲ್ಲಿ ಅಂಗಡಿ ಇದ್ದ ಸ್ಥಿತಿವಂತ ವ್ಯಾಪಾರಿ. 1917 ರಲ್ಲಿ ಅಮೃತಸರದಲ್ಲಿ ಕಾಂಗ್ರೆಸ್ ಶಾಖೆ ತೆರೆದಾಗ, ಭಾಗಮಲ್ ಭಾಟಿಯಾ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು. ದಿನವೂ ಅತ್ತರ್ ಕೌರ್ ಐದಾರು ಜನ ಸ್ವಾತಂತ್ರ್ಯ ಹೋರಾಟಗಾರರಿಗೆ ಅಡುಗೆ ತಯಾರಿಸಿ ಅಂಗಡಿಗೆ ಕಳುಹಿಸುತ್ತಿದ್ದರು. ಅತ್ತರ್ ಕೌರ್ ಹೆಚ್ಚು ಓದಿದವರಲ್ಲ. ರಾಮಾಯಣ ಮಹಾಭಾರತ ಓದುವಷ್ಟು ಮಾತ್ರ ಅವರ ಶಿಕ್ಷಣ. ಧಾರ್ಮಿಕ ಕೆಲಸಗಳಲ್ಲಿ ತೊಡಗಿದ ಅತ್ತರ್ ಕೌರ್‌ಗೆ ಪತಿಯಿಂದ ದೇಶದ ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿಗಳು ತಿಳಿಯತೊಡಗಿದವು.


13, ಏಪ್ರಿಲ್ 1919, ಅಂದು ವೈಶಾಖ, ಹಿಂದು ಹೊಸ ವರ್ಷದ ಸಂಭ್ರಮದ ದಿನ. ಪಂಜಾಬಿ ಜನಗಳಿಗೆ ವಿಶೇಷ ಮಹತ್ವದ ಹಬ್ಬ. ಅಂದು ಬೆಳಗ್ಗೆ ಅತ್ತರ್ ಕೌರ್ ಪತಿಯೊಡನೆ ಸ್ವರ್ಣಮಂದಿರಕ್ಕೆ ಹೋಗಿ ಹರಮಂದಿರ್‌ನಲ್ಲಿ 'ಹಣೆಯುಜ್ಜಿ' ಪ್ರಾರ್ಥಿಸಿದ್ದರು. ಪತಿಯ ದೀರ್ಘಾಯುಷ್ಯವನ್ನು ಬೇಡಿದರು. ಮಧ್ಯಾಹ್ನ ಎರಡು ಗಂಟೆಗೆ ಮಕ್ಕಳಿಗೆ ಮಿಠಾಯಿ

ತಂದುಕೊಟ್ಟ ಪತಿ, ಜಲಿಯನ್‌ವಾಲಾ ಭಾಗ್‌ನಲ್ಲಿ ಸಭೆಗೆ ಹೋಗುತ್ತಿದ್ದೇನೆಂದು ಹೇಳಿ ಹೋಗಿದ್ದರು.

ಆ ದಿನ ಸಂಜೆ ಐದು ಗಂಟೆ ದಾಟಿತ್ತು, ರಕ್ತದಲ್ಲಿ ತೊಯ್ದ ಬಾಬು ಸುಂದರದಾಸ್ ಮತ್ತು ಬೂಟಾರಾಮ್ ಓಡೋಡಿ ಬಂದು 'ಜಲಿಯನ್‌ವಾಲಾ ಬಾಗ್... ಗುಂಡು ಹಾರಿಸಿದರು.... ಭಾಯಿ ಸಾಹಬ್ ಅಲ್ಲಿ....' ಎನ್ನುತ್ತಿದ್ದಂತೆ ಅತ್ತರ್ ಕೌರ್ ಎದೆ ಕುಸಿಯಿತು. ಗಾಬರಿಗೊಂಡ ಅತ್ತೆ ಮತ್ತು ಸಣ್ಣ ಇಬ್ಬರು ಮಕ್ಕಳನ್ನು ಮನೆಯಲ್ಲಿ ಬಿಟ್ಟು ಒಂದೇ ಉಸುರಿಗೆ ಎರಡು ತಿಂಗಳ ಗರ್ಭಿಣಿ ಅತ್ತರ್ ಕೌರ್ ದಾಪುಗಾಲಿನಲ್ಲಿ ಜಲಿಯನ್‌ವಾಲಾ ಬಾಗ್‌ನೆಡೆಗೆ ಓಡತೊಡಗಿದರು. ಗಲ್ಲಿಗಳುದ್ದಕ್ಕೂ ಭಯಭೀತ ಜನಬಾಗ್‌ನಿಂದ ಹೊರಕ್ಕೆ ಓಡುತ್ತಿದ್ದರು. ರಕ್ತದಲ್ಲಿ ತೊಯ್ದ ಜನ. ಪಶ್ಚಿಮದ ದ್ವಾರದಿಂದ ಒಳ ಬಂದವಳೇ ನೋಡುತ್ತಾಳೆ. ದ್ವಾರದ ಉದ್ದಕ್ಕೂ ಸತ್ತ ಜನರ ಶವಗಳು. ಬಾಗ್‌ನ ತುಂಬಾ ರಾಶಿ ರಾಶಿ ಹೆಣಗಳು. ಸಾವಿರಾರು ಜನರ ಓಟದ ಕಾಲಕೆಳಗೆ ತುಳಿದು ಮುಗಿಲಿಗೆದ್ದು ಮುಸುಕಿದ ಕೆಂಪು ಧೂಳು. 'ಅಯ್ಯೋ ಸತ್ತೆ, ಕಾಪಾಡಿ ನೀರು' ಗಾಯಗೊಂಡವರ ಕೂಗು ಎದೆ ಸೀಳಿತ್ತು. ಒಂದೆಡೆ, ಒಂದೇ ಥಾನಿನ ಬಟ್ಟೆ ತೊಟ್ಟ ಐದು ಮಕ್ಕಳು ಹತರಾಗಿ ಬಿದ್ದಿದ್ದರು. ಹೆಣಗಳ ಬಣಬೆಯು ನಡುವಿನಿಂದ ಗಾಯಗೊಂಡು ನರಳಿದ ಒಂದು ಕ್ಷೀಣ ಸ್ವರ, 'ಬೆಹೆನ್, ನನ್ನ ಮಗು ಬದುಕಿದೆಯಾ ಸ್ವಲ್ಪ ನೋಡು' . ಅತ್ತರ್ ಕೌರ್ ಮಗುವನ್ನು ಮುಟ್ಟಿ ನೋಡಿದರು, ಉಸಿರು ಕಡಿದು ತಣ್ಣಗಾಗಿದ್ದ ಮಗುವನ್ನು 'ಬದುಕಿದೆ' ಎಂದರು. ಆ ಮನುಷ್ಯ 'ಹೇ ರಾಮ್' ಎಂಬ ನಿಶ್ಚಿಂತೆಯಲ್ಲಿ ಉಸಿರು ಜಾರಿಸಿ, ತಲೆ ವಾಲಿ ಸತ್ತು ಬಿದ್ದ.

ಅತ್ತರ್ ಕೌರ್ ಸಾವಿರಾರು ಹೆಣಗಳ ನಡುವೆ, ರಕ್ತತಪ್ತ ನೆಲದಲ್ಲಿ ತಮ್ಮ ಪತಿಯ ದೇಹವನ್ನು ಹುಡುಕತೊಡಗಿದರು. ಸತ್ತವರ, ಸಾಯುತ್ತಿರುವವರ ಆಕ್ರಂದನದ ಮಧ್ಯೆ ಆ ಕ್ಷಣದಲ್ಲಿ ಅವರಿಗೆ ಕೇಳುತ್ತಿದ್ದುದು ನಗಾರಿಯಂತೆ ಬಾರಿಸುತ್ತಿದ್ದ ತಮ್ಮ ಎದೆಯ ಬಡಿತವೊಂದೆ. ಹೆಣಗಳನ್ನು ಎತ್ತಿ ಅಲುಗಿಸಿ ತಮ್ಮ ಪತಿಯ ಮುಖವನ್ನು ಹುಡುಕುವ ಈ ಮಹಿಳೆಯ ಸೀರೆಯೆಲ್ಲ ರಕ್ತಮಯ. ನೆಲದ ಮಟ್ಟಕ್ಕಿದ್ದ ಅಗಲ ಭಾವಿಯಲ್ಲಿ ಇಣುಕುತ್ತಾರೆ, ಆಳದ ನೀರೆಲ್ಲ ರಕ್ತ ಕೆಂಪು. ಕತ್ತಲಾಗುತ್ತಿದೆ. ನಾಲ್ಕು ಕಡೆಯಲ್ಲೂ ವಿಕೃತ ಶರೀರಗಳ ಭಯಾನಕ ದೃಶ್ಯ. ಯಾರದೋ ಮುಖವೇ ಎಗರಿ ಹೋಗಿದೆ, ಯಾರದೋ ಕಣ್ಣು, ಯಾರದೋ ಎದೆ, ಕೈ, ಕಾಲು ಛಿದ್ರವಾಗಿದೆ. ಸತ್ತವರನ್ನ ಸಾಯುತ್ತಿರುವವರನ್ನು ಬಿಟ್ಟು ಪ್ರಾಣಭೀತಿಯಲ್ಲಿ ಜನ ಓಡಿದ್ದಾರೆ. ಕಾರಣ ರಾತ್ರಿಯ ಕರ್ಫ್ಯೂ. ಎಂಟರ ನಂತರ ಮನೆಯಿಂದ ಹೊರಗೆ ಕಂಡವರಿಗೆ ಗುಂಡಿಟ್ಟು ಕೊಲ್ಲುವ ಆಜ್ಞೆ. ಆ ಸಂಜೆಯ ಡೈಯರ್‌ನ ಗುಂಡಿನ ಮಳೆ, ಸಾವಿನ ತೆರೆ ಎಳೆದು ಇಡೀ ಅಮೃತಸರ ಭೀತಿಯಿಂದ ಬೆದರಿ ಸೊಲ್ಲಡಗಿ ಕುಳಿತಿದೆ. ಇಂಥಾ ಕ್ಷಣದಲ್ಲಿ ಹೆಣಗಳ ರಾಶಿಯಲ್ಲಿ ಶವಗಳನ್ನು ಅಲುಗಾಡಿಸಿ ತಮ್ಮ ಪತಿಯ ಮುಖಕ್ಕಾಗಿ ಪರದಾಡುತ್ತಿದ್ದಾರೆ ಅತ್ತರ್ ಕೌರ್. ಬದುಕಿರಬಹುದೇ, ಅರೇ ಕುಟುಕು ಜೀವವಾದರೂ ಉಳಿದಿರಬಹುದೇ, ಎದೆಯಲ್ಲಿ ಅದಮ್ಯ ಆಸೆ.

ಹುಚ್ಚಿಳಂತೆ ಅತ್ತಿಂದಿತ್ತ ಇತ್ತಿಂದತ್ತ ತಡಕಾಡುತ್ತಿದ್ದಂತೆ ಕತ್ತಲಾಗಿತ್ತು. ಆಗಲೇ ಆ ಖರ್ಜೂರದ ಮರದ ಬಳಿಯ ಮೋಟು ಹಳೆಯ ಗೋಡೆ ಕಾಣಿಸಿತು. ಹತ್ತಿರ ಬಂದವರೇ ಗುರುತಿಸಿದರು, ಸಾವನ್ನಪ್ಪಿದ ಪತಿಯನ್ನು, ತೆರೆದ ಬರಿಗಣ್ಣು, ಎಗರಿ ಹೋದ ಕಿವಿ, ಜೀವ ಹಾರಿ ಹೋದರೂ, ಇನ್ನೂ ಬಿಸಿ ಇದ್ದ ದೇಹ. ಮಡಿಲಿಗೆ ಎಳೆದುಕೊಳ್ಳುತ್ತಿದ್ದಂತೆ, ಸೀರೆ, ಸೆರಗು, ತೋಳುಗಳೆಲ್ಲ ರಕ್ತದಿಂದ ತೋಯ್ದವು. ಗಂಡನ ದೇಹದ ಮೇಲೆ ಅದೆಷ್ಟು ಗುಂಡಿನ ಗುರುತುಗಳು! ನೇರ ಎದೆ ಸೀಳಿದ ಗುಂಡೊಂದು ಚಿಟ್ಟನೆ ಚೀರಿದರು. ಕೊಂಚ ದೂರದಲ್ಲಿ ಗಾಯಾಳುಗಳಿಗೆ ನೀರು ಕುಡಿಸುತ್ತಿದ್ದ ಓರ್ವ ಎತ್ತರದ ಸರದಾರ್‌ಜಿ



ಮನುವಿಗೆ ಗಲ್ಲು

ನಡುಬೀದಿಯಲಿ ಸೇರಿದ
ಸೀತೆ, ದ್ರೌಪತಿ,
ಗೋಪಿಕೆಯರಾದಿಯಾಗಿ
ದುಷ್ಯಂತನ ಶಾಕುಂತಲೆ
ಹರಿಶ್ಚಂದ್ರನ ಚಂದ್ರಮತಿ
ಕಲ್ಲಾದ ಅಹಲ್ಯೆಯರು
ಕೈಯಲ್ಲಿ ಕೊಳ್ಳಿ ಹಿಡಿದು
ನಡುಬೀದಿಯ ನೇಣುಗಂಬದಲಿ
ಮನುವಿಗೆ ನಿಲ್ಲಿಸಿ ಕೇಳುತ್ತಿದ್ದಾರೆ
ಹೇಳು ನಿನ್ನ ಅಂತಿಮ ಆಚ್ಛೆ
ಏನೆಂದು?

ಯುವಕ ಚೀರಿದ್ದು ಕೇಳಿ ಓಡಿ ಬಂದ. ಪತಿಯ ರಕ್ತಸಿಕ್ತ ಶವವನ್ನು ತೊಡೆಯ ಮೇಲಿಟ್ಟು ರೋಧಿಸುತ್ತಿದ್ದ ಹೆಣ್ಣುಮಗಳ ಆಕ್ರಂದನ ಈ ಕುದಿವ ರಕ್ತದ ಇಪ್ಪತ್ತು ವಯಸ್ಸಿನ ಹುಡುಗನ ಎದೆ ಸೀಳಿತು. ಬಗ್ಗಿ ಕುಸಿದವನ ಕಣ್ಣಲ್ಲಿ ಕಿಡಿ. 'ಬೆಹನ್ ಇದರ ಸೇಡು ನಾ ಖಂಡಿತಾ ತೀರಿಸಿಕೊಳ್ಳುತ್ತೇನೆ' ಆತನ ಪ್ರತಿಜ್ಞೆ, ಆ ಕ್ಷಣ ತನ್ನೆದುರು ನಿಂತ ತರುಣ, ಮುಂದೆ ಇಪ್ಪತ್ತೊಂದು ವರ್ಷಗಳ ಕಾಲ ಈ ದೃಶ್ಯವನ್ನು, ಜಲಿಯನ್‌ವಾಲಾಬಾಗ್ ಹತ್ಯಾಕಾಂಡವನ್ನು ತನ್ನೆದೆಯಲ್ಲಿ ಹೊತ್ತು, ಕಡೆಗೊಂದು ದಿನ ಲಂಡನ್ ತಲುಪಿ ಸರ್ ಮೈಕೇಲ್ ಓ' ಡೈಯರ್‌ನನ್ನು ಬಲಿ ತೆಗೆದುಕೊಳ್ಳುತ್ತಾನೆಂದು ಆ ತಾಯಿಗೂ ಅಂದು ತಿಳಿದಿರಲಿಲ್ಲ. ಅತ್ತರ್


ಕೌರ್ ಎಲ್ಲಿಂದಲೋ ಒಂದು 'ಚಾರಪಾಯಿ' ತಂದರು. ಇಬ್ಬರೂ ಸೇರಿ ಪತಿಯ ಶವವನ್ನು ಅದರ ಮೇಲೆ ಮಲಗಿಸಿ, ಮನೆಗೆ ಹೊತ್ತು ನಡೆದರು. ಒಂದು ಭುಜ ಆತನದು, ಉದ್ಧಾಮ್ ಸಿಂಗ್‌ದು. ಪತಿಯ ಹೆಣಕ್ಕೆ ಮತ್ತೊಂದು ಹೆಗಲು ಗರ್ಭಿಣಿ ಅತ್ತರ್ ಕೌರದು. ಆಕೆಯ ಗರ್ಭದಲ್ಲಿದ್ದ ಬಾಲಕನಿಗೆ ತಂದೆಯನ್ನು ನೋಡುವ ಭಾಗ್ಯವೇ ಇರಲಿಲ್ಲ.

ಪತಿಯ ಮರಣದೊಂದಿಗೆ ಸೌದೆ ವ್ಯಾಪಾರ ಮುಚ್ಚಿ ಹೋಯಿತು. ಸ್ಥಿತಿವಂತ ಕುಟುಂಬ ದಾರಿದ್ರ್ಯ್ಯದ ಅಂಚಿಗೆ ತಳ್ಳಿ ನಿಂತಿತು. 20 ನವೆಂಬರ್ 1919, ಸೋಹನ್ ಲಾಲ್ ಜನಿಸಿದರು. ಪುತ್ರವಿಯೋಗದಲ್ಲಿ ಸದಾ ಅಳುತ್ತಿದ್ದ ಅತ್ತೆ, ಶೀಘ್ರವಾಗಿ ಸ್ವರ್ಗಸ್ಥಳಾದಳು. ಮೂರು ಸಣ್ಣ ಮಕ್ಕಳ ಭಾರವನ್ನು ಹೆಗಲಲ್ಲಿ ಹೊತ್ತು, ಏಕಾಂಗಿಯಾಗಿ ಅತ್ತರ್ ಕೌರ್ ಬದುಕಿನ ಹೋರಾಟಕ್ಕೆ ಸನ್ನದ್ಧರಾದರು.

ಬಡತನದಲ್ಲಿ ಬೆಂದ ಈ ದಿನಗಳಲ್ಲೇ ಪ್ಲೇಗ್‌ನ ಮಹಾಮಾರಿ ಆವರಿಸಿತ್ತು. ಮನೆಗೆ ಬಂದ 'ಹೆಲ್ತ್ ಆಫೀಸರ್'ನಿಂದ ಔಷಧಿ ತೆಗೆದುಕೊಳ್ಳಲು ನಿರಾಕರಿಸಿ, ಎಕ್ಕದ ಎಲೆಯಲ್ಲಿ ತುಪ್ಪ ಮತ್ತು ಕರಿ ಮೆಣಸಿನ ಎಂಥದ್ದೋ ನಾಟಿ ಔಷಧಿ ತಯಾರಿಸಿ ಮಕ್ಕಳಿಗೆ ತಿನಿಸಿದರು, ತಾವೂ ಅದನ್ನೇ ತಿಂದರು. ಅತ್ತರ್ ಕೌರ್ ಬ್ರಿಟಿಷ್ ಸರಕಾರದ ರೂಪಾಯಿ ಇರಲಿ, ಔಷಧಿಯನ್ನೂ ಮುಟ್ಟಬಯಸಲಿಲ್ಲ. ಸರಕಾರದ ಪರಿಹಾರ ಧನವನ್ನು ಬಹುಶಃ ಪ್ರತಿಯೊಬ್ಬರೂ ಸ್ವೀಕರಿಸಿದ್ದರು. 'ನಮಗೆ ಬೇಕಾದದ್ದು ಪರಿಹಾರವಲ್ಲ, ಸ್ವಾತಂತ್ರ್ಯ, ನಮ್ಮ ಪತಿಯ ರಕ್ತಕ್ಕೆ ಪರಿಹಾರವಾಗಿ ಹಣ ಪಡೆಯುವುದಿಲ್ಲ' ಎಂದು ತಿರಸ್ಕರಿಸಿದ ವ್ಯಕ್ತಿಗಳು ಇಬ್ಬರೇ ಇಬ್ಬರು ತಾಯಿ ಅತ್ತರ್ ಕೌರ್ ಮತ್ತು ರತನ್ ದೇವಿ. ಜಲಿಯನ್‌ವಾಲಾಬಾಗ್ ದುರಂತದ ಆ ರಾತ್ರಿ, ರತನ್ ದೇವಿಗೆ ಪತಿಯ ಹೆಣ ಸಿಕ್ಕಿದಾಗ, ಅದನ್ನು ಹೊತ್ತು ಮನೆಗೆ ತರಲು ಅಲ್ಲಿ ಯಾರೂ ಇರಲಿಲ್ಲ. ಸಾಯುವವರ ನೋಯುವವರ ಆಕ್ರಂದನದ ನಡುವೆ ಸಾವಿರಾರು ಹೆಣಗಳ ಮಧ್ಯದಲ್ಲಿ ಅಸಹಾಯಕಳಾಗಿ ಪತಿಯ ಹೆಣವನ್ನು ಬಗಲಲ್ಲಿಟ್ಟುಕೊಂಡು ಇಡೀ ರಾತ್ರಿಯನ್ನು ಜಲಿಯನ್‌ವಾಲಾಬಾಗ್‌ನಲ್ಲಿ ಕಳೆದ ಮಹಿಳೆ ರತನ್ ದೇವಿ.

ಸರಕಾರಿ ಅಧಿಕಾರಿಗಳು ಸಾಕಷ್ಟು ಬಾರಿ ಅತ್ತರ್ ಕೌರ್ ಮನೆಗೆ ಬಂದು 'ಮಕ್ಕಳ ಭವಿಷ್ಯಕ್ಕಾದರೂ ಪರಿಹಾರ ಧನವನ್ನು ತೆಗೆದುಕೊಳ್ಳಿ' ಎಂದು ಹೇಳುತ್ತಿದ್ದರು. ಅತ್ತರ್ ಕೌರ್‌ದು ಒಂದೇ ಉತ್ತರ. ನನ್ನ ಮಕ್ಕಳು ಹಸಿವಿನಿಂದ ಒದ್ದಾಡುವುದನ್ನಾದರೂ ನೋಡುತ್ತೇನೆ, ನನ್ನ ಪತಿಯ ರಕ್ತದ ಬೆಲೆ ಪಡೆದು, ಆ ಹಣದಲ್ಲಿ ಮಕ್ಕಳನ್ನು ಸಾಕಲಾರೆ'.

ಇದೀಗ ಮೂರು ಮಕ್ಕಳ ಸಂಸಾರದ ಪೂರ್ಣ ಹೊಣೆ ಅತ್ತರ್ ಕೌರ್ ಮೇಲಿತ್ತು. ಆ ದಿನಗಳಲ್ಲಿ ಅತ್ತರ್ ಕೌರ್ ಖರ್ಬೂಜದ ಬೀಜ ತೆಗೆಯುವ ಕೆಲಸ, ಪೆಪ್ಪರ್‌ಮೆಂಟಿಗೆ ಲೇಬಲ್ ಮೆತ್ತುವ ಕೆಲಸ, ಹೀಗೆ ಏನೇನೋ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಸಂಸಾರ ನಡೆಸಿದ್ದರು. ಮಕ್ಕಳೂ ಒಂದಿಲ್ಲೊಂದು ಕೆಲಸಕ್ಕೆ ಕೈಹಾಕುವ ಅನಿವಾರ್ಯವಿತ್ತು. ಅರೆ ಹೊಟ್ಟೆಯ ದಿನಗಳು ಅಭ್ಯಾಸವಾಗಿದ್ದವು. ಎಷ್ಟೋ ಬಾರಿ ಒಂದಿಷ್ಟು ಹುರಿದ ಕಡಲೆ ಕಾಳು ತಿಂದು ಮಲಗಿದ ದಿನಗಳಿದ್ದವು.



ಶಾಲೆಗೆ ಹೋಗುವ ಸೋಹನ ಲಾಲ್. ಭಾರತಿಯ ಆಸೆ ಈ ಆರ್ಥಿಕ ಮುಗ್ಗಟ್ಟಿನಲ್ಲಿ ಹೊಸಕಿ ಹೋಯಿತು. ಗಂಡು ಮಕ್ಕಳಿಬ್ಬರೂ ಎಳೆಯ ವಯಸ್ಸಿನಲ್ಲೇ ಹೆರವರ ಅಂಗಡಿಗಳಲ್ಲಿ ಕೆಲಸಕ್ಕೆ ನಿಂತರು.

ಬಾಲಕ ಸೋಹನ್ ಲಾಲ್ ಬೆಳೆದಂತೆ ತಾಯಿ ಯೊಡನೆ ಅನೇಕ ಬಾರಿ 'ನೌಜವಾನ್ ಸಭೆ'ಗಳಿಗೆ ಹೋದರು. ಅಲ್ಲಿ ಅತ್ತರ್ ಕೌರ್ ಯುವಕರಿಗೆ 'ದೇಶಕ್ಕಾಗಿ ಹೋರಾಡಿ ಮಡಿವ' ಕರೆ ನೀಡುತ್ತಿದ್ದುದು ಇವರನ್ನೂ ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಭಾಗಿಯಾಗುವಂತೆ ಮಾಡಿತು. ಅತ್ತರ್ ಕೌರ್‌ಗೆ ಗಾಂಧೀಜಿಯವರ ಸತ್ಯಾಗ್ರಹದಲ್ಲಿ ಅಚಲ ವಿಶ್ವಾಸ, 1932 ರಲ್ಲಿ ವಿದೇಶಿ ಬಟ್ಟೆ ಮತ್ತು ವಿದೇಶಿ ಹೆಂಡದ ವಿರುದ್ಧ ಪಿಕೆಟಿಂಗ್ ಆರಂಭವಾಗಿತ್ತು. ಅತ್ತರ್ ಕೌರ್ ಸುತ್ತ ಮುತ್ತಲ ಹೆಂಗಸರು ಮಕ್ಕಳನ್ನು ಕೂಡಿಸಿಕೊಂಡು ಅಂಗಡಿಗಳ ಎದುರು ಧರಣೀ ಹೂಡಿದ್ದರು. ಎಷ್ಟೆಲ್ಲ ಹುತಾತ್ಮರ ಬಲಿದಾನದ ನಂತರ ದೊರೆತಿದ್ದು ಭಾರತಕ್ಕೆ ಸ್ವಾತಂತ್ರ್ಯ. 1952 ರಲ್ಲಿ ಭಾರತ ಸರಕಾರ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಬರೆಯಲು ನಿಶ್ಚಯಿಸಿದಾಗ, ಅತ್ತರ್ ಕೌರ್ ಶಿಕ್ಷಣ ಮಂತ್ರಿ ಮೌಲಾನಾ ಆಜಾದ್ ಅವರಿಗೆ ಬರೆದರು. 'ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಒಂದು ಕೋಣೆಯಲ್ಲಿ ಕುಳಿತು ಬರೆಯಲಾಗದು. ಭಾರತದ ಇಂಚು ಇಂಚು ನೆಲದಲ್ಲೂ ಸ್ವಾತಂತ್ರ್ಯ ಹೋರಾಟ ನಡೆದಿದೆ. ಆದ್ದರಿಂದಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರ ಕುಟುಂಬಗಳ ಸಂಪರ್ಕದ ಅಗತ್ಯವಿದೆ. ಜಲಿಯನ್‌ವಾಲಾಬಾಗ್ ಸಂಬಂಧವಾಗಿ ಬಹುಶಃ ನಾ ನಿಮಗೆ ಒಂದಿಷ್ಟು ಮಾಹಿತಿ ನೀಡಬಲ್ಲೆ'. ಮೌಲಾನಾ ಆಜಾದ್, 'ಇತಿಹಾಸ ಕಮಿಟಿ'ಯ ಕಾರ್ಯದರ್ಶಿ ಸುರೇಂದ್ರಮೋಹನ್ ಘೋಷ್ ಅವರನ್ನು ಅತ್ತರ್ ಕೌರ್ ಭೇಟಿಗೆ ಅಮೃತಸರಕ್ಕೆ ಕಳುಹಿಸಿದರು. ಜಲಿಯನ್ ವಾಲಾಬಾಗ್ ಕುರಿತಂತೆ ಅತ್ತರ್ ಕೌರ್‌ಗೆ ತಿಳಿದ ಮಾಹಿತಿಗಳನ್ನು ಪಡೆದರು.

1956 ರಲ್ಲಿ ಅಮೃತಸರಕ್ಕೆ ಬಂದ ಮೌಲಾನಾ ಆಜಾದ್ ಅತ್ತರ್ ಕೌರ್ ಅವರನ್ನು ಭೇಟಿಯಾದರು. ಅವರ ಬಾಯಿಂದ ಜಲಿಯನ್ ವಾಲಾಬಾಗ ಪ್ರಕರಣವನ್ನು ಕೇಳುತ್ತಿದ್ದಂತೆ ಮೌಲಾನಾ ಅವರ ಕಣ್ಣುಗಳು ತೇವವಾಗಿದ್ದವು. ಅತ್ತರ್ ಕೌರ್ ಹೊರಟು ನಿಂತಾಗ 'ನಿಮ್ಮ ಇಚ್ಛೆ ಏನಾದರೂ ಇದ್ದರೆ ತಿಳಿಸಿ' ಎಂದು ಕೇಳಿದರು. 'ಯಾವ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಭಾರತೀಯರು ಬಲಿದಾನ ನೀಡಿ ಹುತಾತ್ಮರಾದರೋ, ಆ ಸ್ವಾತಂತ್ರ್ಯ ಸರಿಯಾದ ಅರ್ಥದಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ದೊರೆಯಬೇಕು. ಇದೇ ನನ್ನ ಇಚ್ಛೆ' ಅತ್ತರ್ ಕೌರ್ ಉತ್ತರಿಸಿದ್ದರು. ಭಾರತ ಸರಕಾರ ಹುತಾತ್ಮ ಪತಿಯ ಹೆಸರಿನಲ್ಲಿ ನೀಡಲು ಬಂದ 'ಪೆನ್ಷನ್' ಕೂಡಾ ಅತ್ತರ್ ಕೌರ್ ನಿರಾಕರಿಸಿದರು. 'ನನ್ನ ಪತಿಯ ದೇಶಭಕ್ತಿಗೆ ಬೆಲೆ ತರಬೇಡಿ' ಎಂದರು. ಅಂದಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಕೂಡಾ ತಾಯಿ ಅತ್ತರ್ ಕೌರ್ ಅವರನ್ನು ನೋಡಬಯಸಿದರು. ಮಕ್ಕಳೊಡನೆ ನೆಹರೂ ಅವರನ್ನು ಭೇಟಿಯಾದಾಗ, ಜೊತೆಗೆ ಇಂದಿರಾ ಇದ್ದರು. ಅತ್ತರ್ ಕೌರ್ ಅವರ ಬಾಯಿಂದ ಜಲಿಯನ್‌ವಾಲಾಬಾಗ್ ಪ್ರಕರಣವನ್ನು ಪೂರ್ಣ ಕೇಳಿ ನೊಂದರು. ನೆಹರೂ ಅವರು, 'ನನ್ನಿಂದೇನಾದರೂ ಆಗಬೇಕಿದ್ದರೆ ಹೇಳಿ' ಎಂದು ಕೇಳಿದಾಗ, ಅತ್ತರ್ ಕೌರ್ 'ಹುತಾತ್ಮರಿಗೊಂದು ಸ್ಮಾರಕ ನಿಲ್ಲಿಸಬೇಕೆಂದು' ತಿಳಿಸಿದರು. ನೆಹರೂ ಅವರು ಅತ್ತರ್ ಕೌರ್‌ಗೆ ಪೆನ್ಷನ್ ತೆಗೆದುಕೊಳ್ಳುವಂತೆ, ಹಿಸಾರ್ ಜಿಲ್ಲೆಯಲ್ಲಿ ಜಮೀನು ನೀಡುವುದಾಗಿಯೂ, ಅದನ್ನೂ ತೆಗೆದುಕೊಳ್ಳುವಂತೆ ಪ್ರಾರ್ಥಿಸಿದರು. ಅತ್ತರ್ ಕೌರ್ ಬಹಳಷ್ಟು ಸಹೃದಯತೆಯಿಂದಲೇ ಅದನ್ನು ಸಂಪೂರ್ಣ ನಿರಾಕರಿಸಿದರು. ದೇಶಕ್ಕಾಗಿ ದುಡಿವ, ಮಡಿವ ದೇಶಭಕ್ತಿಗೆ ಯಾವುದೇ ಬಗೆಯ ಪ್ರತಿಫಲವನ್ನು ಪಡೆಯಲು ಆಕೆ ಸಿದ್ಧವಿರಲಿಲ್ಲ.



ಜಲಿಯನ್‌ವಾಲಾಬಾಗ್‌ನಲ್ಲಿ ಕೆಂಪು ಕಲ್ಲಿನ 45 ಅಡಿಯ ಸ್ಮಾರಕ 'ಹುತಾತ್ಮರ ಜ್ಯೋತಿ' ನಿರ್ಮಾಣವಾಯಿತು. 1961 ರಲ್ಲಿ ಇದರ ಉದ್ಘಾಟನೆಗೆ ರಾಷ್ಟ್ರಪತಿ ಡಾ.ರಾಜೇಂದ್ರಪ್ರಸಾದ್ ಅಮೃತಸರಕ್ಕೆ ಬಂದರು. ಅವರೂ ಅತ್ತರ್ ಕೌರ್ ಅವರನ್ನು ಭೇಟಿಯಾಗಬಯಸಿದರು. ತಮ್ಮ ಇಬ್ಬರು ಮಕ್ಕಳೊಡನೆ ಸರ್ಕ್ಯೂಟ್ ಹೌಸ್ ತಲುಪಿದಾಗ, ರಾಷ್ಟ್ರಪತಿಯವರು ಎದ್ದು ನಿಂತು ತಾಯಿ ಅತ್ತರ್ ಕೌರ್ ಅವರ ಪಾದಕ್ಕೆ ನಮಸ್ಕರಿಸಿದ್ದರು. ಮತ್ತೆ ಹೇಳಿದ್ದರು 'ಭಾಗಮಲ್ ಭಾಟಿಯಾ ಜಲಿಯನ್ ವಾಲಾ ಭಾಗ್‌ನ ಹುತಾತ್ಮರಾದರೆ, ನೀವು ನಿಮ್ಮ ಧೈರ್ಯ, ಬಲಿದಾನದ ಕಾರಣಕ್ಕೆ ಜಲಿಯನ್ ವಾಲಾಬಾಗ್‌ನ ಜ್ಯೋತಿಯಾಗಿದ್ದೀರಿ, ನಿಮ್ಮ ಗರ್ಭದಲ್ಲಿದ್ದ ಈ ಮಗ ಜಲಿಯನ್‌ವಾಲಾಬಾಗ್‌ನ ಅಭಿಮನ್ಯು'.

ದಾಸ್ಯದ ಶ್ರೀಮಂತಿಕೆಗಿಂತ ಸ್ವಾತಂತ್ರ್ಯದ ಬಡತನವಿರಲಿ ಎಂದು ಆಯ್ದುಕೊಂಡ ಅತ್ತರ್ ಕೌರ್ ತಮ್ಮ ಬದುಕು ಪೂರಾ ತಮ್ಮ ಆದರ್ಶದಂತೆಯೇ ಬದುಕಿದರು. ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ ಅತ್ತರ್ ಕೌರ್ 1964 ರಲ್ಲಿ ಚಿರನಿದ್ರೆಯಲ್ಲಿ ಮಲಗಿದರು.

(ಲೇಖಕರು ಹೆಚ್‌ಎಎಲ್ ಬೆಂಗಳೂರಿನಲ್ಲಿ ಉದ್ಯೋಗಿಗಳು,ಮಹಿಳಾ ಹೋರಾಟಗಾರರು ಮತ್ತು ಚಿಂತಕರು)

ರಶೀದಿ ಮತ್ತು ಅವಳು

ಮೊನ್ನೆ ಮೊನ್ನೆ
ಆ ಸುರಿವ ಮಳೆಯಲ್ಲಿ ಗಿಜಿಗುಡುವ ಕೆಂಪು ಬಸ್ಸಲ್ಲಿ
ಅಚಾನಕ್ - ಸಿಕ್ಕಿ ಬಿಟ್ಟಳು
ನನ್ನ ಬಾಲ್ಯದ ಗೆಳತಿ.

ಅಪರೂಪಕ್ಕೆ ಸಿಕ್ಕ
ಅಪೂರ್ವ ಖುಷಿ
ಯಲ್ಲಿ ಏನೆಲ್ಲ ಹೇಳಿಬಿಟ್ಟಳು?
ಛಲ ಹೊತ್ತು ಪಡೆದ ನೌಕರಿ,
ನಾಲ್ಕಂಕಿ ಸಂಬಳ,
ಮದುವೆ- ಮಕ್ಕಳು
ತನ್ನ ಲೋನಲ್ಲೇ ಖರೀದಿಸಿದ ಮನೆ
ದ್ವಿಚಕ್ರ ವಾಹನ, ಟಿ.ವಿ, ಫ್ರಿಜ್ಜು.....
ಛೆ, ಎಷ್ಟೆಲ್ಲ ಒಂದೆ ಉಸುರಿಗೆ!

ಮೊದಲಿನಿಂದಲೂ ಹಾಗೆ
ಪಟಾಕಿ ಸಿಡಿಸುವ ಮಾತಿನವಳು
ಸಂಘಟನೆ, ಹೋರಾಟ ಪಾದರಸದವಳು
ಭೂಮಿ ಆಕಾಶ ಒಂದಾಗಿ ಬೆಸೆವ
ಕನಸ ಹೊತ್ತವಳ ನೆನಪಾಯ್ತು
ಮನೆಯ ದಾರಿ ಹಿಡಿದೆ.

ಯಾವುದೊಂದು ಮರೆತಿಲ್ಲ
ನನಗಿಷ್ಟವೆಂದೇ ಬಿಸಿ ಬಿಸಿ ಉಪ್ಪಿಟ್ಟು
ಘಮ ಘಮ ಕಾಫಿ
ಹೊಟ್ಟೆ ತುಂಬ ತಿನಿಸಿದಳು.
ಕೈಗೆ ನೀಡಿದ ಟವಲ್‌ಗೆ ಬಾಯೊರಸುತ್ತ
ರಶೀದಿ ಪುಸ್ತಕದ ಮುಂದಿಟ್ಟೆ.

ಪೆನ್ನ ತೆರೆದವಳು
ಇಂಕೇ ಇಲ್ಲದಂತೆ ಕೊಡವಿದಳು
ಬೇರೆ ಪೆನ್ನಿಗಾಗಿ ಹುಡುಕಾಡಿದಂತೆ
ಬಾಗಿಲ ಕಡೆ ಎದ್ದು ನೋಡಿ ಬಂದಳು.
ಆಫೀಸು ಬಿಡುವ ವೇಳೆಯಾಯಿತೆ?
ಎಂದು ಗಡಿಯಾರ ನೋಡಿದಳು.

'ಬರುತ್ತೇನೆ'
ಎಂದು ಎದ್ದು ಬಂದೆ.

- ಮಾಧವಿ ಭಂಡಾರಿ ಕೆರೆಕೋಣ

'ಹರಿದ ಸ್ಕರ್ಟಿನ ಹುಡುಗಿ' ಸಂಕಲನದಿಂದ

ಕೋಮುವಾದ -ಮೂಲಭೂತವಾದದ ಹಿಂದೆ ಮುಂದೆ

ಜಾಗತೀಕರಣ, ಉದಾರೀಕರಣಗಳ ಜೊತೆ ಜೊತೆಯಲ್ಲೇ ಅವಳ ಜವಳಿಯಾಗಿ ಕೈ ಕಲೆಸಿ ಬರುತ್ತಿರುವ ಕೋಮುವಾದ-ಮತೀಯ ಮೂಲಭೂತವಾದ ದಾಳಿ ಮಹಿಳೆಯರನ್ನು ಇನ್ನೂ ಪ್ರಪಾತಕ್ಕೆ ಒಯ್ಯಲಿದೆ. ಮಹಿಳೆಯರು ಸ್ವಾತಂತ್ರ್ಯಕ್ಕೆ ಅನರ್ಹರು, ಎರಡನೇ ದರ್ಜೆಯವರು ಎಂಬುದನ್ನು ಗಟ್ಟಿಗೊಳಿಸುತ್ತಾ ಸಾಗಿದೆ. ತನ್ನ ಬಚ್ಚಿಟ್ಟ ಅಜೆಂಡಾಕ್ಕೆ ಮಹಿಳೆಯರನ್ನು ಸೆಳೆಯುವ ಕುತಂತ್ರದಲ್ಲಿ ತೊಡಗಿದೆ. ಕೋಮುವಾದದ ಹಿಂದೆ ಮುಂದೆ ಇರುವ ಭೀಕರ ಸತ್ಯಗಳೇನು?



ಕೆ.ಎಸ್.ವಿಮಲ

ನಮ್ಮ ನೆಲದಲ್ಲಿ 'ಕೋಮುವಾದ' ವೆಂಬುದು ಇತ್ತೀಚೆಗಷ್ಟೇ ಬೆಳೆದ ಹೊಸ ವಿಷಯವೇನಲ್ಲ. ಆದರೆ ಇದು ಇಂದು ಹಿಂದೆಂದಿಗಿಂತಲೂ ಅತಿ ಹೆಚ್ಚು ಅಪಾಯಕಾರಿ, ಆತಂಕಕಾರಿಯಾಗಿ ಬೆಳೆಯುತ್ತಿರುವುದರಿಂದ ಅದರ ವಿರುದ್ಧ ಕೇವಲ ಮಾತುಗಳಷ್ಟೇ ಅಲ್ಲದೆ ನೇರ ಕಾರ್ಯಾಚರಣೆ ಇಡೀ ಸಮಾಜದ ಒಳಿತಿಗಾಗಿ ಅತ್ಯಂತ ಅನಿವಾರ್ಯ ಅಗತ್ಯ.

ಸಮಗ್ರ, ಸಾರ್ವಭೌಮ ಭಾರತದ ಕಲ್ಪನೆಯಲ್ಲಿ ಈ ದೇಶದ ಅತಿ ದೊಡ್ಡ ಜನ ಸಮೂಹ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ಇತಿಹಾಸ ಹೊಂದಿದ ಈ ದೇಶದಲ್ಲಿ ಈ ಸಂದರ್ಭದಲ್ಲಿಯೇ "ಹಿಂದೂ ರಾಷ್ಟ್ರ" ದ ಪರಿಕಲ್ಪನೆಗೆ ನೀರೆರೆದ ಗುಂಪೂ ಇತ್ತು ಎಂಬುದು ಅಂದಿನ ಹಿಂದೂ ಮಹಾಸಭಾ ಮತ್ತು ನಂತರ ಬಂದ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಇಂದು ವಿ.ಎಚ್.ಪಿ, ಭಜರಂಗಿಗಳಿತ್ಯಾದಿ ರೆಂಬೆ ಕೊಂಬೆಗಳಾಗಿ ಟಿಸಿಲೊಡೆದು ಹೆಮ್ಮರವಾಗಿ ನಿಂತ ಸಂಘ ಪರಿವಾರದ ಧೋರಣೆಯಿಂದ, ಚಟುವಟಿಕೆಗಳಿಂದ ಛಿದ್ರವಾಗುತ್ತದೆ.

ಈ ಪರಿವಾರ ಈ ದೇಶದ ಬಹುಸಂಖ್ಯಾತ ಜನಸಾಮಾನ್ಯರು ಆಚರಿಸುವ ಹಿಂದೂ ಧರ್ಮ ಮತ್ತು ಈ ಸಂಘಗಳು ಪ್ರತಿಪಾದಿಸುವ 'ಹಿಂದುತ್ವ' ಎರಡೂ ಒಂದೇ ಎಂಬ ಅಭಿಪ್ರಾಯವನ್ನು ಜನರ ಮನಸ್ಸಿನಲ್ಲಿ ಬಿತ್ತಲು ಹವಣಿಸುತ್ತದೆ ಮತ್ತು ಆ ಮೂಲಕ ತಾನೊಂದು ಸಾಂಸ್ಕೃತಿಕ ಸಂಘಟನೆ ಮಾತ್ರ ಎಂದು ಹೇಳಿಕೊಳ್ಳುತ್ತಲೇ ಇಂದು ಅಧಿಕಾರ ನಡೆಸುತ್ತಿರುವ ಕೇಂದ್ರ ಸರ್ಕಾರದ ಸೂತ್ರವನ್ನು ಹಿಡಿದಿರುವ ಆರೆಸ್ಸೆಸ್‌ನ ಹಿಂದೂ ರಾಷ್ಟ್ರ ನಿರ್ಮಾಣದ ಗುರಿ ಮುಟ್ಟುವ ತೀವ್ರ ಪ್ರಯತ್ನ ನಡೆಯುತ್ತಿದೆ.

ಇತ್ತಿಚೆಗೆ ತಾನೇ ಸಂಸತ್ ಭವನದಲ್ಲಿ ರಾಷ್ಟ್ರ ಪುರುಷ / ಸ್ತ್ರೀಯರ ಸಾಲಿನಲ್ಲಿ (ಸಾಕಷ್ಟು ವಿರೋಧಗಳ ಮಧ್ಯೆಯೆ) ಅನಾವರಣಗೊಂಡ 'ವೀರ' ಸಾವರ್‌ಕರ್ ಫೋಟೋ ಈ socalled ಸಾಂಸ್ಕೃತಿಕ ಸಂಘಟನೆಯ ಇಂದಿನ ಕಾರ್ಯಕರ್ತರಿಗೂ ಆದರ್ಶಪ್ರಾಯ ವ್ಯಕ್ತಿ. ಈತನ ಬಾಲ್ಯದಿಂದಿನ ಘಟನಾವಳಿಗಳನ್ನು ಗಮನಿಸಿದರೆ ಅಂದೇ ಅಲ್ಪಸಂಖ್ಯಾತರ ವಿರುದ್ಧ ಈ ಸಂಘಟನೆಗಳು ಹೇಗೆ ವಿಷ ಬಿತ್ತುತ್ತಿದ್ದವೆಂಬುದು ಗೋಚರವಾಗುತ್ತದೆ.

ಸಾವರ್‌ಕರ್ 12 ವರ್ಷದ ಬಾಲಕನಾಗಿದ್ದಾಗಲೇ ತನ್ನ ಸಹವಿದ್ಯಾರ್ಥಿಗಳೊಡನೆ ಒಂದು ಹಳ್ಳಿಯ ಮಸೀದಿಯೊಂದಕ್ಕೆ ಕಲ್ಲು ಹೊಡೆಯಲು ನೇತೃತ್ವ ವಹಿಸಿಕೊಂಡು ಹೋಗಿದ್ದ ಮತ್ತು ಆವನ ಜೀವನದುದ್ದಕ್ಕೂ ಇಂತಹ ಹಲವು ಘಟನೆಗಳಲ್ಲಿ ಭಾಗಿಯಾಗಿದ್ದ ಮತ್ತು ಎಲ್ಲೆ ಹಿಂದೂಗಳು ಮುಸ್ಲೀಮರನ್ನು ಕೊಂದರೆಂದರೆ ಅತ್ಯಂತ ಸಂತೋಷಪಡುತ್ತಿದ್ದ ಎಂದು ಆತನ ಜೀವನ ಚರಿತ್ರೆ ಬರೆದ ಧನಂಜಯ ಕೀರ್ ಬರೆದಿದ್ದಾರೆ. ಸಾವರ್‌ಕರ್ ಪ್ರಕಾರ ಹಿಂದೂ - ಮುಸ್ಲಿಂ - ಇವು ಎರಡು ದೇಶಗಳು ಹೀಗೆ ಪ್ರತಿಪಾದಿಸುವ ಮೂಲಕ "ಎರಡು ದೇಶಗಳ ವಾದ" (Two Nation Theory)ವನ್ನು 'ಜಿನ್ನಾ'ರಿಗಿಂತ ಮೊದಲೇ ಆತ ಮುಂದಿಟ್ಟಿದ್ದ. ಆತನ ತಣ್ಣನೆಯ ಕ್ರೌರ್ಯಕ್ಕೆ ಸಾಕ್ಷಿಯಾಗುವ ದ್ವೇಷ, ಅಸಹನೆಗಳ ಮೂರ್ತಿಯೇ ಆತನಾಗಿದ್ದ ಎನ್ನುವುದಕ್ಕೆ ಹಲವು ಉದಾಹರಣೆಗಳು ಸಿಗುತ್ತವೆ.

ದ್ವೇಷ-ದ್ವೇಷ....

ಇಂದು ನಮ್ಮ ದೇಶದಲ್ಲಿ ನಡೆಯುತ್ತಿರುವ ಘಟನೆಗಳಿಗೂ ಅಂದಿನ ಸಾವರ್‌ಕರ್ ಧೋರಣೆಗಳಿಗೂ ನೇರ ಸಂಬಂಧವಿದೆ ಎಂಬುದು ಕಳೆದ ವರ್ಷ ಇದೇ ದಿನಗಳಲ್ಲಿ



ಗುಜರಾತಿನಲ್ಲಿ ನಡೆಯುತ್ತಿದ್ದ ಹತ್ಯಾಕಾಂಡಗಳು ನಮಗೆ ತಿಳಿಸಿಕೊಡುತ್ತವೆ. ಎಂತಹ ಕಟುಕನ ಕಲ್ಲೆದೆಯನ್ನೂ ಒಮ್ಮೆ ಝಲ್ಲೆನಿಸುವಂತಹ ಭೀಭತ್ಸ ಘಟನೆಗಳು ಗುಜರಾತಿನ ನೆಲದಲ್ಲಿ ನಡೆದು ಹೋದವು. ಅದು ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್‌ಗೆ 'ಹಾಕಿದ ಬೆಂಕಿ'. ಗುಲ್ಬರ್ಗಾ ಸೊಸೈಟಿಯಲ್ಲಿ ತುಂಬು ಗರ್ಭಿಣಿಯ ಹೊಟ್ಟೆ ಸೀಳಿ ಗರ್ಭದಲ್ಲಿದ್ದ ಶಿಶುವನ್ನು ತ್ರಿಶೂಲದಿಂದ ಚುಚ್ಚಿ ಬೆಂಕಿಗೆ ಹಾಕಿ ಅಟ್ಟಹಾಸದಿಂದ ಮೆರೆದ ಘಟನೆ ಅಥವಾ ಸಾವಿರಾರು ಜನರ ಮಾರಣ ಹೋಮ, ನೂರಾರು ಮಹಿಳೆಯರ ಮೇಲಿನ ಅತ್ಯಾಚಾರ ಇವಾವುದೇ ಇರಬಹುದು. ಅಥವಾ ಈ ಮಾರಣಹೋಮದ ನಂತರ ಹಿಂದುತ್ವದ ಅಜೆಂಡಾದಲ್ಲಿಯೇ ಚುನಾವಣೆ ನಡೆಸಿ ಭಯಭೀತ ಜನ ಚಲಾಯಿಸಿದ ಮತದಿಂದ ಮತ್ತೊಮ್ಮೆ ಅಧಿಕಾರದ ಗದ್ದುಗೆ ಹಿಡಿದು, ಈ ಕ್ಷಣದಲ್ಲಿಯೂ ಅಲ್ಲಿಯ ಮುಸ್ಲೀಮರು ಬದುಕಲಾರದ ಸ್ಥಿತಿ ನಿರ್ಮಾಣವಾಗಿರುವುದಿರಬಹುದು. ಇವೆಲ್ಲವುಗಳ ಬೇರುಗಳು ಬಹಳ ಹಿಂದಿನಿಂದಲೇ ಬೆಳೆದು ಬಂದವು. ಗೋಲ್ವಾಲ್‌ಕರ್, ಹೆಡಗೇವಾರ್ ರವರುಗಳ ಭೋಧನೆಗಳೇ "ದ್ವೇಷ" ಬೆಳೆಸುವ ಭೋಧನೆಗಳಾಗಿದ್ದವು ಎನ್ನುವುದು ಅವರ ವಿಚಾರ ಧಾರೆಗಳನ್ನು ಓದಿದವರಿಗೆ ಸ್ಪಷ್ಟವಾಗಿ ತಿಳಿಯುತ್ತದೆ.

ಹಿಂದುತ್ವ ಮತ್ತು ಮಹಿಳೆ:

ಹಿಂದುತ್ವದ ಬೆಳವಣಿಗೆ ಎಂದರೆ ಅದು ಮಹಿಳಾ ವಿರೋಧಿ ಬೆಳವಣಿಗೆ ಎಂದೇ ಅರ್ಥ. ಜೊತೆಯೇ ಅದು ಸಮಾಜ ವಿರೋಧಿ ಬೆಳವಣಿಗೆ ಕೂಡ. ಭಾರತದ ಸಂದರ್ಭದಲ್ಲಿ ಕೋಮುವಾದವೆಂದೊಡನೆ ಸರಳವಾಗಿ ಹಿಂದೂ-ಮುಸ್ಲಿಂರ ಮಧ್ಯೆಯ ಘರ್ಷಣೆಯ ಭಾಗವಾಗಿಯೇ ನೋಡುವಷ್ಟು ಇತಿಹಾಸವನ್ನು ಅದು ಹೊಂದಿದೆ. 19ನೇ ಶತಮಾನದ ಮೊದಲ ಭಾಗದಲ್ಲಿಯೇ ಉತ್ತರ ಭಾರತದ ಹಲವೆಡೆ ಕೋಮುಗಲಭೆಗಳು ನಡೆದವು. ಹಾಗೆಯೇ ಬೆಳೆದು-1992 ಬಾಬ್ರಿ ಮಸೀದಿಯ ಧ್ವಂಸದ ಘಟಕ್ಕೆ ಮುಟ್ಟಿ ಇದೀಗ ಗುಜರಾತಿನ ಘಟನೆಗಳ ನಂತರ ಮುನ್ನಡೆದು ದೇಶದ ಇತರ ಭಾಗಗಳಿಗೂ ಹಬ್ಬುವ ಪ್ರಯತ್ನ ನಡೆಯುತ್ತಿದೆ.

ಬಾಬ್ರಿ ಮಸೀದಿ ರಾಮನ ಜನ್ಮಸ್ಥಳವೆಂದು ಪ್ರತಿಪಾದಿಸುತ್ತ, ಮರ್ಯಾದಾ ಪುರುಷೋತ್ತಮ ರಾಮನಿಗೆ ಮಂದಿರ ಕಟ್ಟುವ ಹೆಸರಿನಲ್ಲಿ ದೇಶ, ವಿದೇಶಗಳಿಂದ ಇಟ್ಟಿಗೆ ಸಂಗ್ರಹಿಸುವ ಮೂಲಕ ಜನರ ಅದರಲ್ಲೂ ಬಹಳ ಬೇಗ ಭಾವನಾತ್ಮಕ ಸೆಳೆವಿಗೆ ಒಳಗಾಗುವ ಮಹಿಳೆಯರ ಮನ ತಟ್ಟುವಲ್ಲಿ ಸಂಘ ಪರಿವಾರ ಯಶಸ್ವಿಯಾಗಿದೆ. 92 ರ ಡಿಸೆಂಬರ್ 6 ರ ನಂತರದ ದಿನಗಳಲ್ಲಿ ಬಾಂಬೆ, ಸೂರತ್‌ಗಳಲ್ಲಿ ನಡೆದ ಸರಣಿ ಕೋಮು ಗಲಭೆಗಳ ಸಂದರ್ಭದಲ್ಲಿ ನೇರ ಬಲಿಯಾದವರು ಮಹಿಳೆಯರೇ, ಬಾಬ್ರಿ ಮಸೀದಿಯ ಧ್ವಂಸಕ್ಕೆ ಪ್ರತಿಕಾರವಾಗಿ ಮುಸ್ಲಿಮ್‌ರು ಈ ಗಲಭೆಗಳನ್ನು ನಡೆಸಿದರೆಂದು ಪ್ರಚಾರ ನಡೆಸಲು ಪ್ರಯತ್ನ ನಡೆಯಿತಾದರೂ ನಂತರ ಆ ರಾಜ್ಯಗಳ ಆಳುವ ಸರ್ಕಾರಗಳು ತನಿಖೆಗೆ ರಚಿಸಿದ ಆಯೋಗಗಳು ನೀಡಿದ ವರದಿಯ ಪ್ರಕಾರ ಅವೆಲ್ಲ ಗಲಭೆಗಳು ನಡೆದಿದ್ದು ಸಂಘ ಪರಿವಾರದವರಿಂದಲೇ. ಹೀಗೆ 1925 ರಲ್ಲಿ ಆರೆಸ್ಸೆಸ್ ರಚನೆಯಾದ ಸಂದರ್ಭದಿಂದ ಅದರ ಸಂಸ್ಥಾಪಕ, ತನ್ನ ಪೂರ್ವಜ ಸಾವರ್‌ಕರ ನೀಡಿದ ಮಾರ್ಗದರ್ಶನದ ಆಧಾರದಲ್ಲಿ - ರಾಮನನ್ನು ಸಂಕೇತವಾಗಿ ಬಳಸಿದ್ದನ್ನು ಇಂದಿಗೂ ಸಂಘಗಳು ಒಂದು ಪರಿಣಾಮಕಾರಿ ಆಯುಧವಾಗಿ ಬಳಸುತ್ತಿದ್ದಾರೆ ಮತ್ತು ಅವರ ವಿಷ ಹರಡುವ ಪ್ರಯತ್ನದಲ್ಲಿ ಎಷ್ಟು ಸಫಲರಾಗಿದ್ದಾರೆಂದರೆ-92 ರ ಡಿಸೆಂಬರ 6ಕ್ಕೆ ಮೊದಲು ನಡೆದ ಇಟ್ಟಿಗೆ ಪೂಜೆ, ಕರಸೇವೆ ಇತ್ಯಾದಿಗಳಲ್ಲಿ 'ರಾಮ'ನ ಮೇಲಿನ ಶ್ರದ್ಧೆಯ ಹಿನ್ನೆಲೆಯಲ್ಲಿ ಭಾವನಾತ್ಮಕವಾಗಿ ಮಹಿಳೆಯರು ಪಾಲ್ಗೊಂಡರಾದರೂ, 6 ರ ನಂತರ ನಡೆದ ಕೋಮುಗಲಭೆಗಳ ಸಂದರ್ಭದಲ್ಲಿ ಮಹಿಳೆಯರು ಗಲಭೆಕೋರರಾಗಿ ಪಾಲ್ಗೊಳ್ಳಲಿಲ್ಲ. ಬದಲಿಗೆ ಎರಡೂ ಕೋಮಿನ ಮಹಿಳೆಯರು ಗಲಭೆಗೆ ತುತ್ತಾದ ಜನರಿಗೆ (ಎರಡೂ ಕೋಮಿನ) ಆಶ್ರಯ ನೀಡಿದ ಆಸರೆಯಾದ ನೂರಾರು ಉದಾಹರಣೆಗಳಿದ್ದವು. ಆದರೆ ಇಂದು ಗುಜರಾತ್ ಹತ್ಯಾಕಾಂಡದ ಸಂದರ್ಭದಲ್ಲಿ ಟಿ.ವಿ.ಪರದೆಗಳ ಮೇಲೆ ನಾವೇ ಕಣ್ಣಾರೆ ಕಂಡಂತೆ ಮಹಿಳೆಯರನ್ನೂ ಅಲ್ಪ ಸಂಖ್ಯಾತರನ್ನು ಹಗೆಗಳಂತೆ ನೋಡಲು ಪ್ರೇರೇಪಣೆ ನೀಡಿ, ಪ್ರಚೋದಿಸಿ, ಆಶ್ರಯ ನೀಡುವುದಲ್ಲ, ಬದಲಿಗೆ ತಮ್ಮ ಸೀರೆಯ ಸೆರಗನ್ನೇ ಹರಿದು ಬೆಂಕಿ ಹಚ್ಚಿ ತಮ್ಮ ನೆರೆಯ ಮನೆಗಳ ಮೇಲೆ ಎಸೆಯುತ್ತಿದ್ದುದು 'ಸಂಘ'ಗಳ ವ್ಯವಸ್ಥಿತ ಕಾರ್ಯತಂತ್ರಕ್ಕೆ ಜೀವಂತ ಸಾಕ್ಷಿ. ಇವರ ವಿಚಕ್ಷಣ ಕುತಂತ್ರ ಕಾರ್ಯಾಚರಣೆ ಎಷ್ಟು ವ್ಯವಸ್ಥಿತವಾಗಿ ನಡೆಯುತ್ತಿದೆಯೆಂದರೆ - ಕ್ರಿಕೆಟ್ ಆಟದಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಗೆದ್ದ ಸಂದರ್ಭವನ್ನೂ ಮುಸ್ಲಿಂ ರ ಮೇಲೆ ಹಲ್ಲೆ ನಡೆಸಲು ಬಳಸಲಾಯಿತು. ಮೇಲ್ನೋಟಕ್ಕೆ ವಿಜಯೋತ್ಸವವೆಂದು ತೋರಿದರೂ ಅದು ಸಾಕಷ್ಟು ಹೋಂವರ್ಕ್ ನಡೆಸಿಯೇ ಮಾಡಿದ ಗಲಭೆಗಳೆಂಬುದು ಸರ್ವವಿದಿತ ಸಂಗತಿ. ಇದಕ್ಕೆ ಪುಷ್ಟಿಕೊಡುವಂತೆ, ಕೇಂದ್ರ ಸರ್ಕಾರ ಕೂಡ

‘ವಿಶ್ವ ಕಪ್’ ಗೆಲ್ಲುವುದರ ಕುರಿತು ಆಶಾಭಾವನೆ ವ್ಯಕ್ತಪಡಿಸುವ ಬದಲು ಪಾಕಿಸ್ತಾನವನ್ನು ಸೋಲಿಸುವುದೇ ನಮ್ಮ ಅಂತಿಮ ಗುರಿ ಎಂಬಂತೆ ಕ್ರಿಕೆಟ್ ಆಟಗಾರರ ಬಹುಮಾನದ ಹಣಕ್ಕೆ ಆದಾಯಕರ ವಿನಾಯ್ತಿ ಘೋಷಿಸಿದ್ದು ಮತ್ತು ಇರುವ ಎಲ್ಲ ಅವಕಾಶಗಳನ್ನು ಪಾಕಿಸ್ತಾನದ ಮೇಲೆ ಆರೋಪ ಹೊರಿಸಲು ಬಳಸುತ್ತ ತನ್ಮೂಲಕ ಇಲ್ಲಿರುವ ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸುವ, ಸದಾ ಯುದ್ಧೋನ್ಮಾದವನ್ನು ಹುಟ್ಟಿಸುವ ಮಾತುಗಳು, ಇವರೆಂತ ವಿಷ ಜಂತುಗಳೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಅವರ ನೇರ ಕಾರ್ಯಾಚರಣೆಯ ಯೋಜನೆಯ ಒಂದು ಭಾಗವಾದರೆ, ಇನ್ನೊಂದೆಡೆ ಜನರನ್ನು ಅವರವರ ಆಸಕ್ತಿಗೆ ಅನುಗುಣವಾಗಿ, ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳ ಮೂಲಕ ಮನಗೆಲ್ಲುವ ಕ್ರಿಯೆಗಳೂ ನಡೆಯುತ್ತಿವೆ. ಉದಾ: ಮಹಿಳೆಯರಲ್ಲಿ ಸಾಮಾನ್ಯವಾಗಿ ಇರುವ ಕಲಾ ಕೌಶಲ್ಯದ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಸ್ಪರ್ಧೆಗಳನ್ನು ಏರ್ಪಡಿಸುವುದು, ನಮ್ಮ ಸಂಸ್ಕೃತಿ, ಸಂಪ್ರದಾಯದ ಹೆಸರಿನಲ್ಲಿ ಜನಪದ/ ಉರುವಣೆ ಹಾಡುಗಳನ್ನು ಕಲಿಸುವುದು, ಬ್ರಾಹ್ಮಣ ವರ್ಗಕ್ಕೆ (ಪುರುಷರಿಗೆ) ಗಾಯತ್ರಿ ಮಂತ್ರ ಕಲಿಸುವುದು ಇತ್ಯಾದಿಗಳ ಜೊತೆ, ಕುಟುಂಬದ ಶ್ರೆಯೋಭಿವೃದ್ಧಿಗಾಗಿ ಮಹಿಳೆಯರು ವ್ರತ, ನೇಮಗಳನ್ನು ಮಾಡುವ ಅವಶ್ಯಕತೆಗಳ ಕುರಿತು ಪ್ರಚಾರ ನಡೆಸುತ್ತಿರುವುದು. ಇಂದಿನ ಆರ್ಥಿಕ ಸುಧಾರಣೆಯ ಫಲವಾಗಿ ಮುಗ್ಗಟ್ಟುಗಳ ಸುಳಿಯಲ್ಲಿ ಸಿಕ್ಕು ತತ್ತರಿಸುತ್ತಿರುವ ಸಂದರ್ಭದಲ್ಲಿ ಮಹಿಳೆಯರು ಇಂತಹ ಪ್ರಚಾರಗಳಿಗೆ ಮರುಳಾಗುತ್ತಿದ್ದಾರೆ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಎಂಬಂತೆ ಸಾಲ ಸೋಲ ಮಾಡಿಯಾದರೂ ವ್ರತ ನೇಮಗಳನ್ನು ಮಾಡಲು ಹೆಚ್ಚು ಗಮನ ನೀಡುತ್ತಿದ್ದಾರೆ. ಹೀಗೆ ವ್ರತ- ನೇಮಗಳ ಹೆಸರಿನಲ್ಲಿ ‘ಪುತ್ರ’ ಆಧ್ಯತೆಯ ಅಂಶಗಳನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡಲಾಗುತ್ತದೆ. ಇದು ಹೆಚ್ಚುತ್ತಿರುವ ಸ್ತ್ರೀ ಭ್ರೂಣ ಹತ್ಯೆಗೂ ಕಾರಣ. ಹೀಗೆ ಮಾಡುವ ಪ್ರಚಾರದ ಮೂಲಕ ಹಲವು ದಶಕಗಳ ಹೋರಾಟದ ಮೂಲಕ ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಾಧಿಸಿದ ಮಹಿಳಾ ಸಮಾನತೆಯ ಹೋರಾಟದ ಹೆಜ್ಜೆಗಳನ್ನು ಬಲಹೀನಗೊಳಿಸುವ ಪ್ರಯತ್ನ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಮೂಲಕ ಮನು ಸಿದ್ಧಾಂತವನ್ನು ಜಾರಿಗೆ ತರುವ ಕ್ರಿಯೆ ನಡೆಯುತ್ತಿದೆ. ಮನುವಿನ ಪ್ರಕಾರ-ಮಹಿಳೆ, ಶೂದ್ರ ಇಬ್ಬರೂ ಪಾದರಕ್ಷೆಗಳಂತೆ ಅವರನ್ನು ಇಡುವ ಸ್ಥಾನವೇ ಬೇರೆ” ಎಂಬ ತತ್ವಕ್ಕೆ ಪುಷ್ಟಿ ನೀಡುವ ಕೆಲಸವನ್ನು ನಡೆಸುವ ಇವರು- ಮಾಡುವ ಪ್ರಚಾರ ಮಾತ್ರ ಬೇರೆ. ಇವರ ಪ್ರಕಾರ ವೇದ, ಉಪನಿಷತ್ತುಗಳ ಕಾಲದಲ್ಲಿ ಮಹಿಳೆಯರಿಗೆ ಅತ್ಯಂತ ಉನ್ನತ ಸ್ಥಾನಗಳಿದ್ದವು. ಅದರೆ ಭಾರತಕ್ಕೆ ಪರಕೀಯ ಮುಸ್ಲಿಂರ ಧಾಳಿಯ ನಂತರ ಮಹಿಳೆಯರ ಸ್ಥಾನಮಾನಗಳು ಕುಸಿದವು ಎಂದೂ ಪ್ರಚಾರ ಮಾಡಲಾಗುತ್ತಿದೆ. ವೇದ/ ಉಪನಿಷತ್ತುಗಳ ಕಾಲದಲ್ಲಿ ಒಬ್ಬ ಗಾರ್ಗಿ, ಒಬ್ಬ ಮೈತ್ರೇಯಿಗಳಿದ್ದರಾದರೂ ಇಡೀ ಸ್ತ್ರೀ ಕುಲವೇ ವಿಮೋಚನೆಗೊಳಗಾಗಿತ್ತೆಂದು ನಂಬಿದರೆ - ದೇಶದಲ್ಲಿ ಹಲವು ವರ್ಷಗಳ ಕಾಲ ಮಹಿಳಾ ಪ್ರಧಾನಿ ಇದ್ದರೆಂಬ ಕಾರಣಕ್ಕೆ ಮಹಿಳೆಯರ ಸಮಸ್ಯೆಗಳೆಲ್ಲ ಪರಿಹಾರವಾಗಿದ್ದಾವೆಂದು ನಂಬಿದಷ್ಟೆ ಹಾಸ್ಯಾಸ್ಪದ. ಅಂಬೇಡ್ಕರ್, ಜ್ಯೋತಿಬಾಪುಲೆ, ರಾಜಾ ರಾಮ ಮೋಹನರಾಯ್‌ಗಳಂತವರ ವಿಚಾರ ಧೋರಣೆಗಳಿಗೆ ತದ್ವಿರುದ್ಧವಾಗಿ ಮಹಿಳೆಯರನ್ನು ತುಚ್ಛವಾಗಿ ನೋಡುವ ‘ಸಂಘ’ಗಳ ಧೋರಣೆಗೆ ಇನ್ನೊಂದು ಉದಾಹರಣೆ “ಬಸೀನ್ ನವಾಬ್” ಎಂಬ ರಾಜನ ಸೊಸೆಯನ್ನು ಯುದ್ಧದಲ್ಲಿ ಲೂಟಿ ಹೊಡೆದು ಇತರ ಸಾಮಗ್ರಿಗಳೊಂದಿಗೆ ಶಿವಾಜಿ ಮಹಾರಾಜನ ಮುಂದೆ ನಿಲ್ಲಿಸಿದಾಗ ಆತ ಗೌರವ ಪೂರ್ವಕವಾಗಿ ಆಕೆಯನ್ನು ಹಿಂದಕ್ಕೆ ಕಳಿಸಿಕೊಟ್ಟಿದ್ದನ್ನು ಟೀಕಿಸುವ ಸಾವರ್‌ಕರ್ - ಅನೇಕ ಹಿಂದೂ ಮಹಿಳೆಯರನ್ನು ಅತ್ಯಾಚಾರಕ್ಕೆ ಗುರಿಪಡಿಸಿದ ಮುಸಲ್ಮಾನರ ವಿರುದ್ಧ ಸೇಡು ತೀರಿಸಿಕೊಳ್ಳಲು ಇದ್ದ ಉತ್ತಮ ಅವಕಾಶವನ್ನು ಶಿವಾಜಿ ಬಿಟ್ಟ ಎಂದು ಪರಿತಪಿಸಿದ ಎಂದು ಹಲವು ಕಡೆ ಉಲ್ಲೇಖಗಳಿವೆ. ಇವು ಇತ್ತೀಚೆಗೆ ಗುಜರಾತಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರಗಳ ಸಂದರ್ಭದಲ್ಲಿ (ಮುಸ್ಲಿಂ ಮಹಿಳೆಯರ ಮೇಲೆ) ಅಥವಾ ಮಧ್ಯ ಪ್ರದೇಶದ ಜಾಬುವಾದಲ್ಲಿ ನನ್‌ಗಳ ಮೇಲೆ ವಿಶ್ವ ಹಿಂದು ಪರಿಷತ್ ರಾಕ್ಷಸರು ಅತ್ಯಾಚಾರ ನಡೆಸಿದ ಸಂದರ್ಭದಲ್ಲಿ ಸಮರ್ಥಿಸಿಕೊಂಡ ಮಾತುಗಳೇ ಆಗಿವೆ. (ನಾನು ನಿಷ್ಠಾವಂತ ‘ಸ್ವಯಂಸೇವಕ’ ನೆಂದು ಕರೆದುಕೊಂಡ ಪ್ರಧಾನಿ ವಾಜಪೇಯಿ ನನ್‌ಗಳ ಮೇಲಿನ ಅತ್ಯಾಚಾರ ಖಂಡಿಸುವ ಬದಲು ಮತಾಂತರ ಕುರಿತು ರಾಷ್ಟ್ರೀಯ ಚರ್ಚೆ ನಡೆಸಬೇಕೆನ್ನುವ ಕರೆ ಕೊಟ್ಟಿದ್ದನ್ನಿಲ್ಲಿ ನೆನಪಿಸಿಕೊಳ್ಳಬೇಕು) ಅಥವಾ ಭಾಂವ್ರಿ ದೇವಿಯ ಮೇಲೆ ನಡೆದ ಅತ್ಯಾಚಾರ ಮತ್ತು ಆ ಪ್ರಕರಣದಲ್ಲಿ ಅಲ್ಲಿನ ಕೋರ್ಟು ನೀಡಿದ



ಕಾವಿ ಪಡೆ

ಸಾಮ್ರಾಜ್ಯಶಾಹಿ ಸೈತಾನ
ಗುಬ್ಬಿಗೂಡುಗಳ ಮೇಲೆ
ಗುಂಡಿನ ಮಳೆಗರೆವಾಗ
ಎಡಬಿಡಂಗಿ ಕಾವಿಪಡೆಗಳು
ಕಣ್ಣುಮುಚ್ಚಿ ಕೊರಳಲ್ಲಿಯ
ರುದ್ರಾಕ್ಷಿ ಮಣಿಗಳನ್ನು
ಒಂದೊಂದಾಗಿ ಎಣಿಸುತ್ತಿದ್ದವು.

- ಕೆ.ಶರೀಫಾ
(ಪಾಂಚಾಲಿ ಸಂಕಲನದಿಂದ)

ಧರ್ಮಾಂತರವೆಲ್ಲಿ?

ದುಗುಡಗಳೇ ಕೃಷ್ಣ
ನಗುವಿನ ಅಲೆಯ ಅಲ್ಲಾ
ಇವರಿಬ್ಬರ ನಡುವೆ ತೂಗುವ
ತೊಟ್ಟಿಲು ನನ್ನೊಳಗಿನ ಉಸಿರು.

ಪ್ರತಿ ಪ್ರೀತಿಯ ಅಂಚಿನ
ನೋವಲಿ ಮಿಡಿವ
ಕಣ್ಣ ಹನಿಯಲಿ ನನ್ನ
ಕೃಷ್ಣನ ತೊಳೆದು
ಕಂಪಿಸುವ ನರಗಳಿಗೆಲ್ಲ
ಯೇ ಅಲ್ಲಾಹುವೇ
ನನ್ನೊಳಗಿನ ನನ್ನ ಮೀರಿ
ಪುನರ್ಜನ್ಮ ನೀಡು.
ಬೇಡುತ್ತೇನೆ...
ಕಿಟಕಿ ತೆಗೆದು ಬೆಳಕಿಗಾಗಿ
ಊಟ್ಟ ಬಟ್ಟೆಯ ಸೆಳೆದು
ಸಗ್ನ ಮಾಡಿದ ಜನರ ಮಧ್ಯೆ
ನನ್ನ ಕೃಷ್ಣ ಅಂತರಂಗದೊಳಗೊಂದು
ಸೀರೆಯ ಗೋಧಾಮನಿಟ್ಟಿದ್ದಾನೆ

ತೊಟ್ಟಿಲಲಿ ಮಲಗಿ
ನಗುವ ನನ್ನ ಅಲ್ಲಾಹು
ಆಕಾಶದ ಹುಡುಗಿ.

ಮಾಸದ ಗಾಯಗಳೆಲ್ಲ
ಮಾಯುವ ಮಂದಹಾಸ ನೀಡಿ
ನಗುತ್ತಾನೆ ತುಂಬಿದ ರೆಪ್ಪೆಯ
ಕಣ್ಣರಳಿಸಿ.

ನಟ್ಟನಡುವಿನ ರಾತ್ರಿ
ಭಯದ ಕಂಪನದಲಿ
ಒಂಟಿ ಮನೆಯಲಿ ಒಬ್ಬಂಟಿಯಾದಾಗ
ದ್ವಾರಪಾಲಕರಾಗಿ ಹರಟೆ
ಹೊಡೆಯುವರಲ್ಲಿ
ನನ್ನ ಕೃಷ್ಣ - ಅಲ್ಲಾಹು.

ರಮಜಾನಿನ ಅಲ್ಲಾಹು
ಗೋಕುಲಾಷ್ಟಮಿಯ ಕೃಷ್ಣ
ಇಬ್ಬರ ನಡುವೆ ಜಗದ
ಹಂಗು ತೊರೆದು ಮೌನದಲಿ
ಚಕ್ಕಂದವಾಡುವ ನನಗೆ
ಧರ್ಮಾಂತರವೆಲ್ಲಿಯೋ


- ಸುಜಾತಾ ಕುಮಟಾ
('ಆಕಾಶದ ಹುಡುಗಿ' ಸಂಕಲನ.)

ತೀರ್ಪನ್ನು ಲಜ್ಜೆಗೆಟ್ಟು ಬೆಂಬಲಿಸಿದ ಬಿ.ಜೆ.ಪಿ. ಮಹಿಳಾ ಮೋರ್ಚಾ ಮತ್ತು ಆ ಕ್ಷೇತ್ರದ ಬಿ.ಜೆ.ಪಿ. ಶಾಸಕ ಬೆಂಬಲಿಸಿದ ರೀತಿ ಕೂಡ ಇವರು ಪ್ರತಿಪಾದಿಸುವ "ಹಿಂದುತ್ವ" ಹೇಗೆ ಮಹಿಳಾ ವಿರೋಧಿ ಎಂಬುದನ್ನು ಸಾಬೀತುಪಡಿಸುತ್ತದೆ. ನೂರಾರು ವರ್ಷಗಳ ಹಿಂದೆ ಹೋರಾಟ ಮಾಡಿ ಸತಿಸಹಗಮನ ಪದ್ಧತಿಯನ್ನು ನಿಷೇಧಿಸಿದ ರಾಜಾರಾಮ್ ಮೋಹನರಾಯ್‌ರವರಂತವರ ಆಶಯಗಳಿಗೆ ವಿರುದ್ಧವಾಗಿ - ಪರಂಪರೆಯ ಹೆಸರಿನಲ್ಲಿ 'ಸತಿ' ಪದ್ಧತಿಯನ್ನು ಪುನರ್ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ. 'ಸತಿ' ದೇವಾಲಯಗಳನ್ನು ಸ್ಥಾಪಿಸಿ, ಮೇಳ, ಜಾತ್ರೆಗಳನ್ನು ನಡೆಸುವ ಮೂಲಕ ವೈಭವೀಕರಿಸಲಾಗುತ್ತದೆ. ಪ್ರತಿನಿತ್ಯ ವರದಕ್ಷಿಣೆ ಪಿಡುಗಿಗೆ ಸಾವಿರಾರು ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದು, ಇದರ ನಿವಾರಣೆಗೆ ಒಂದೆಡೆ ಹೋರಾಟ ಆಂದೋಲನಗಳು ನಡೆಯುತ್ತಿದ್ದರೆ, ಇದೂ ನಮ್ಮ ಪರಂಪರೆಯ ಭಾಗವೆಂದು ವರದಕ್ಷಿಣೆ ಪದ್ಧತಿಯನ್ನೂ ಸಮರ್ಥಿಸಿಕೊಳ್ಳುವ, ಮನುವಾದಿಗಳ ಹಿಂದು ರಾಷ್ಟ್ರ ಅಸ್ತಿತ್ವಕ್ಕೆ ಬಂದರೆ ಮಹಿಳೆಯರ ಪಾಡೇನಾದೀತು ಎಂಬ ಚಿತ್ರಣ ಸಿಗುತ್ತದೆ. ಯಾವುದೇ ಸಂದರ್ಭದಲ್ಲಿಯೂ - ಅದು ಹಿಂದೂ ಮತಾಂಧತೆಯಾಗಲಿ ಇಸ್ಲಾಂ ಮತಾಂಧತೆಯಾಗಲಿ ಅಥವಾ ಇನ್ನಾವುದೇ ಮೂಲಭೂತವಾದವಾಗಲಿ - ಮಹಿಳಾ ಸಮಾನತೆಯ ಪರವಾಗಿ ಅದೆಂದೂ ಇರಲಾರದೆಂಬುದಕ್ಕೆ ಹಲವು ಉದಾಹರಣೆಗಳಿವೆ. ನೆರೆಯ ಅಫ್ಘಾನಿಸ್ತಾನದಲ್ಲಿ - ತಾಲಿಬಾನ್ ಆಡಳಿತ ಅಥವಾ ಈಗ ಅಸ್ತಿತ್ವದಲ್ಲಿರುವ ಸರ್ಕಾರವಾಗಲಿ ಮಹಿಳೆಯರಿಗೆ ವಿಧಿಸಿರುವ ಕಟ್ಟುಪಾಡುಗಳು ಇದಕ್ಕೆ ಜ್ವಲಂತ ನಿದರ್ಶನಗಳಾಗಿವೆ. ಮತ್ತು ಈ ಹಿಂದೆ ವಿಶ್ಲೇಷಿಸಿದಂತೆ ಎರಡು ಧರ್ಮಗಳ/ ಕೋಮಿನ ಮಧ್ಯ ಇಷ್ಟು ಆಳವಾಗಿ ದ್ವೇಷ - ಅಸಹನೆಯನ್ನು ಬೆಳೆಸುವ ಪ್ರಯತ್ನ ಮತ್ತು ಬೆನ್ನಲ್ಲಿಯೇ ಈ ಎಲ್ಲ ಮೂಲಭೂತವಾದ (ದಿ)ಗಳೂ ಸದಾ ಒಂದಕ್ಕೊಂದು ಪೂರಕವಾಗಿಯೇ ಕೆಲಸ ಮಾಡುತ್ತಿರುತ್ತವೆ ಮತ್ತು ಇವೆಲ್ಲವೂ ಮಹಿಳಾ ವಿರೋಧಿಗಳೇ ಆಗಿರುತ್ತವೆ.

ಈ ಹಿನ್ನಲೆಯಲ್ಲಿ -ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎನ್ನುವ ಆಶಯವನ್ನು ಹೊಂದಿ ತನ್ನ ಮೂಲ ರಚನೆಯಲ್ಲಿಯೇ ವ್ಯಕ್ತಿಗಳಿಗೆ ತನ್ನ ಆಯ್ಕೆಯ ಧರ್ಮವನ್ನು ಆಚರಿಸಲು, ಪ್ರಚಾರ ಮಾಡಲು, ಶಿಕ್ಷಣ ಸಂಸ್ಥೆಗಳನ್ನು ಹೊಂದಲು ಹಕ್ಕುಗಳನ್ನು ನೀಡಿದ ಮತ್ತು ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ, ವೈಜ್ಞಾನಿಕ ಮನೋಭಾವ ಹರಡುವ, ಬಹುಸಂಸ್ಕೃತಿಯನ್ನು ರಕ್ಷಿಸುವ ಕರ್ತವ್ಯಗಳನ್ನು ಆದೇಶಿಸಿದ ಸಂವಿಧಾನವನ್ನೇ ಧಿಕ್ಕರಿಸಿ - ಏಕರೂಪ ಸಂಸ್ಕೃತಿಯನ್ನು ಪ್ರತಿಪಾದಿಸುತ್ತ, ಸಮಾಜದ ಬೆಳವಣಿಗೆಯನ್ನು ಅಭಿವೃದ್ಧಿಪಥದಿಂದ ವಿಮುಖಗೊಳಿಸುವ ಕೆಲಸದಲ್ಲಿ ತೀವ್ರವಾಗಿ ತೊಡಗಿಸಿಕೊಂಡಿರುವ ಸಂಘಪರಿವಾರದ ಕುಕೃತ್ಯಗಳಿಗೆ ಕಡಿವಾಣ ಹಾಕಬೇಕೆಂದರೆ- ಕೋಮುವಾದವನ್ನು ಬೇರುಸಹಿತ ಕಿತ್ತೆಸೆಯುವ, ಮಹಿಳಾ ಸಮಾನತೆಗಾಗಿ ನಡೆಯುತ್ತಿರುವ ಹೋರಾಟಗಳು ತೀವ್ರಗೊಳ್ಳಬೇಕು. ಭಾಷೆಯ, ಪ್ರಾಂತೀಯ ಸಮಸ್ಯೆಗಳ ಹೆಸರಿನಲ್ಲಿ ಸಂಘಕಟ್ಟಿ ಮುಖಂಡತ್ವ ವಹಿಸಿಕೊಂಡು "ಹಿಂದುತ್ವ"ದ ಪ್ರತಿಪಾದಕರಾಗಿ ವರ್ತಿಸಿ ಜನರನ್ನು ದಿಕ್ಕೆಡಿಸುವ ಜನರ ಬಗ್ಗೆ, ತಂತ್ರಜ್ಞಾನ ಸಾಮ್ರಾಜ್ಯದ ದೊರೆ / ದೊರೆಸಾನಿಗಳಾಗಿ ಬೆಳೆದು ಬಂದು ಸರ್ಕಾರದ ಮೇಲೆ ಸಂಪೂರ್ಣ ಪ್ರಭಾವ ಬೆಳೆಸಿ ಗ್ರಂಥಾಲಯಗಳ ಮೂಲಕ 'ಚಡ್ಡಿ' ಸಂಸ್ಕೃತಿಗೆ ನೀರೆರೆದು ಘೋಷಿಸುವ ವ್ಯಕ್ತಿಗಳಿಗೆ ಸವಾಲಾಗುವ ಶಕ್ತಿಯಾಗಿ ಜಾತ್ಯಾತೀತ ಚಳುವಳಿ ಬೆಳೆಯುವುದೊಂದೇ ಈ ದೇಶದ ಭವಿಷ್ಯಕ್ಕೆ ಬುನಾದಿಯಾಗಬಲ್ಲುದು.

(ಲೇಖಕಿ ಅ.ಭಾ.ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ)

ಗುಬ್ಬಿ



ಕಥೆ

ಪ್ರತಿಭಾ ನಂದಕುಮಾರ್

ಎಲ್ಲ ನಿಖರ, ಕರಾರುವಾಕ್ಕಾಗಿರಬೇಕು ಸದಾಶಿವನಿಗೆ. ಮನೆಯೆಲ್ಲ ಥಳಥಳ ಬೆಳಗುತ್ತಿರಬೇಕು. ಹುಡುಕಿದರೂ ಪುಡಿ ಧೂಳು ಸಿಗಬಾರದು. ಸಾಮಾನುಗಳಲ್ಲಿ ಪ್ರತಿಯೊಂದಕ್ಕೂ ಒಂದು ಸ್ಥಾನ, ಪ್ರತಿಯೊಂದೂ ಅದರ ಸ್ಥಾನದಲ್ಲಿ ಎನ್ನುವುದು ಅವನ ನಿಯಮ. ಟೆಲಿಫೋನು ಎಡಗಡೆಯಿಂದ ಎತ್ತಿಕೊಳ್ಳುವಂತೆಯೇ ಇಟ್ಟಿರಬೇಕು. ಅಲ್ಲಿಂದ ಒಂದು ಅಡಿ ಅಂತರದಲ್ಲಿ ಕೈ ಕಪಾಟು. ಎಡಬದಿಯ ಮೂಲೆಯಲ್ಲಿ ಪುಟ್ಟ ಪೆನ್‌ಸ್ಟ್ಯಾಂಡ್, ಅದು ಒಂದಿಂಚೂ ಕದಲಿರಬಾರದು. ಇನ್ನು ದಿವಾನ್, ಸೋಫಾ, ಟೀಪಾಯಿ, ಪೇಪರು ಎಲ್ಲ ಗೆರೆ ಹಾಕಿ ಅಳೆದು ಇರಿಸಿದಂತೆ ಅದರದರದೇ ಸ್ಥಾನದಲ್ಲಿರಬೇಕು. ಭಾನುವಾರ ಬೆಳಗ್ಗೆಯಿಡೀ ಮನೆ ಧೂಳು ಹೊಡೆಯುವ ಕೆಲಸ ಸದಾಶಿವನಿಗೆ. ಅದು ಮುಗಿದ ಕೂಡಲೇ, "ಮಾಲಿ; ಕಸಗುಡಿಸಿ ಬಿಡೇ" ಎಂದು ಕೂಗು ಹಾಕಿ ಸ್ನಾನಕ್ಕೆ ಹೊರಡುತ್ತಾನೆ. ಬಚ್ಚಲು ಮನೆಯಲ್ಲಿ ತಿಕ್ಕಿ ತಿಕ್ಕಿ ಮೂರು ಸಲ ಸೋಪು ಹಾಕಿಕೊಂಡು ಜಳಜಳ ಕೆಂಪಗೆ ಹೊಳೆಯುವಂತೆ ಸ್ನಾನ ಮಾಡಿ ಗುನುಗುನಿಸುತ್ತಾ ಹೊರಬಂದಾಗ ಮನೆ ಒರೆಸಿ, ಒಣಗಿಲ್ಲದಿದ್ದರೆ ಆವತ್ತು ಮಾಲಿನಿಯ ತಿಥಿ ಎಂದೇ ಅರ್ಥ. ಒಂದು ಕ್ಷಣ ಧನ್ ಧನ್ ಎಂದು ಕಾಲೊರಸಿಗೆ ಕಾಲು ಬಡಿದು ನೀರಿನ ಹನಿಗಳನ್ನು ಉದುರಿಸುತ್ತಾ ಸುತ್ತ ಸೂಕ್ಷ್ಮವಾಗಿ ಗಮನಿಸುತ್ತಾನೆ ಸದಾಶಿವ. ಯಾವ ಮೂಲೆಯಲ್ಲಾದರೂ ಸ್ವಲ್ಪ ಅಂದರೆ ಸ್ವಲ್ಪ ಕಸ ಕಾಣಿಸಿತೋ ಆಗಲೂ ಮಾಲಿನಿಯ ತಿಥಿ ಎಂದೇ ಅರ್ಥ.

ಇಂತಹ ಮನೆಯಲ್ಲಿ ಹೇಳದೇ ಕೇಳದೇ ಒಂದು ದಿನ ರಾತ್ರಿ ಕಳೆದು ಬೆಳಗಾಗುವಷ್ಟದಲ್ಲಿ ಒಂದು ಪುಟ್ಟ ಗುಬ್ಬಿ ಹೊಕ್ಕಿಬಿಟ್ಟಿತು. ಚಿಪ್ ಚಿಪ್ ಎಂದು ಎರಡವು ಸಲ ಹಾರಾಡಿ ಸದಾಶಿವ ಆಫೀಸಿಗೆ ಹೋಗುವವರೆಗೂ ಸುಮ್ಮನಿದ್ದು ಆಮೇಲೆ ಒಂದೊಂದೇ ಕಡ್ಡಿ ಎತ್ತಿಕೊಂಡು ಬಂದು ಮಾಡಲ್ಲಿ ಗೂಡು ಕಟ್ಟತೊಡಗಿತು. ಮೊದಲು ಒಂದು ಕಡ್ಡಿ, ನಂತರ ಒಂದು ಮಾಡಲ್ಲಿ ಗೂಡು ಕಟ್ಟತೊಡಗಿತು. ಮೊದಲು ಒಂದು ಕಡ್ಡಿ ನಂತರ ಒಂದು ಒಣಹುಲ್ಲು, ಪುಟ್ಟ ಹತ್ತಿ ಚೂರು, ನೈಲಾನ್ ದಾರದ ತುಂಡು ಎಲ್ಲೆಲ್ಲಿಂದಲೋ ಎತ್ತಿಕೊಂಡು ಬಂದು, ಅಬ್ಬಾ ಏನು ಕೌಶಲ್ಯ? ಏನು ಜಾಣತನ?

ಸದಾಶಿವ ಆಫೀಸಿಗೆ ಹೋಗುವವರೆಗೂ ತುದಿಗಾಲಿನಲ್ಲಿ ದಡಬಡಾಯಿಸುವ ಮಾಲಿನಿಗೆ ಆಮೇಲೆ ಒಂದು ಗಂಟೆಯವರೆಗೂ ಆರಾಮ. ಬೇಗ ಕೆಲಸ ಮುಗಿಸಿ, ಅರ್ಧ ಓದಿ ಬಿಟ್ಟಿದ್ದ ಕಥೆ ಪುಸ್ತಕಗಳನ್ನು ಮುಗಿಸುವ ತರಾತುರಿಯಲ್ಲಿ ಗುಬ್ಬಿ ಹೇಗೆ ಅವಳ ಗಮನಕ್ಕೆ ಬರಬೇಕು? ಮಧ್ಯಾಹ್ನ ಊಟದ ಸಮಯದಲ್ಲಿ ಭರ್ರನೆ ತಲೆ ಮೇಲೆ ಹಾರಿತು ಗುಬ್ಬಿ. ಅರರೇ ಎಂದು ನೋಡಿದಳು. ಹೊರಗೆ ಹಾರಿತ್ತು ಅದು. ಗೂಡು ಅವಳಿಗೆ ಕಾಣಿಸಲಿಲ್ಲ. ಆ ಬಗ್ಗೆ ಗಮನ ಕೊಡದೇ ಊಟ, ಪಾತ್ರೆ ತೊಳೆಯುವುದು, ಬಟ್ಟೆ

ಮಡಿಸಿಡುವುದನ್ನು, ತಿಂಡಿ ಮಾಡಿ ಕಾಫಿಗೆ ಹಾಕುವುದನ್ನು ಮುಗಿಸಿ ಮುಖ ತೊಳೆದುಕೊಂಡಳು. ತಲೆಬಾಚಿ ಬೇರೆ ಸೀರೆ ಉಟ್ಟು ಸ್ವಾಗತಕ್ಕೆ ಸಿದ್ಧಳಾದಳು. ಆಗ ಕಾಣಿಸಿತು ನೆಲದ ಮೇಲೆ ಬಿದ್ದಿದ್ದ ಒಂದೆರಡು ಹುಲ್ಲು, ಕಡ್ಡಿ, ತತ್‌ಕ್ಷಣ ಪೊರಕೆ ತಂದು ನೀಟಾಗಿ ಗುಡಿಸಿ ಎತ್ತಿ ಹಾಕಿದಳು. ಐದೂವರೆ ಆಗೇಬಿಟ್ಟಿತು. ಹೊರಗೆ ಸ್ಕೂಟರ್ ಸದ್ದು. ಸದಾಶಿವ ಬಂದ ಒಳಗೆ. ಯಥಾಪ್ರಕಾರ ಮೊದಲು ಬ್ಯಾಗು ತೆಗೆದಿಟ್ಟು, ಅವನು ಕೈಕಾಲು ಮುಖ ತೊಳೆದು ಬಂದು ಒರೆಸಿಕೊಂಡು ಟವಲು ಹರಡಿ ಬಂದು ಕುರ್ಚಿಯಲ್ಲಿ ಕೂರುವವರೆಗೂ ಕಾದು ನಂತರ ಹಗುರಾಗಿ ಮುತ್ತಿಟ್ಟು ತಿಂಡಿ ತಂದುಕೊಟ್ಟಳು. ಕಾಫಿ ಬೆರೆಸಿದಳು- ಪಕ್ಕದ ಕುರ್ಚಿಯಲ್ಲಿ ಕೂತು ಸರದ ಜೊತೆ ಆಟವಾಡಿದಳು. ಪೂರ್ತಿ ಪೇಪರು ಓದಿ, ಪಕ್ಕಕ್ಕಿಟ್ಟ ಸದಾಶಿವ ಮೈ ಮುರಿಯುತ್ತಾ ಕೇಳಿದ " ಏನು ಅಮ್ಮಾವ್ರು....... ಹೊರಗೆ ಹೋಗಿಬರೋಣ" "ಓಹೋ" ಅಂದು ಬೇರೆ ಸೀರೆ ಬದಲಾಯಿಸಿ ಬಂದಳು. ಇಬ್ಬರೂ ಸಿದ್ಧರಾಗಿ, ಬಾಗಿಲಿಗೆ ಬೀಗ ಹಾಕಿ ಹೊರಟರು. ಶಾಪಿಂಗ್ ಕಾಂಪ್ಲೆಕ್ಸಿಗೆ ಬಂದು ಉದ್ದಕ್ಕೂ ಅಂಗಡಿಗಳನ್ನೂ , ತರಹೇವಾರಿ ಜನರನ್ನೂ ನೋಡುತ್ತಾ ಒಂದು ಕಡೆ ನಿಂತು ಬೇಲ್ ಪೂರಿ, ಐಸ್ ಕ್ರೀಂ ತಿಂದರು. ನಾಳೆಗೆ ತರಕಾರಿ, ಹೂ ಖರೀದಿಸಿ ಮನೆಗೆ ಹೊರಟರು.

ಮನೆ ಬಾಗಿಲು ತೆರೆದು ಒಳಗೆ ಕಾಲಿಟ್ಟ ತತ್‌ಕ್ಷಣ ಸದಾಶಿವನ ಕಣ್ಣಿಗೆ ಬಿತ್ತು ನೆಲದ ಮೇಲೆ ಹರಡಿದ್ದ ಕಸಕಡ್ಡಿ ಹುಲ್ಲು. ಇದೆಲ್ಲಿಂದ ಬಂತು ಎಂದು ತಲೆ ಎತ್ತಿ ನೋಡಿದ. ಇವರ ಸಪ್ಪಳಕ್ಕೆ ಬೆದರಿ ಮೇಲೆ ಕೂತು ಪಿಳಿ ಪಿಳಿ ಕಣ್ಣು ಬಿಡುತ್ತಿದ್ದ ಗುಬ್ಬಿ ಈ ಸಲ ಭರ್ರನೆ ಹೊರಗೆ . ಹಾರಿಹೋಯಿತು. ಸರಸರನೆ ಸದಾಶಿವ ಸ್ಟೂಲು ತಂದು ಹತ್ತಿ ನೋಡಿದ. ಮಾಡ ಪೂರ್ತಿ ಕಾಣಿಸಲಿಲ್ಲ. ಇನ್ನೊಂದು ಚಿಕ್ಕ ಸ್ಟೂಲು ತಂದು ಇದರ ಮೇಲೆ ಇಟ್ಟು "ಮಾಲಿ ಸ್ವಲ್ಪ ಹಿಡಕೊಳ್ಳೆ" ಎಂದ. ಮಾಲಿ ಭದ್ರವಾಗಿ ಸ್ಟೂಲು ಹಿಡಿದುಕೊಂಡಾಗ ನಿಧಾನವಾಗಿ ಹತ್ತಿ ನೋಡಿದ. ಪುಟ್ಟ ಹಕ್ಕಿಗೂಡು ಸಿದ್ಧವಾಗಿತ್ತು. ಕಡ್ಡಿ, ಒಣಹುಲ್ಲು, ಹತ್ತಿ,



ದಾರ ಎಲ್ಲ ಸೇರಿ ಪಾಪ ಮುದ್ದಾಗಿ ಕಟ್ಟಿತ್ತು. ಹಾಗಂತ ಬಿಟ್ಟು ಬಿಡಲು ಆಗುತ್ತದೆಯೇ? ಏನು ಕಸ, ಅಬ್ಬಬ್ಬಾ, ತನ್ನ ಮನೆಯಲ್ಲಿ ಗುಬ್ಬಿ ಗೂಡು ಕಟ್ಟುವುದೆಂದರೇನು? ಸರಸರನೆ ಗೂಡನ್ನು ಎಳೆದುಹಾಕಿದ ಸದಾಶಿವ. ಮಾಲಿಗೆ ಹೇಳಿ ಹಳೆ ಬಟ್ಟೆಯೊಂದನ್ನು ತರಿಸಿಕೊಂಡು ಚೆನ್ನಾಗಿ ಮಾಡವನ್ನೆಲ್ಲ ಒರಸಿದ. ಇಳಿದು ಸ್ಟೂಲುಗಳನ್ನು ಯಥಾಸ್ಥಾನಗಳಲ್ಲಿರಿಸಿ ತಾನೇ ಕಸ ಎತ್ತಿ ಹಾಕಿದ. ಗುಡಿಸಿದ. "ಮಾಲೀ ಸ್ವಲ್ಪ ಬಟ್ಟೆ ಒದ್ದೆ ಮಾಡಿಕೊಂಡು ಸಾರಿಸಿಬಿಡೇ" ಎಂದ. ಚಪಾತಿ ಮಾಡಲು ತೊಡಗಿದ್ದ ಮಾಲಿಸಿ ಅದನ್ನು ಹಾಗೇ ಬಿಟ್ಟು ಬಂದು ಒರೆಸಿದಳು. ಕೈ ತೊಳೆದುಕೊಂಡು ಬಂದ ಸದಾಶಿವ ಪ್ಯಾಂಟು ಷರಟು ಬಿಚ್ಚಿ ನೀಟಾಗಿ ಹ್ಯಾಂಗರಿಗೆ ನೇತು ಹಾಕಿ, ಕಪಾಟಿನ ಬಲಬದಿಯ ಮೂಲೆಯಲ್ಲಿ ಮಡಿಸಿ ಇಟ್ಟಿದ್ದ ಲುಂಗಿಯನ್ನು ಎತ್ತಿ ಉಟ್ಟುಕೊಂಡ. ದಡಾರನೆ ಬಡಿದುಕೊಂಡ ಕಕ್ಕಸು ಬಾಗಿಲನ್ನು ಚಿಲುಕ ಹಾಕಿ ಭದ್ರಪಡಿಸಿ ಸೋಪು ಹಾಕಿ ಕೈ ತೊಳೆದುಕೊಂಡ. ಕಾಲಿಗೆ ನೀರು ಸುರಿದುಕೊಂಡು ಮತ್ತೆ ಧನ್ ಧನ್ ಎಂದು ಕಾರ್ಪೆಟ್ಟಿಗೆ ಕಾಲು ಬಡಿದು ನೀರಾರಿಸಿ. ಎತ್ತಿ ಕಟ್ಟಿದ್ದ ಲುಂಗಿ ಬಿಡಿಸುತ್ತಾ ಊಟಕ್ಕೆ ಕೂತ. ನಿಖರವಾಗಿ ಎಲ್ಲಿ ಎಷ್ಟು ಹಾಕಬೇಕೋ ಅಷ್ಟನ್ನು ಹಾಕಿ ಮಾಲಿನಿ ಬಡಿಸಿದಳು.

ಮಾರನೆಯ ದಿನ ಸದಾಶಿವ ಆಫೀಸಿಗೆ ಹೋಗುವ ಮೊದಲು ಒಮ್ಮೆ ತಲೆ ಎತ್ತಿ ಮಾಡದ ಕಡೆಗೆ ನೋಡಿ. "ಸ್ವಲ್ಪ ನೋಡಿಕೋ. ಗುಬ್ಬಚ್ಚಿ ಬಂದರೆ ಓಡಿಸು" ಎಂದು ಹೇಳಿಹೋದ.

ಕೆಲಸ ಮುಗಿಸಿದ ಮಾಲಿನಿ ಓದಲು, ಏನೂ ಪುಸ್ತಕ ಇಲ್ಲದೆ ಸರದೊಡನೆ ಆಟವಾಡುತ್ತಾ ಮಂಚಕ್ಕೆ ಒರಗಿದ್ದಳು. ಇದ್ದಕ್ಕಿದ್ದಂತೆ ಚಿಪ್ ಚಿಪ್ ಶಬ್ದ ಕೇಳಿಸಿತು. ಗುಬ್ಬಿ ಬಂದು ಗೂಡು ಹುಡುಕುತ್ತಿತ್ತು. ದಡಬಡನೆ ಎದ್ದು ಬಂದು ಒಂದು ಕ್ಷಣ ನಿಂತು ನೋಡಿದಳು ಮಾಲಿನಿ. ನಂತರ ಬಾಗಿಲು ತೆರೆದು ಹೊರಗೆ ಹೋಗಿ ಸರಸರನೆ ಒಂದಿಷ್ಟು ಕಡ್ಡಿ. ಒಣಹುಲ್ಲುಗಳನ್ನು ಅಡಿಗೆಮನೆಯಿಂದ ಅಕ್ಕಿ ಬೇಳೆ-ಕಾಳುಗಳನ್ನು ಹಿಡಿಹಿಡಿಯಲ್ಲಿ ತಂದು ಅದರ ಪಕ್ಕದಲ್ಲೇ ಹರವಿದಳು. ಉಸಿರಾಡುವುದನ್ನೂ ಮರೆತು ಗುಬ್ಬಿಗಾಗಿ ಕಾಯುತ್ತಾ, ಸದ್ದಿಲ್ಲದೆ ನಿಂತಳು ಮಾಲಿನಿ.

- ಪ್ರತಿಭಾ ನಂದಕುಮಾರ್

'ಯಾನ' ಸಂಕಲನದಿಂದ

ಶಿಕ್ಷಣ - ಮಹಿಳೆ

ದೇಶದ ಸಂಪತ್ತು ಕೊಳ್ಳೆ ಹೊಡೆಯುತ್ತಿರುವ ಬಿರ್ಲಾ- ಅಂಬಾನಿಗಳಂಥಹ ಶ್ರೀಮಂತರು ಈಗ ಶಿಕ್ಷಣವನ್ನೂ ಖಾಸಗಿಯವರ ಕೈಗೆ ಕೊಡಿ ನಾವು ಹಣ ಮಾಡುತ್ತೇವೆ ಎನ್ನುತ್ತಿದ್ದಾರೆ. ಇದಕ್ಕೆ ತಲೆ ಬಾಗಿರುವ ಸರ್ಕಾರ ಶಿಕ್ಷಣದ ಮೊತ್ತಕ್ಕೆ ಪ್ರತಿವರ್ಷ ಖೋತಾ ಮಾಡುತ್ತಿದೆ. 2001 ಜನಗಣತಿ ಪ್ರಕಾರ ಮಹಿಳೆಯರಲ್ಲಿ ಅಕ್ಷರಸ್ಥರ ಪ್ರಮಾಣ ಶೇ.51ಕ್ಕೆ ತಲುಪಿದ್ದರೂ, ಅತ್ಯಧಿಕ ಅನಕ್ಷರಸ್ಥರನ್ನು ಹೊಂದಿರುವ ಹೆಗ್ಗಳಿಕೆ ಇಂದಿಗೂ ಭಾರತ ದೇಶದ್ದೇ ಆಗಿದೆ. ಮುಸ್ಲಿಂ, ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳೆಯರ ಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಉದಾಹರಣೆಗೆ, ರಾಜಸ್ಥಾನದಲ್ಲಿ ಕೇವಲ ಶೇ.11.6 ರಷ್ಟು ಪರಿಶಿಷ್ಟ ಜಾತಿ ಮಹಿಳೆಯರು ಶಾಲೆಯ ಮುಖ ಕಂಡಿದ್ದಾರೆ. ಮಧ್ಯದಲ್ಲೇ ಶಾಲೆ ಬಿಡುವವರ ಸಂಖ್ಯೆ ಇನ್ನೂ ಅಧಿಕವಾಗಿಯೇ ಇದೆ. 1999 ರ ಒಂದು ಅಧ್ಯಯನದ ಪ್ರಕಾರ ರಾಜಸ್ಥಾನ, ಬಿಹಾರ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಶೇ.86 ರಷ್ಟು ಹುಡುಗರು ಶಾಲೆಗೆ ದಾಖಲಾದರೆ, ಹುಡುಗಿಯರ ದಾಖಲಾತಿ ಪ್ರಮಾಣ ಶೇ. 57 ಮಾತ್ರ. ಇದರಲ್ಲಿ ಶೇ.50 ಹುಡುಗಿಯರು 5ನೇ ತರಗತಿಗೂ ಮೊದಲೇ ಶಾಲೆ ಬಿಡುತ್ತಾರೆ. ಉಳಿದವರಲ್ಲಿ ಶೇ.63 ಹುಡುಗಿಯುವರು 8ನೇ ತರಗತಿ ತಲುಪುವುದಿಲ್ಲ. ಶೇ. 51 ದಲಿತ ಮಕ್ಕಳು ಮತ್ತು ಶೇ. 69 ಪರಿಶಿಷ್ಟ ವರ್ಗದ ಮಕ್ಕಳು ಪೂರ್ಣ ವಿದ್ಯಾಭ್ಯಾಸ ಪಡೆಯುವುದೇ ಇಲ್ಲ. ಇಂತಹ ಆಘಾತಕಾರಿ ಅಂಕಿ-ಅಂಶಗಳಿದ್ದರೂ ನಮ್ಮ ಸರ್ಕಾರ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡುವುದೇ ಇಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ಕರ್ನಾಟಕ ಸರ್ಕಾರ 2000 ಪ್ರಾಥಮಿಕ ಶಾಲೆಗಳನ್ನು ಮೂಲಭೂತ ಹಕ್ಕನ್ನಾಗಿ ಮಾಡುವುದೇ ಇಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ಕರ್ನಾಟಕ ಸರ್ಕಾರ 2000 ಪ್ರಾಥಮಿಕ ಶಾಲೆಗಳನ್ನು ಮುಚ್ಚುವುದಾಗಿ ಹೇಳುತ್ತಿದೆ. ಮಹಾರಾಷ್ಟ್ರ ಸರ್ಕಾರ ಇನ್ನು ಮುಂದೆ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶಾಲೆ ತೆರೆಯಲು ಹಣ ಇಲ್ಲ ಎನ್ನುತ್ತಿದೆ. ಸರ್ಕಾರಗಳ ಇಂತಹ ನೀತಿಗಳು ಇದುವರೆಗೆ ಆಗಿರುವ ಅಲ್ಪ ಸ್ವಲ್ಪ ಸಾಧನೆಯನ್ನೂ ಮತ್ತೆ ಮುಳುಗಿಸಿಬಿಡುತ್ತದೆ.

ಮಾತಾಡು ಗೆಳತಿ



ಗೆಳತಿ
ನಾನೆಷ್ಟು ಸಾರಿ ಎಡತಾಕಿಲ್ಲ
ಈ ಬೀದಿಯಿಂದ ಆ ಬೀದಿಗೆ
ಕೇರಿಯಿಂದ ಕೇರಿಗೆ
ಊರಿಂದ ಊರಿಗೆ
ಆದರೆ ನೀನೇಕೆ ನನ್ನೊಂದಿಗೆ
ಮಾತಾಡಲಿಲ್ಲ....?
ಗಿಲ್ಲಿ ದಾಂಡು ಆಡುವಾಗ
ಮನಬಿಚ್ಚಿ ಮಾತಾಡಿದವಳು
ಕಬ್ಬಡಿ ಖೋಖೋದಲ್ಲಿ
ನನ್ನ ಹಠ ಹಿಡಿದು ಸೋಲಿಸಿದವಳು
ಆ ಬಾಲ್ಯದ ಕಾಲದಲ್ಲಿ
ಮನಸ್ಸೆಷ್ಟು ನಿರ್ಮಲವಿತ್ತು....
ಹರಿವ ನೀರಂತೆ.....

ನಾನು ನಿನ್ನೊಂದಿಗೆ
ಮಾತಾಡಬೇಕೆಂದಾಗಲೆಲ್ಲ
ನೀನು ಬಂಗಲೆ ಬಂಗಾರದ ಮಾತಾಡಿದೆ
ಸೀರೆ ಸಾಮಾನುಗಳ ಪುರಾಣ ಬಿಚ್ಚಿದೆ
ಟೀವಿ ಸೆಟ್ಟಿನ ಮೇಲೆ ಪ್ಲಾಸ್ಟಿಕ್
ಹೂದಾನಿಯನ್ನಿಟ್ಟು
ನೆಲಕ್ಕೆ ಕಣ್ಣರಳಿಸಿದೆ
ಏಕೆಂದರೆ ಕಣ್ಣುಗಳು ನಿಜವನ್ನು
ನುಡಿಯುತ್ತವೆ
ನೀನು ನನ್ನೊಂದಿಗೆ ಮಾತಾಡಲೇ ಇಲ್ಲ
ಯಾವ ಮೋಹದ ಮುರಳಿಗೆ
ನೀನು ಮರುಳಾದೆ ಹೇಳು
ಯಾವ ಭ್ರಮೆಯ ಬೃಂಗ
ನಿನ್ನ ಸೆಳೆದಿದೆ ಹೇಳು

ಸಾವು ನಿನ್ನ ತಲೆ ಸವರುವಾಗಲೂ
ನಿನ್ನನ್ನು ಸುಟ್ಟ ಕೈಗಳನು ರಕ್ಷಿಸಿದೆ ನೀನು
ಕೊಲೆಯಾದ ನಿನ್ನ ಹೆಣ
ನೇಣು ಕುಣಿಕೆಯಲ್ಲಿತ್ತು
ಆತ್ಮಹತ್ಯೆಯ ಪಟ್ಟ ಹೊತ್ತು
ವೈದ್ಯರ ಕಿಸೆಯಲ್ಲಿ
ಖಾಕಿಗಳ ಕೈಯಲ್ಲಿ
ನೋಟುಗಳು ನಗುತ್ತಿದ್ದವು
"ಸುಳ್ಳು" ಫೈಲುಗಳಲ್ಲಿ ರಾಜ್ಯವಾಳುತ್ತಿತ್ತು
ನೀನು ಬದುಕಿದ್ದಾಗ ಮಾತಾಡಲಾರದಕೆ

ಗೆಳತಿ
ನಿನ್ನ ಮೌನ ನಿನ್ನ ಹಿಂದೆ ಮಾತು
ಬರಲಾರದು
ಇನ್ನಷ್ಟು ಮತ್ತಷ್ಟು ಮೌನಗಳಿಗೆ
ಹಾದಿಯಾಗುತ್ತದೆ
ಕಿಟಕಿಯಾಚೆಯ
ಬಾಗಿಲು- ಗೋಡೆಯಾಚೆಯ
ಅನೇಕ ಮೌನದ ನೋವುಗಳಿಗೆ ಸಾವು
ತರುತ್ತದೆ ......


ನೀನಾದರೂ ಮಾತಾಡು ಗೆಳತಿ
ಹಸಿರು ತೋರಣದ ಹಂದರದಲ್ಲಿ
ಮಾತಾಡೆಂದಾಗ ನಾಚಿಕೊಂಡೆ
ಬಸುರಿ ಬಯಕೆಯ ಗುಂಗಿನಲ್ಲಿರುವ ನಿನಗೆ
ಮಾತಾಡೆಂದಾಗ ನಕ್ಕುಬಿಟ್ಟೆ
ನಿನ್ನ ಬದುಕಿನ ಸೂರು
ಕುಸಿಯುವಾಗಲಾದರೂ
ಮಾತಾಡೆಂದಾಗ ಅಸಹಾಯಕಳಾಗಿ ಅತ್ತುಬಿಟ್ಟೆ
ನೀನೇಕೆ ಮಾತಾಡಲಿಲ್ಲ ಗೆಳತಿ
ಯಾವ ಭಾಷೆಯಲಿ ಮಾತಾಡಿಸಲಿ ನಿನ್ನ
ಯಾವ ಕ್ರೂರ ಪ್ರಭುತ್ವ
ನಿನ್ನ ಮನಸ್ಸಾಳುತ್ತಿದೆ ಹೇಳು ಗೆಳತಿ
ಒಮ್ಮೆಯಾದರೂ ಹೇಳಿಬಿಡು ಗೆಳತಿ


ಮಾತುಗಳನ್ನು ಮರೆತವರಿಗೆ
ಮಾತುಗಳನ್ನು ಮಾರಿಕೊಂಡವರಿಗೆಲ್ಲಿಯ
ಬದುಕು
ಮನುಷ್ಯರಂತೆ ಬದುಕಬೇಕೆಂದಲ್ಲಿ
ಮನುಷ್ಯರೊಂದಿಗೆ ಮಾತಾಡು ಗೆಳತಿ
ಮನುಷ್ಯರಂತೆ ಮಾತಾಡು
ಗೆಳತಿ ಕಾಯುತ್ತೇನೆ ಇಲ್ಲೇ ಕುಳಿತು
ಎಲೆ ಉದುರಿದ ಗಿಡದ ಕೆಳಗೆ ಉರಿ ಬಿಸಿಲಿನ
ಝಳದ ಬಳಿಗೆ

ನೀಲಾ.ಕೆ

ಇರಾಕ್ ಮೇಲಿನ

ಅಮೆರಿಕಾದ ಯುದ್ಧ ನಿಲ್ಲಿಸಿ





ಯುದ್ಧ ಬೇಡ ಶಾಂತಿ ಬೇಕು

ಕಾಣುವ ಕೆಲಸ ಕಾಣದ ಮಹಿಳೆ









ಖ್ಯಾತ ಪತ್ರಕರ್ತ ಪಿ.ಸಾಯಿನಾಥ್ ರವರ ಚಿತ್ರಗಳು

PRB DECR 319-79/79 AIKYARANGA WEEKLY
Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು

ಸಂಪಾದಕರು: ಎಸ್.ವೈ.ಗುರುಶಾಂತ್

ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ,
ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH